ಶನಿವಾರ, ಏಪ್ರಿಲ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 114 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚರ್ಚೆ: ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕೇ? 9

ಸರ್ಕಾರದಿಂದ ಜನರ ಕೊಲೆ: ಸಿದ್ದರಾಮಯ್ಯ 6

ರೆಮ್‌ಡಿಸಿವಿರ್ 'ರಾಮಬಾಣ' ಅಲ್ಲ 6

ಸೆನ್ಸೆಕ್ಸ್	ನಿಫ್ಟಿ	₹/$
47,878 ▼	14,341 ▼	75.01 ▼

ಆಮ್ಲಜನಕದ ಭಾರಿ ಕೊರತೆ: ಆರೋಗ್ಯ ಬಿಕ್ಕಟ್ಟಿನತ್ತ ಕರ್ನಾಟಕ

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ರೋಗಿಗಳ ಸಂಖ್ಯೆ ಶರವೇಗದಲ್ಲಿ ಹೆಚ್ಚುತ್ತಿರುವಂತೆಯೇ ರಾಜ್ಯ ಆಮ್ಲಜನಕದ ಭಾರಿ ಕೊರತೆಯ ಬಿಕ್ಕಟ್ಟಿನತ್ತ ಸಾಗಲಾರಂಭಿಸಿದೆ.

ಸದ್ಯ ರಾಜ್ಯಕ್ಕೆ ಸುಮಾರು 500 ಟನ್‌ಗಳಷ್ಟು ಆಮ್ಲಜನಕ ಪೂರೈಕೆಯಾಗುತ್ತಿದೆ. ತಿಂಗಳಾಂತ್ಯದೊಳಗೆ ಇನ್ನೂ 1,000 ಟನ್ ಆಮ್ಲಜನಕ ದೊರೆಯದಿದ್ದರೆ ಕೋವಿಡ್ ರೋಗಿಗಳ ಚಿಕಿತ್ಸಾ ವ್ಯವಸ್ಥೆಯೇ ಬುಡಮೇಲಾಗುವ ಸನ್ನಿವೇಶ ಎದುರಾಗಿದೆ.

ವೆಂಟಿಲೇಟರ್ ಮತ್ತು ಆಮ್ಲಜನಕದ ಪೂರೈಕೆ ವ್ಯವಸ್ಥೆಯುಳ್ಳ ಐಸಿಯು ಹಾಸಿಗೆಗಳ ಕೊರತೆ ತೀವ್ರವಾಗಿ ಕಾಡುತ್ತಿದೆ. ಕೊಳವೆ ಮೂಲಕ ಆಮ್ಲಜನಕ ಪೂರೈಸಿ ಕೋವಿಡ್ ರೋಗಿಗಳನ್ನು ಸಾವಿನ ದವಡೆಯಿಂದ ಪಾರು ಮಾಡುವ ಅವಕಾಶವಿದ್ದರೂ, ಆಮ್ಲಜನಕದ ಕೊರತೆಯಿಂದ ವೈದ್ಯರು ಕೈ ಚೆಲ್ಲಿ ಕೂರುವಂತಾಗಿದೆ.

ಈಗ ನಿತ್ಯವೂ ಸುಮಾರು 25,000ದಷ್ಟು ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಈಗಲೇ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಯವರು, ರೋಗಿಗಳ ಸಂಬಂಧಿಕರು ಆಮ್ಲಜನಕದ ಸಿಲಿಂಡರ್‌ಗಾಗಿ ಬೀದಿ ಬೀದಿ ಅಲೆಯುತ್ತಿದ್ದಾರೆ. ಆಮ್ಲಜನಕ ಸಂಗ್ರಹಣೆ ಮತ್ತು ಪೂರೈಕೆ ಘಟಕಗಳನ್ನು ಹೊಂದಿರದ ಸಣ್ಣ ಆಸ್ಪತ್ರೆಗಳ ಪರಿಸ್ಥಿತಿ ಶೋಚನೀಯವಾಗಿದೆ. ಕೆಲವೆಡೆ ರೋಗಿಗಳನ್ನು ದಾಖಲು ಮಾಡಿಕೊಳ್ಳುವುದಕ್ಕೂ ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮೇ ಮೊದಲ ವಾರದಲ್ಲಿ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗಲಿದ್ದು, ಮೇ ಮಧ್ಯ ಭಾಗದಲ್ಲಿ ನಾಲ್ಕು ಪಟ್ಟು ಹೆಚ್ಚಾಗಬಹುದು ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಂದಾಜಿಸಿದೆ. ಮುಂದಿನ 20 ದಿನಗಳಲ್ಲಿ ಬರಬಹುದಾದ ಆಮ್ಲಜನಕದ ಬೇಡಿಕೆ ಸರ್ಕಾರವನ್ನೇ ಕಂಗೆಡಿಸಿದೆ.

ಹಂಚಿಕೆಯಲ್ಲಿ ವ್ಯತ್ಯಾಸ: ರಾಜ್ಯದಲ್ಲಿ ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಹೆಚ್ಚಿನ ಪ್ರಮಾಣದ ವೈದ್ಯಕೀಯ ಬಳಕೆಯ ಆಮ್ಲಜನಕವನ್ನು ಉತ್ಪಾದಿಸಲಾಗುತ್ತಿದೆ. ಒಟ್ಟಾರೆಯಾಗಿ ನಿತ್ಯವೂ ರಾಜ್ಯದಲ್ಲಿ 878 ಟನ್ ವೈದ್ಯಕೀಯ ಬಳಕೆಯ ಗುಣಮಟ್ಟದ ಆಮ್ಲಜನಕ ಉತ್ಪಾದನೆ ಮಾಡಲಾಗುತ್ತಿದೆ. ಅದರಲ್ಲಿ 300 ಟನ್ ಮಾತ್ರ ರಾಜ್ಯಕ್ಕೆ ಲಭಿಸುತ್ತಿದೆ. ಉಳಿದದ್ದು ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿದ್ದು, ಸಮಸ್ಯೆ ಬಿಗಡಾಯಿಸಲು ಮೂಲ ಕಾರಣ ಎನ್ನುತ್ತವೆ ಮೂಲಗಳು.

ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಕೋವಿಡ್ ಎರಡನೇ ಅಲೆ ಕರ್ನಾಟಕಕ್ಕಿಂತ ಬೇಗ ಸ್ಫೋಟಗೊಂಡಿತ್ತು. ಆಗ, ಈ ಎರಡೂ ರಾಜ್ಯಗಳಿಗೆ ಇಲ್ಲಿ ಉತ್ಪಾದನೆಯಾದ ಆಮ್ಲಜನಕವನ್ನು ಹಂಚಿಕೆ ಮಾಡಲಾಗಿದೆ. ಸದ್ಯ ಆಮ್ಲಜನಕ ಉತ್ಪಾದನೆ ಮತ್ತು ಹಂಚಿಕೆಯ ಜಾಲವನ್ನು ಕೇಂದ್ರ ಸರ್ಕಾರ ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದು, ಹೆಚ್ಚಿನ ಪಾಲನ್ನು ಪಡೆಯಲು ಸಾಧ್ಯವಾಗದ ಸ್ಥಿತಿಯಲ್ಲಿ ರಾಜ್ಯ ಇದೆ ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

'ಆಮ್ಲಜನಕ ಪೂರೈಕೆ ಕೇಂದ್ರ ತೆರೆಯಿರಿ'

'ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ 10,100 ಹಾಸಿಗೆಗಳ ಆರೈಕೆ ಕೇಂದ್ರ ತೆರೆದಿತ್ತು. ಅದೇ ರೀತಿ ಈಗಲೂ ತೆರೆಯಬೇಕು . ಅಲ್ಲಿ ಆಮ್ಲಜನಕದ ಕಂಟೇನರ್ ಅಳವಡಿಸಿ ಕೊಳವೆ ಮೂಲಕ ರೋಗಿಗಳಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು' ಎಂದು ಒತ್ತಾಯಿಸುತ್ತಾರೆ ಡಾ.ಎಚ್. ವಿ. ವಾಸು. ಆಮ್ಲಜನಕ ಪೂರೈಕೆಯ ಸೌಲಭ್ಯವುಳ್ಳ ಹಾಸಿಗೆಗಳನ್ನೂ ಹೆಚ್ಚಿಸಬೇಕಿದೆ. ಈ ಕುರಿತು ಮುಖ್ಯಮಂತ್ರಿ ಅಥವಾ ಆರೋಗ್ಯ ಸಚಿವರು ನಿತ್ಯವೂ ಮಾಹಿತಿ ಹಂಚಿಕೊಳ್ಳುವ ವ್ಯವಸ್ಥೆ ಆಗಬೇಕು ಎನ್ನುತ್ತಾರೆ ಅವರು.

'ವಿತರಣೆಯಲ್ಲಿ ಸಮಸ್ಯೆಗಳಿವೆ'

'ಗುರುವಾರ ರಾಜ್ಯಕ್ಕೆ 449 ಟನ್ ಆಮ್ಲಜನಕ ಪೂರೈಕೆಯಾಗಿದೆ. ಅದು ಬೇಡಿಕೆಗೆ ಸಮನಾದ ಪ್ರಮಾಣ. ಮುಂದಿನ 20 ದಿನಗಳಲ್ಲಿ ಹೆಚ್ಚುವರಿಯಾಗಿ 1,000 ಟನ್ ಆಮ್ಲಜನಕ ಬೇಕಿದೆ. ಅದನ್ನು ಹೊಂದಿಸುವುದೇ ನಮ್ಮ ಮುಂದಿರುವ ಸವಾಲು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ತಿಳಿಸಿದರು.

ಆಮ್ಲಜನಕದ ಕೊರತೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ದೊಡ್ಡ ಆಸ್ಪತ್ರೆಗಳಿಗೆ ಕಂಟೇನರ್ ಮೂಲಕ ಆಮ್ಲಜನಕ ಪೂರೈಸಲಾಗುತ್ತಿದೆ. ಅಲ್ಲಿ ಸಮಸ್ಯೆ ಇಲ್ಲ. ಸಣ್ಣ ಆಸ್ಪತ್ರೆಗಳಿಗೆ ಸಿಲಿಂಡರ್ ಮೂಲಕ ಒದಗಿಸುವಲ್ಲಿ ಸಮಸ್ಯೆ ಇದೆ. ಅದನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಮೇ, ಜೂನ್‌ನಲ್ಲಿ ಬಡವರಿಗೆ ಉಚಿತ ಆಹಾರ ಧಾನ್ಯ



ನವದೆಹಲಿ (ಪಿಟಿಐ): 'ಕೋವಿಡ್ ಎರಡನೇ ಅಲೆಯಲ್ಲಿ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಬಡವರಿಗೆ ಮೇ ಮತ್ತು ಜೂನ್‌ನಲ್ಲಿ 'ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ' ಅಡಿ ಉಚಿತ ಆಹಾರ ಧಾನ್ಯ ವಿತರಿಸುವುದನ್ನು ಪುನರಾರಂಭಿಸಲಾಗುವುದು' ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ.

'ಒಟ್ಟು 80 ಕೋಟಿ ಫಲಾನುಭವಿಗಳಿಗೆ ಪ್ರತಿ ತಿಂಗಳು 5 ಕೆ.ಜಿ ಆಹಾರ ಧಾನ್ಯ ವಿತರಿಸಲಾಗುವುದು. ಈ ಬಾರಿ ಯೋಜನೆಯಡಿ ದ್ವಿದಳ ಧಾನ್ಯಗಳನ್ನು ವಿತರಿಸುವುದಿಲ್ಲ' ಎಂದು ಕೇಂದ್ರ ಆಹಾರ ಮತ್ತು ಸಾರ್ವಜನಿಕ ಪಡಿತರ ವಿತರಣಾ ಸಚಿವಾಲಯದ ಕಾರ್ಯದರ್ಶಿ ಸುಧಾಂಶು ಪಾಂಡೆ ತಿಳಿಸಿದ್ದಾರೆ.

'80 ಕೋಟಿ ಜನರಿಗೆ ಎರಡು ತಿಂಗಳು ಕಾಲ ಉಚಿತ ಆಹಾರ ಧಾನ್ಯ ವಿತರಣೆಗೆ ಸುಮಾರು 80 ಲಕ್ಷ ಟನ್ ಆಹಾರ ಧಾನ್ಯ ಬೇಕಾಗುತ್ತದೆ. ₹ 26,000 ಕೋಟಿ ವೆಚ್ಚವಾಗಲಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ಒಳ ಪುಟಗಳು



ಸಂಚಾರಿ ಆಮ್ಲಜನಕ ಘಟಕ ಖರೀದಿಗೆ ಸಿದ್ಧತೆ 11

ಲಾಕ್‌ಡೌನ್‌ನಿಂದ ನಷ್ಟ, ಲಸಿಕೆಯಿಂದ ಲಾಭ 10

ರಿಲಯನ್ಸ್ ತೆಕ್ಕೆಗೆ ಸ್ಟೋಕ್ ಪಾರ್ಕ್ 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ದೆಹಲಿಯ ಗಂಗಾರಾಮ್ ಆಸ್ಪತ್ರೆಯ 60 ರೋಗಿಗಳ ಸ್ಥಿತಿ ಚಿಂತಾಜನಕ

ಆಮ್ಲಜನಕ ಕೊರತೆ: 30 ಸಾವು

ನವದೆಹಲಿ (ಪಿಟಿಐ): ವೈದ್ಯಕೀಯ ಆಮ್ಲಜನಕ ಕೊರತೆಯು ಭಾರಿ ದುರಂತಗಳಿಗೆ ಕಾರಣವಾಗಿದೆ. ಆಮ್ಲಜನಕ ಕೊರತೆಯಿಂದಾಗಿ ದೇಶದ ಎರಡು ಆಸ್ಪತ್ರೆಗಳಲ್ಲಿ 30 ಮಂದಿ ಶುಕ್ರವಾರ ಮೃತಪಟ್ಟಿದ್ದಾರೆ.

ದೆಹಲಿಯ ಶ್ರೀ ಗಂಗಾರಾಮ್ ಆಸ್ಪತ್ರೆಯಲ್ಲಿ (ಎಸ್‌ಜಿಆರ್‌ಎಚ್) ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ 25 ಮಂದಿ ಆಮ್ಲಜನಕದ ಕೊರತೆಯ ಕಾರಣದಿಂದ ಸತ್ತಿದ್ದಾರೆ. ಇನ್ನೂ 60 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಬಲ್ಪುರದ ಆಸ್ಪತ್ರೆಯೊಂದರಲ್ಲಿ ಐವರು ಮರಣ ಹೊಂದಿದ್ದಾರೆ.

ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಯ ಅಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಬೇಕಾದಷ್ಟು ಒತ್ತಡದಲ್ಲಿ ಆಮ್ಲಜನಕ ಸರಬರಾಜು ಆಗದಿರುವುದು ಹಲವು ರೋಗಿಗಳ ಸಾವಿಗೆ ಕಾರಣವಾಗಿರುವ ಸಾಧ್ಯತೆ ಇದೆ. ಬೆಳಿಗ್ಗೆ 9.20ಕ್ಕೆ ಆಸ್ಪತ್ರೆಗೆ ಆಮ್ಲಜನಕದ ಒಂದು ಟ್ಯಾಂಕರ್ ಬಂದಿದೆ. ಆದರೆ, ಅದು ಐದು ಗಂಟೆಗಳಷ್ಟು ಕಾಲ ರೋಗಿಗಳಿಗೆ ನೀಡಲು ಸಾಕಾಗಬಹುದು ಅಷ್ಟೇ ಎಂದು ಮೂಲಗಳು ಹೇಳಿವೆ.

ಈ ಆಸ್ಪತ್ರೆಯಲ್ಲಿ ಸುಮಾರು 500 ಕೋವಿಡ್ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ಸುಮಾರು 150 ರೋಗಿಗಳಿಗೆ ಹೆಚ್ಚು ಒತ್ತಡದ ಆಮ್ಲಜನಕ ನೀಡುವ ಅಗತ್ಯವಿದೆ. 'ನಮ್ಮಲ್ಲಿ ಐದು ಗಂಟೆಗಳಿಗೆ ಸಾಕಾಗುವಷ್ಟು ಆಮ್ಲಜನಕ ಮಾತ್ರ ಇದೆ. ತುರ್ತಾಗಿ ಆಮ್ಲಜನಕದ ಸರಬರಾಜು ವ್ಯವಸ್ಥೆ ಮಾಡಬೇಕು' ಎಂದು ಆಸ್ಪತ್ರೆಯ ಅಧಿಕಾರಿಗಳು ಗುರುವಾರ ರಾತ್ರಿ 8 ಗಂಟೆಗೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದರು. ರಾತ್ರಿ 12.30ರ ಸುಮಾರಿಗೆ ಸ್ವಲ್ಪ ಆಮ್ಲಜನಕವನ್ನು ಆಸ್ಪತ್ರೆಗೆ ಕಳುಹಿಸಲಾಗಿತ್ತು. ಆದರೆ ಇನ್ನಷ್ಟು ಆಮ್ಲಜನಕದ ಅಗತ್ಯ ಇತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ವಿಪರೀತವಾಗಿರುವುದರಿಂದ ದೆಹಲಿಯ ಎಲ್ಲಾ ಆಸ್ಪತ್ರೆಗಳು ಆಮ್ಲಜನಕದ ಸಂಗ್ರಹ ಪ್ರಮಾಣವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿವೆ. ನಾವು ಬಯಸುವುದು ಆಮ್ಲಜನಕದ ತಡೆರಹಿತ ಮತ್ತು ಸಕಾಲಿಕ ಸರಬರಾಜು ಮಾತ್ರ' ಎಂದು ಗಂಗಾರಾಮ್ ಆಸ್ಪತ್ರೆಯ ಅಧ್ಯಕ್ಷ ಡಾ. ಡಿ.ಎಸ್. ರಾಣಾ ಹೇಳಿದ್ದಾರೆ.

'ವೆಂಟಿಲೇಟರ್ ಹಾಗೂ ಬಿಪ್ಯಾಪ್ (BiPAP) ಯಂತ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. 60 ಮಂದಿ ಗಂಭೀರ ರೋಗಿಗಳ ಸ್ಥಿತಿ ಅಪಾಯದಲ್ಲಿದೆ. ದೊಡ್ಡ ದುರಂತ ಸಂಭವಿಸುವ ಸಾಧ್ಯತೆ ಇದೆ' ಎಂದು ಆಸ್ಪತ್ರೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ದೆಹಲಿಯ ಎಲ್ಲಾ ಆಸ್ಪತ್ರೆಗಳ ಹೊರಗೆ ಕೋವಿಡ್ ರೋಗಿಗಳು ಮತ್ತು ಅವರ ಸಂಬಂಧಿಕರು ಬೆಡ್‌ಗಾಗಿ ಸಾಲುಗಟ್ಟಿ ನಿಂತಿದ್ದಾರೆ. 'ಆಮ್ಲಜನಕದ ಸಮಸ್ಯೆ ನಿವಾರಣೆಯಾದರೆ ಹಾಸಿಗೆಗಳ ಸಂಖ್ಯೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು' ಎಂದು ದೆಹಲಿಯ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಹೇಳಿದ್ದಾರೆ.



ಉತ್ತರ ಪ್ರದೇಶದ ಗಾಜಿಯಾಬಾದ್‌ನ ಇಂದಿರಾಪುರಂನಲ್ಲಿ ಕೋವಿಡ್ ರೋಗಿಯೊಬ್ಬರಿಗೆ ಸ್ಥಳೀಯ ಸಿಖ್ ಸಂಘಟನೆಯೊಂದು ಶುಕ್ರವಾರ ಕಾರಿನಲ್ಲೇ ಆಮ್ಲಜನಕದ ವ್ಯವಸ್ಥೆ ಮಾಡಿಕೊಟ್ಟಿತು –ಪಿಟಿಐ ಚಿತ್ರ

ಜಬಲ್ಪುರ: ಐವರು ಬಲಿ

ಜಬಲ್ಪುರ (ಪಿಟಿಐ): ಮಧ್ಯಪ್ರದೇಶದ ಜಬಲ್ಪುರದ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಐವರು ಕೋವಿಡ್ ರೋಗಿಗಳು ವೈದ್ಯಕೀಯ ಆಮ್ಲಜನಕದ ಕೊರತೆಯಿಂದ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ಮಧ್ಯರಾತ್ರಿಯ ಬಳಿಕ ಈ ಸಾವು ಸಂಭವಿಸಿದೆ. ಗಸ್ತು ತಿರುಗುತ್ತಿದ್ದ ಪೊಲೀಸರು ಮೃತರ ಸಂಬಂಧಿಕರು ಸೃಷ್ಟಿಸಿದ ಗದ್ದಲದಿಂದಾಗಿ ಆಸ್ಪತ್ರೆಯತ್ತ ಬಂದಿದ್ದಾರೆ. 'ಆಮ್ಲಜನಕ ಖಾಲಿಯಾದುದೇ ಸಾವಿಗೆ ಕಾರಣ' ಎಂದು ಸಂಬಂಧಿಕರು ಪೊಲೀಸರಿಗೆ ದೂರು ನೀಡಿದ್ದಾರೆ.

ಗುರುವಾರ ರಾತ್ರಿ ಆಸ್ಪತ್ರೆಗೆ ಆಮ್ಲಜನಕದ ಹತ್ತು ಸಿಲಿಂಡರ್ ಪೂರೈಕೆ ಆಗಬೇಕಿತ್ತು. ಆದರೆ ಅದನ್ನು ಸಾಗಿಸುತ್ತಿದ್ದ ವಾಹನದಲ್ಲಿ ಸಮಸ್ಯೆ ಉಂಟಾಗಿತ್ತು. ಬಳಿಕ ಪೊಲೀಸರೇ ಆ ವಾಹನ ಇದ್ದಲ್ಲಿಗೆ ಧಾವಿಸಿ, ಸಿಲಿಂಡರ್‌ಗಳನ್ನು ತಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

12,74,959 ▲	ಒಟ್ಟು ಸೋಂಕಿತರು (12,47,997 ನಿನ್ನೆಯ ವಿವರ)
2,14,311 ▲	ಸಕ್ರಿಯ ಪ್ರಕರಣಗಳು
10,46,554 ▲	ಗುಣಮುಖರಾದವರು
14,075 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	26,962	▲
ಗುಣಮುಖ	8,697	▼
ಸಾವು	190	▼

1128 ಐಸಿಯುನಲ್ಲಿ ಇರುವವರು ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಐಸಿಯುನಲ್ಲಿ ಬೆಂಕಿ: 15 ರೋಗಿಗಳ ಸಾವು

ವಿರಾರ್ (ಪಿಟಿಐ): ಮಹಾರಾಷ್ಟ್ರದ ಇನ್ನೊಂದು ಆಸ್ಪತ್ರೆಯಲ್ಲಿ ಶುಕ್ರವಾರ ಅಗ್ನಿ ಅನಾಹುತ ಸಂಭವಿಸಿದೆ. ಪಾಲ್ಘರ್ ಜಿಲ್ಲೆಯ ವಿರಾರ್‌ನ ಕೋವಿಡ್ ಆಸ್ಪತ್ರೆಯಲ್ಲಿ ಅವಘಡ ಸಂಭವಿಸಿದ್ದು, ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ 15 ರೋಗಿಗಳು ಮೃತಪಟ್ಟಿದ್ದಾರೆ.

ವಿರಾರ್‌ನ ತಿರುಪತಿನಗರದಲ್ಲಿರುವ 'ವಿಜಯವಲ್ಲಭ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ'ದ ತೀವ್ರನಿಗಾ ಘಟಕದಲ್ಲಿ ನಸುಕಿನ 3.15ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದವರು 5.30ರ ಸುಮಾರಿಗೆ ಬೆಂಕಿಯನ್ನು ನಂದಿಸಿದ್ದಾರೆ. ಆಸ್ಪತ್ರೆಯ ಎರಡನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಹವಾನಿಯಂತ್ರಣ ವ್ಯವಸ್ಥೆಯಲ್ಲಿ ಸಮಸ್ಯೆಯುಂಟಾಗಿ ಬೆಂಕಿ ಹತ್ತಿಕೊಂಡಿರಬಹುದು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಶಂಕಿಸಿದ್ದಾರೆ. ಘಟನೆ ಸಂಭವಿಸಿದಾಗ ಆಸ್ಪತ್ರೆಯಲ್ಲಿ 90 ಮಂದಿ ರೋಗಿಗಳಿದ್ದರು. ಅವರಲ್ಲಿ 18 ಮಂದಿ ತೀವ್ರ ನಿಗಾ ಘಟಕದಲ್ಲಿದ್ದರು. ಸತ್ತವರಲ್ಲಿ ಐವರು ಮಹಿಳೆಯರು ಮತ್ತು ಹತ್ತು ಮಂದಿ ಪುರುಷರಿದ್ದಾರೆ. ತೀವ್ರನಿಗಾ ಘಟಕಕ್ಕೆ ಮಾತ್ರ ಹಾನಿಯಾಗಿದೆ. ಆಸ್ಪತ್ರೆಯ ಬೇರೆ ವಿಭಾಗಗಳಿಗೆ ಯಾವುದೇ ಹಾನಿ ಆಗಿಲ್ಲ.

ಸಮನ್ವಯದ ಹೊಣೆ ರಾಜ್ಯಗಳಿಗೆ

ಬಿಕ್ಕಟ್ಟು ಪರಿಹಾರಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಭೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಜೀವ ರಕ್ಷಕ ವೈದ್ಯಕೀಯ ಆಮ್ಲಜನಕ ಕೊರತೆಯ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ಹೊಣೆಯನ್ನು ಕೇಂದ್ರ ಸರ್ಕಾರವು ರಾಜ್ಯಗಳ ಮೇಲೆಯೇ ಹೊರಿಸಿದೆ. ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಆಮ್ಲಜನಕ ಹಂಚಿಕೆ ಮಾಡುವುದಕ್ಕಾಗಿ ರಾಜ್ಯದಲ್ಲಿ ಉನ್ನತ ಮಟ್ಟದ ಸಮನ್ವಯ ಸಮಿತಿ ರಚಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿಗಳಿಗೆ ಸೂಚಿಸಿದ್ದಾರೆ.

ಕೇಂದ್ರದಿಂದ ಆಮ್ಲಜನಕ ಹಂಚಿಕೆ ಆದ ತಕ್ಷಣವೇ ಅದು ಅಗತ್ಯ ಇರುವ ಆಸ್ಪತ್ರೆಗೆ ತಲುಪುವುದನ್ನು ಈ ಸಮಿತಿಯು ಖಾತರಿಪಡಿಸಬೇಕು ಎಂದು ಅವರು ಹೇಳಿದ್ದಾರೆ. ಕೋವಿಡ್ ಪ್ರಕರಣಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವ 11 ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಧಾನಿ ಶುಕ್ರವಾರ ಸಭೆ ನಡೆಸಿದರು.

ಯಾವುದೇ ರಾಜ್ಯಕ್ಕೆ ಹೋಗುತ್ತಿರುವ ಆಮ್ಲಜನಕ ಟ್ಯಾಂಕರ್‌ಗಳನ್ನು ನಿಲ್ಲಿಸಬಾರದು ಮತ್ತು ಅದರ ಸಂಚಾರ ಸ್ಥಗಿತವಾಗದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳನ್ನು ಅವರು ಕೋರಿದರು. ಕೋವಿಡ್ ವಿರುದ್ಧದ ಹೋರಾಟದಲ್ಲಿ ಎಲ್ಲ ರಾಜ್ಯಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಆಮ್ಲಜನಕ ಮತ್ತು ಔಷಧಗಳ ಬೇಡಿಕೆ ಪೂರೈಸಿಕೊಳ್ಳಲು ರಾಜ್ಯಗಳು ಪರಸ್ಪರ ನೆರವಾಗಬೇಕು. ಆಮ್ಲಜನಕ ಮತ್ತು ಔಷಧಗಳ ಕಾಳದಾಸ್ತಾನು ಮತ್ತು ಕಳ್ಳಸಂತೆ ವ್ಯಾಪಾರಕ್ಕೆ ತಡೆ ಒಡ್ಡಬೇಕು ಎಂದು ಮೋದಿ ಹೇಳಿದರು.

ಆಮ್ಲಜನಕ ಮತ್ತು ಅಗತ್ಯ ಔಷಧಗಳ ತ್ವರಿತ ಸಾಗಾಟಕ್ಕೆ ರೈಲು ಮತ್ತು ವಾಯುಪಡೆ ವಿಮಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸಾಗಾಟ ಸಮಯವು ಗಣನೀಯವಾಗಿ ಕಡಿಮೆಯಾಗಿದೆ ಎಂದು ತಿಳಿಸಿದರು.

ಜೀವ ರಕ್ಷಕ ಔಷಧಗಳು ಮತ್ತು ಆಮ್ಲಜನಕದ ಕೊರತೆಯ ಬಗ್ಗೆ ಎಲ್ಲ ಮುಖ್ಯಮಂತ್ರಿಗಳು ಭಾರಿ ಕಳವಳ ವ್ಯಕ್ತಪಡಿಸಿದರು. ದೆಹಲಿಯ ಆಸ್ಪತ್ರೆಗಳಿಗೆ ಅಗತ್ಯ ಪ್ರಮಾಣದಲ್ಲಿ ಆಮ್ಲಜನಕ ಪೂರೈಕೆ ಆಗದೇ ಇದ್ದರೆ ದೊಡ್ಡ ದುರಂತವೇ ಸಂಭವಿಸೀತು ಎಂದು ಅಲ್ಲಿನ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆತಂಕ ವ್ಯಕ್ತಪಡಿಸಿದರು. ದೇಶದ ಎಲ್ಲ ಆಮ್ಲಜನಕ ತಯಾರಿಕೆ ಘಟಕಗಳನ್ನು ಸೇನೆಯ ಮೂಲಕ ಸರ್ಕಾರವು ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂದೂ ಅವರು ಸಲಹೆ ನೀಡಿದರು.



ಲಸಿಕೆಗಳಿಗೆ ಏಕರೂಪದ ದರ ಇರಬೇಕು ಎಂಬ ಬೇಡಿಕೆಗೆ ಕೇಂದ್ರದಿಂದ ಖಚಿತವಾದ ಪ್ರತಿಕ್ರಿಯೆ ಬಂದಿಲ್ಲ. ಎಲ್ಲ ಪ್ರಮುಖ ರಾಜ್ಯಗಳೂ ಈ ಬೇಡಿಕೆಯನ್ನು ಮುಂದಿರಿಸಿದ್ದವು ಎಂದು ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ.

ರಾಜ್ಯಗಳು ನೇರವಾಗಿ ಔಷಧ ಕಂಪನಿಗಳಿಂದಲೇ ಲಸಿಕೆ ಖರೀದಿಸಬೇಕು ಎಂಬ ನೀತಿಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆಕ್ಷೇಪ ವ್ಯಕ್ತಪಡಿಸಿದರು. ಮೂರನೇ ಹಂತದ ಲಸಿಕೆ ಅಭಿಯಾನಕ್ಕೆ ರಾಜ್ಯಗಳಿಗೆ ಉಚಿತವಾಗಿ ಲಸಿಕೆ ಪೂರೈಸಬೇಕು ಎಂದು ಅವರು ಆಗ್ರಹಿಸಿದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಭೆಯಲ್ಲಿ ಭಾಗವಹಿಸಿಲ್ಲ. ಬದಲಿಗೆ ಮುಖ್ಯ ಕಾರ್ಯದರ್ಶಿ ಸಭೆಗೆ ಹಾಜರಾಗಿದ್ದರು. ಮೋದಿ ಅವರು ಈ ಹಿಂದೆ ನಡೆಸಿದ್ದ ಸಭೆಗೂ ಮಮತಾ ಗೈರಾಗಿದ್ದರು.

ಮುಖ್ಯಾಂಶಗಳು

- ಐದು ವಾರಗಳಲ್ಲಿ ಮೋದಿ ಅವರು ಮುಖ್ಯಮಂತ್ರಿಗಳ ಜತೆಗೆ ನಡೆಸಿದ ಮೂರನೇ ಸಭೆ
- ಆಮ್ಲಜನಕ ಕೊರತೆ ಬಿಕ್ಕಟ್ಟು ಪರಿಶೀಲನೆಗೆ ಒಂದು ವಾರದಲ್ಲಿ ನಡೆಸಿದ ನಾಲ್ಕನೇ ಸಭೆ
- ಅಗತ್ಯ ಔಷಧಗಳ ಕಾಳದಾಸ್ತಾನು ತಡೆಗೆ ಮೋದಿ ಸೂಚನೆ

ಆಮ್ಲಜನಕ ಪೂರೈಸದಿದ್ದರೆ ಆರೋಗ್ಯ ಕೇಂದ್ರ ಬಾಗಿಲು: ಯಡಿಯೂರಪ್ಪ



ಬೆಂಗಳೂರು: ಕೇಂದ್ರ ಸರ್ಕಾರ ರಾಜ್ಯಕ್ಕೆ ಕೇವಲ 300 ಟನ್ ಆಮ್ಲಜನಕ ಹಂಚಿಕೆ ಮಾಡಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ಹಲವು ಆರೋಗ್ಯ ಸೇವಾ ಕೇಂದ್ರಗಳನ್ನು ಮುಚ್ಚಬೇಕಾಗಬಹುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಧಾನಿಯವರು ಮುಖ್ಯಮಂತ್ರಿಗಳ ಜತೆಗೆ ನಡೆಸಿದ ವಿಡಿಯೊ ಸಂವಾದದಲ್ಲಿ ಯಡಿಯೂರಪ್ಪ ಅವರು ಸಂಕಷ್ಟ ತೋಡಿಕೊಂಡರು.

ರಾಜ್ಯದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆಮ್ಲಜನಕದ ಬಳಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಗುರುವಾರ ಒಂದೇ ದಿನ ರಾಜ್ಯದಲ್ಲಿ 500 ಟನ್ ಆಮ್ಲಜನಕ ಬಳಕೆಯಾಗಿದೆ ಎಂದರು.

ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಏ.30 ರ ಬಳಿಕ 1,471 ಟನ್ ಆಮ್ಲಜನಕ ಬೇಕಾಗುತ್ತದೆ. ಅಷ್ಟು ಪ್ರಮಾಣದ ಆಮ್ಲಜನಕ ಪೂರೈಕೆಗೆ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ರೆಮ್‌ಡಿಸಿವಿರ್ ಕೊರತೆಯಾಗದಂತೆ ಎಚ್ಚರ ವಹಿಸಲಾಗಿದೆ. ಮುಂದಿನ 10 ದಿನಗಳಿಗೆ 2 ಲಕ್ಷ ಡೋಸ್‌ಗಳಷ್ಟು ರೆಮ್‌ಡಿಸಿವಿರ್ ಒದಗಿಸುವಂತೆಯೂ ಪ್ರಧಾನಿಯವರಿಗೆ ಬೇಡಿಕೆ ಸಲ್ಲಿಸಿದರು. ರಾಜ್ಯದಲ್ಲಿ ಈವರೆಗೆ ಒಟ್ಟು 82 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ ಎಂದೂ ವಿವರಿಸಿದರು. ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಪಾಸಿಟಿವ್ ಪ್ರಕರಣಗಳ ದರ ಶೇ 16 ರಷ್ಟಿದೆ. ಬೆಂಗಳೂರು ನಗರ ಅತಿ ಹೆಚ್ಚು ಪೀಡಿತವಾಗಿದೆ. ತುಮಕೂರು, ಬಳ್ಳಾರಿ, ಮೈಸೂರು, ಹಾಸನ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲೂ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ ಎಂದು ಪ್ರಧಾನಿಯವರ ಗಮನಕ್ಕೆ ತಂದರು.

ಇನ್ನಷ್ಟು ಸುದ್ದಿಗಳು 2,3B,4,6,11

ಸಭೆಯ ನೇರಪ್ರಸಾರ ಕೇಜ್ರಿವಾಲ್ ಎಡವಟ್ಟು

ಪ್ರಧಾನಿ ಸಭೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಡಿದ ಮಾತು ಸುದ್ದಿ ವಾಹಿನಿಗಳಲ್ಲಿ ನೇರ ಪ್ರಸಾರ ಆದದ್ದು ವಿವಾದ ಸೃಷ್ಟಿಸಿದೆ.

'ದೆಹಲಿ ಮುಖ್ಯಮಂತ್ರಿ ಹುದ್ದೆಗೆ ಅವಮಾನ ಮಾಡುವಂತಹ ನಡೆ ಇದು' ಎಂದು ಬಿಜೆಪಿ ಟೀಕಿಸಿದೆ. ನಾಲ್ಕು ಗೋಡೆಯೊಳಗಿನ ಸಭೆಯೊಂದನ್ನು ನೇರ ಪ್ರಸಾರ ಮಾಡುವ ಮಟ್ಟಕ್ಕೆ ಅವರು ಇಳಿಯಬಹುದೇ ಎಂದು ಪ್ರಶ್ನಿಸಿದೆ.

ನೇರ ಪ್ರಸಾರ ಆಗುತ್ತಿದೆ ಎಂಬುದು ತಿಳಿಯುತ್ತಿದ್ದಂತೆಯೇ ಪ್ರಧಾನಿ ಮೋದಿ ಅವರು ಕೇಜ್ರಿವಾಲ್ ಅವರನ್ನು ತರಾಟೆಗೆ ತೆಗೆದುಕೊಂಡರು. 'ಏನು ನಡೆಯುತ್ತಿದೆಯೋ ಅದು ನಮ್ಮ ಪದ್ಧತಿ ಮತ್ತು ಶಿಷ್ಟಾಚಾರಕ್ಕೆ ವಿರುದ್ಧವಾದುದು. ಇಂತಹ ಸಭೆಯನ್ನು ಯಾವುದೇ ಮುಖ್ಯಮಂತ್ರಿ ನೇರ ಪ್ರಸಾರ ಮಾಡಿದರೂ ಸರಿಯಲ್ಲ. ನಾವು ಸದಾ ಕಾಲ ಘನತೆಯನ್ನು ಕಾಯ್ದುಕೊಳ್ಳಬೇಕು' ಎಂದು ಪ್ರಧಾನಿ ಹೇಳಿದರು. ತಕ್ಷಣವೇ ಎಚ್ಚೆತ್ತುಕೊಂಡ ಕೇಜ್ರಿವಾಲ್ ಅವರು, ಇನ್ನು ಮುಂದೆ ಹೀಗೆ ಆಗದಂತೆ ನೋಡಿಕೊಳ್ಳುವುದಾಗಿ ಭರವಸೆ ಕೊಟ್ಟರು. ಬಳಿಕ, ಕೇಜ್ರಿವಾಲ್ ಅವರ ಕಚೇರಿಯು ವಿಷಾದವನ್ನೂ ವ್ಯಕ್ತಪಡಿಸಿದೆ.

ಧಾರಾಕಾರ ಮಳೆ: ಭತ್ತದ ಬೆಳೆಹಾನಿ

ಬೆಂಗಳೂರು: ಕಲ್ಯಾಣ ಕರ್ನಾಟಕದ ರಾಯಚೂರು, ಯಾದಗಿರಿ, ಕರಾವಳಿಯ ಸುಬ್ರಹ್ಮಣ್ಯ ಸೇರಿ ರಾಜ್ಯದ ಅಲ್ಲಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ಧಾರಾಕಾರ ಮಳೆಗೆ ಭತ್ತದ ಬೆಳೆ ಹಾನಿಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ. ಅಲ್ಲದೆ, ಸಿಡಿಲಿಗೆ ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನಲ್ಲಿ ಹಸು, ಕರು ಮತ್ತು ಕುಷ್ಟಗಿ ತಾಲ್ಲೂಕಿನಲ್ಲಿ ಒಂದು ಎತ್ತು ಮೃತಪಟ್ಟಿವೆ.

ಬೆಳಗಾವಿ ಹೊರವಲಯದ ಕಣಬರ್ಗಿ ರಸ್ತೆಯ ಬಳಿ ಶುಕ್ರವಾರ ಮಳೆಯಿಂದ ರಕ್ಷಿಸಿಕೊಳ್ಳಲು ಮರದ ಕೆಳಗೆ ನಿಂತಿದ್ದ ಇಬ್ಬರು ಕೂಲಿಕಾರ್ಮಿಕರಾದ ಕರೆಪ್ಪ ವ್ಯಾಪಾರಗಿ (44) ಮತ್ತು ಭರಮಪ್ಪ ಭೀಮಪ್ಪ ಬಾದರವಾಡಿ (39) ಅವರು ಸಿಡಿಲು ಬಡಿದು ಮೃತಪಟ್ಟರು.

ರಾಯಚೂರು ಜಿಲ್ಲೆಯ ದೇವದುರ್ಗ, ಕವಿತಾಳ, ದೇವಸುಗೂರು ಹಾಗೂ ಮಸ್ಕಿ ಸುತ್ತಮುತ್ತ ಗುರುವಾರ ತಡ ರಾತ್ರಿ ಬಿರುಗಾಳಿ ಸಹಿತ ಸುರಿದ ಮಳೆಯಿಂದ ಅಪಾರ ಪ್ರಮಾಣದ ಭತ್ತದ ಬೆಳೆಹಾನಿಯಾಗಿದೆ. ಎಂ.ರಾಮಲದಿನ್ನಿಯಲ್ಲಿ ಕರಿಯಪ್ಪ ನಾಯಕ ಅವರಿಗೆ ಸೇರಿದ ಹಸು ಮತ್ತು ಕರು ಸಿಡಿಲಿಗೆ ಬಲಿಯಾಗಿವೆ. ಮಸ್ಕಿ ಸಮೀಪದ ಬಳಗಾನೂರು, ಉದ್ಬಾಳ, ಹುಲ್ಲೂರಿನ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೂರಾರು ಎಕರೆ ಹಾಗೂ ದೇವದುರ್ಗ ತಾಲ್ಲೂಕಿನ ಇಂಗಳದಾಳ, ಖಾನಾಪುರ, ಹದ್ದಿನಾಳ ಹಾಗೂ ರಾಯಚೂರು ತಾಲ್ಲೂಕಿನ ವಿವಿಧೆಡೆ ಮಳೆಗೆ ಭತ್ತದ ಬೆಳೆ ನೆಲಕಚ್ಚಿದೆ.

'ಸರ್ಕಾರ ಕೂಡಲೇ ರೈತರ ನೆರವಿಗೆ ಬರಬೇಕು. ಸೂಕ್ತ ಪರಿಹಾರ ನೀಡಬೇಕು' ಎಂದು ಗಂಜಳ್ಳಿಯ ರೈತ ತಿಮ್ಮಪ್ಪ ಕೋರಿದ್ದಾರೆ. ಕುಷ್ಟಗಿ ತಾಲ್ಲೂಕಿನ ವಣಗೇರಿಯಲ್ಲಿ ಎತ್ತು ಮೃತಪಟ್ಟಿದೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ವಿವಿಧೆಡೆ ಭತ್ತದ ರಾಶಿ ಹಾಳಾಗಿದೆ. ವಿವಿಧ ಗ್ರಾಮಗಳಲ್ಲಿ ಸಾವಿರಾರು ಚೀಲ ಭತ್ತ ಮಳೆ ನೀರಿಗೆ ತೊಯ್ದಿದೆ.



ರಾಯಚೂರು ತಾಲ್ಲೂಕಿನ ಗುಂಜಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ಸುರಿದ ಮಳೆಗೆ ಭತ್ತದ ಬೆಳೆ ನೆಲಕಚ್ಚಿದೆ

ಕರಾವಳಿಯ ಕಡಬ ತಾಲ್ಲೂಕಿನ ವಿವಿಧೆಡೆ ಶುಕ್ರವಾರ ನಸುಕಿನ ಜಾವ ಗುಡುಗು ಸಹಿತ ಉತ್ತಮ ಮಳೆಯಾಗಿದೆ. ಭಾರಿ ಮಳೆಗೆ ರೆಂಜಿಲಾಡಿಯಲ್ಲಿ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಹುಬ್ಬಳ್ಳಿ, ವಿಜಯಪುರ ಜಿಲ್ಲೆಯ ಸಿಂದಗಿ, ಬಸವನ ಬಾಗೇವಾಡಿ, ಹೊಸಪೇಟೆ ಸೇರಿದಂತೆ ವಿವಿಧೆಡೆ ಗುಡುಗು ಸಹಿತ ಧಾರಾಕಾರ ಮತ್ತು ಬೆಳಗಾವಿಯಲ್ಲಿ ತುಂತುರು ಮಳೆಯಾಗಿದೆ. ಗದಗ–ಬೆಟಗೇರಿ ಅವಳಿ ನಗರದಲ್ಲಿ ಗುಡುಗು, ಮಿಂಚಿನ ಆರ್ಭಟ ಹೆಚ್ಚಿತ್ತು. ಉತ್ತರ ಕನ್ನಡದ ಭಟ್ಕಳ, ಹೊನ್ನಾವರ, ಕುಮಟಾ ಹಾಗೂ ಮಲೆನಾಡಿನ ಭಾಗಗಳಾದ ಶಿರಸಿ, ಸಿದ್ದಾಪುರ ಯಲ್ಲಾಪುರಗಳಲ್ಲಿ ಗುರುವಾರ ತಡರಾತ್ರಿ ಮಳೆಯಾಗಿದೆ.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ವಿವಿಧೆಡೆ ಧಾರಾಕಾರಮಳೆಯಾಗಿದೆ.ಹುಚ್ಚವ್ವನಹಳ್ಳಿ,ತಾಯಿಟೋಣಿ,ಚಿಕ್ಕಮಲ್ಲನ ಹೊಳೆ, ಹಿರೆಮಲ್ಲನಹೊಳೆ ಸೇರಿ ತೊರೆಸಾಲು ಪ್ರದೇಶದಲ್ಲಿ ಭಾರಿ ಮಳೆಯಾಗಿದೆ.

ಭಾರಿ ಮಳೆ: ಮನೆಗೆ ನುಗ್ಗಿದ ನೀರು 3

ನಗರ, ಗ್ರಾಮೀಣ ಪ್ರದೇಶದಲ್ಲಿ 'ಗ್ರಾಮ್' ಸಮೀಕ್ಷೆ

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಶೇ 64 ಮಂದಿ ಒಲವು

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್ ಎರಡನೇ ಅಲೆಯ ಸಂಕಷ್ಟದ ನಡುವೆ 2020–21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಬೇಕೇ, ಬೇಡವೇ' ಎಂಬ ಬಗ್ಗೆ ಗ್ರಾಸ್‌ರೂಟ್ಸ್ ರಿಸರ್ಚ್ ಆಂಡ್ ಅಡ್ವೊಕಸಿ ಮೂವ್‌ಮೆಂಟ್ (ಗ್ರಾಮ್) ನಡೆಸಿದ ಸಮೀಕ್ಷೆಯಲ್ಲಿ 'ಪರೀಕ್ಷೆ ನಡೆಸಬೇಕು' ಎಂಬುದರತ್ತ ಹೆಚ್ಚಿನವರು ಒಲವು ವ್ಯಕ್ತಪಡಿಸಿದ್ದಾರೆ.

ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಶೇ 64 ಮಂದಿ ಪರೀಕ್ಷೆ ನಡೆಸಬೇಕು ಎಂದು ಹೇಳಿದ್ದಾರೆ. ಶೇ 36 ಮಂದಿ ಕೋವಿಡ್ ಎರಡನೇ ಅಲೆ ಕಡಿಮೆಯಾಗುವವರೆಗೆ ಪರೀಕ್ಷೆ ಬೇಡ ಎಂದಿದ್ದಾರೆ.


ಪರೀಕ್ಷೆ ನಡೆಸಲು ಒಪ್ಪಿಗೆ ಸೂಚಿಸಿದವರಲ್ಲಿ ಶಿಕ್ಷಕರು (ಶೇ 78) ಮೊದಲ ಸ್ಥಾನದಲ್ಲಿದ್ದಾರೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಶಿಕ್ಷಣ ಕ್ಷೇತ್ರದ ಆಸಕ್ತರು (ಶೇ 65), ವಿದ್ಯಾರ್ಥಿಗಳು (ಶೇ 60) ಮತ್ತು ಪೋಷಕರು (ಶೇ 60) ಇದ್ದಾರೆ. ನಗರ ಪ್ರದೇಶದವರಿಗಿಂತ (ಶೇ 57) ಗ್ರಾಮೀಣ ಪ್ರದೇಶದವರು (ಶೇ 71) ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ನಡೆಸಲು ಒಲವು ಸೂಚಿಸಿದ್ದಾರೆ.

'ಆನ್‌ಲೈನ್‌ನಲ್ಲಿ ಪರೀಕ್ಷೆ ನಡೆಸಬೇಕೇ' ಎಂಬ ಪ್ರಶ್ನೆಯನ್ನು ಸಮೀಕ್ಷೆಯಲ್ಲಿ ಕೇಳಲಾಗಿತ್ತು. ಈ ಪ್ರಶ್ನೆಗೆ ಶೇ 70 ಮಂದಿ 'ಬೇಡ' ಎಂದು ಪ್ರತಿಕ್ರಿಯಿಸಿದ್ದಾರೆ.

ರಾಜ್ಯದಾದ್ಯಂತ ಮೂರು ದಿನ ನಡೆಸಲಾದ ಸಮೀಕ್ಷೆಯಲ್ಲಿ 1,487 ಮಂದಿ ಪಾಲ್ಗೊಂಡಿದ್ದರು. ಅವರಲ್ಲಿ 732 ಮಂದಿ ಗ್ರಾಮೀಣ ಪ್ರದೇಶದವರಾಗಿದ್ದರೆ, 750 ಮಂದಿ ನಗರ ಪ್ರದೇಶದವರು. ಸಮೀಕ್ಷೆಯ ವೇಳೆ 606 ವಿದ್ಯಾರ್ಥಿಗಳು, 254 ಶಿಕ್ಷಕರು, 349 ಪೋಷಕರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ 278 ಮಂದಿಯ ಪ್ರತಿಕ್ರಿಯೆ ಪಡೆಯಲಾಗಿತ್ತು ಎಂದು 'ಗ್ರಾಮ್' ಪ್ರಕಟಣೆ ತಿಳಿಸಿದೆ.

ಜೂನ್ 21ರಿಂದ ಜುಲೈ 5ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಈಗಾಗಲೇ ದಿನಾಂಕ ನಿಗದಿಪಡಿಸಿದೆ.

ಪರೀಕ್ಷೆ ಇಲ್ಲದಿದ್ದರೂ ಪಾಸ್ ಮಾಡಿ



ಪರೀಕ್ಷೆ ನಡೆಸಲು ಸಾಧ್ಯವಾಗದೇ ಇದ್ದರೆ ವಿದ್ಯಾರ್ಥಿಗಳನ್ನು ಮುಂದಿನ ವರ್ಷವೂ ಅದೇ ತರಗತಿಯಲ್ಲಿ ಉಳಿಸಿಕೊಳ್ಳಬೇಕೇ ಅಥವಾ ಮುಂದಿನ ತರಗತಿಗೆ ಕಳುಹಿಸಬೇಕೇ ಎಂಬ ಪ್ರಶ್ನೆಯನ್ನೂ ಸಮೀಕ್ಷೆಯಲ್ಲಿ ಕೇಳಲಾಗಿತ್ತು. ಮುಂದಿನ ತರಗತಿಗೆ ತೇರ್ಗಡೆ ಮಾಡಬೇಕು ಎಂದು ಶೇ 80ರಷ್ಟು ಮಂದಿ ಹೇಳಿದ್ದಾರೆ. ತೇರ್ಗಡೆ ಮಾಡಬೇಕು ಎಂದು ಹೇಳಿದವರಲ್ಲಿ ಹೆಚ್ಚಿನವರು ಶಿಕ್ಷಕರು. ಶಿಕ್ಷಕರಲ್ಲಿ ಈ ಪ್ರಮಾಣ ಶೇ 91ರಷ್ಟಿದೆ. ವಿಶೇಷ ಎಂದರೆ, ಶೇ 23ರಷ್ಟು ವಿದ್ಯಾರ್ಥಿಗಳು ಮುಂದಿನ ವರ್ಷವೂ ಇದೇ ತರಗತಿಯಲ್ಲಿ ಇರಿಸಬೇಕು ಎಂದು ಹೇಳಿದ್ದಾರೆ.

ಸಲಹೆಗಳು

- ಸಾರಿಗೆ ವ್ಯವಸ್ಥೆ ಚೆನ್ನಾಗಿರುವ ಕ್ಲಸ್ಟರ್‌ಗಳಲ್ಲಿ ಹೆಚ್ಚು ಕೇಂದ್ರಗಳನ್ನು ಸ್ಥಾಪಿಸಬೇಕು
- ಪ್ರತಿ ಶಾಲೆಯಲ್ಲಿಯೂ ಪರೀಕ್ಷಾ ಕೇಂದ್ರ ತೆರೆದರೆ ಕೆಲವೇ ಕೇಂದ್ರಗಳಲ್ಲಿ ದಟ್ಟಣೆ ಹೆಚ್ಚುವುದನ್ನು ತಡೆಯಬಹುದು
- ಪರೀಕ್ಷಾ ಭಯ ನಿವಾರಣೆ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಜಿಲ್ಲಾ ಕೇಂದ್ರಿತ ಸಹಾಯವಾಣಿ ಆರಂಭಿಸಿ
- ದಿನಕ್ಕೆ ಎರಡು ಪರೀಕ್ಷೆ ನಡೆಸುವ ಬಗ್ಗೆ ಯೋಚಿಸಬಹುದು

ಆಸ್ಪತ್ರೆಗಳು, ವೈದ್ಯಕೀಯ ಸಂಸ್ಥೆಗಳು ಜನರ ಸಂಕಷ್ಟಕ್ಕೆ ಮಿಡಿಯಬೇಕು: ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮನವಿ

ಎಂ.ಬಿ.ಪಾಟೀಲರ ಕೋವಿಡ್ ಸೇವೆಗೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲ ಅವರು ತಮ್ಮ ಒಡೆತನದ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಕಡಿಮೆ ದರದಲ್ಲಿ ಸೇವೆ ನೀಡುತ್ತಿದ್ದು, ಇದು ಎಲ್ಲರಿಗೂ ಮಾದರಿ. ಇದೇ ರೀತಿಯಲ್ಲಿ ಇತರ ಆಸ್ಪತ್ರೆಗಳು, ವೈದ್ಯಕೀಯ ಸಂಸ್ಥೆಗಳು ಜನರ ಸಂಕಷ್ಟಕ್ಕೆ ಮಿಡಿಯಬೇಕು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮನವಿ ಮಾಡಿದ್ದಾರೆ.

ವಿಜಯಪುರದ ಬಿಎಲ್‌ಡಿಇ ಮೆಡಿಕಲ್ ಕಾಲೇಜಿನ ಮುಖ್ಯಸ್ಥರೂ ಆಗಿರುವ ಎಂ.ಬಿ. ಪಾಟೀಲ ಅವರು ತಮ್ಮ ಆಸ್ಪತ್ರೆಯಲ್ಲಿ ಹಾಸಿಗೆಗಳ ದರವನ್ನು ಶೇ.70 ರಷ್ಟು ಕಡಿತಗೊಳಿಸಿದ್ದಾರೆ. ಜೊತೆಗೆ 500 ಹಾಸಿಗೆಗಳನ್ನು ಆರ್ಥಿಕವಾಗಿ ದುರ್ಬಲರಾದ ವರ್ಗಕ್ಕೆ ಮೀಸಲಿಟ್ಟಿದ್ದಾರೆ ಎಂದು ಹೇಳಿದ್ದಾರೆ.

ಅದೇ ರೀತಿ, ಡಾ.ಸಿ.ವಿ.ಮೋಹನ್ ಅವರು ಬೊಮ್ಮಸಂದ್ರದ ಚೇತನ ವಿಹಾರ ಎಲ್ಡರ್ ಕೇರ್ ಸೆಂಟರ್‌ನಲ್ಲಿ 200 ಹಾಸಿಗೆಗಳನ್ನು ಸ್ವಯಂಪ್ರೇರಿತರಾಗಿ ಕೋವಿಡ್ ರೋಗಿಗಳಿಗೆ ಮೀಸಲಿಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆ ಸಿಬ್ಬಂದಿ ಕೋವಿಡ್ ರೋಗಿಯೊಬ್ಬರ ಮೃತದೇಹವನ್ನು ತೀವ್ರ ನಿಗಾ ಘಟಕದಿಂದ (ಐಸಿಯು) ಆಂಬುಲೆನ್ಸ್‌ಗೆ ತೆಗೆದುಕೊಂಡು ಹೋಗುತ್ತಿರುವುದು —ಪ್ರಜಾವಾಣಿ ಚಿತ್ರ

ರಾಷ್ಟ್ರೋತ್ಥಾನ ರಕ್ತ ನಿಧಿ ಕೇಂದ್ರದಲ್ಲಿ ಕೋವಿಡ್ ನಿಂದ ಚೇತರಿಸಿಕೊಂಡವರ ರಕ್ತದಿಂದ ಪ್ಲಾಸ್ಮಾ ತೆಗೆದು ಚಿಕಿತ್ಸೆಗೆ ಒದಗಿಸಿಕೊಡುವ ಅಭಿಯಾನ ಆರಂಭವಾಗಿದೆ. ಇದು ಕೋವಿಡ್‌ನಿಂದ ತೀವ್ರವಾಗಿ ಬಳಲುತ್ತಿರುವ ರೋಗಿಗಳಿಗೆ ಸಂಜೀವಿನಿ ನೀಡುವ ಉತ್ತಮ ಕ್ರಮವಾಗಿದೆ ಎಂದು ಸುಧಾಕರ್ ಅವರು ಹೇಳಿದ್ದಾರೆ.

ಮನೆಯಲ್ಲಿ ಆರೈಕೆ: ಔಷಧ ಪೂರೈಕೆಗೆ ಆಗ್ರಹ



ಮಂಜುನಾಥ್

ಮನೆ ಆರೈಕೆಗೆ ಒಳಗಾಗಿರುವ ಕೋವಿಡ್ ರೋಗಿಗಳಿಗೆ ಔಷಧಿ ಸಾಮಗ್ರಿಗಳು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಕನಿಷ್ಠ 10 ದಿನಗಳಿಗಾದರೂ ಔಷಧ ಪೂರೈಕೆ ಸಮರ್ಪಕವಾಗಿ ಮಾಡಬೇಕು ಎಂದು ಶಾಸಕ ಆರ್.ಮಂಜುನಾಥ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಪತ್ರ ಬರೆದಿರುವ ಅವರು, 'ಬಿಬಿಎಂಪಿ ವತಿಯಿಂದ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿರುವ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ದೊರಕುತ್ತಿಲ್ಲ. ಎಲ್ಲ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ/ಐಸಿಯು ಬೆಡ್‌ಗಳ ಕೊರತೆ ಉಂಟಾಗಿದೆ. ಈ ಸಮಸ್ಯೆ ಬಗೆಹರಿಸಲು ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 200 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರವನ್ನು ಆರಂಭಿಸಬೇಕು. ಕೋವಿಡ್ ವಾರ್ ರೂಂಗಳಲ್ಲಿ ಸಿಬ್ಬಂದಿ ಕೊರತೆ ಇದ್ದು, ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಬೇಕು ಎಂದೂ ಒತ್ತಾಯಿಸಿದ್ದಾರೆ.

ಬಿಬಿಎಂಪಿ ಮೂಲಕ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿರುವ ಕೋವಿಡ್ ರೋಗಿಗಳಿಗೆ ರೆಮಿಡಿಸಿವಿರ್ ಚುಚ್ಚುಮದ್ದು ಕೊಡಲು ಮೀನಮೇಷ ಎಣಿಸಲಾಗುತ್ತಿದೆ. ಈ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಲಾಗುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳು, ನೌಕರರ ರಜೆ ರದ್ದು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ಕೋವಿಡ್ ನಿಯಂತ್ರಣ ಕೆಲಸಕ್ಕೆ ನಿಯೋಜನೆಗೊಂಡಿರುವ ಎಲ್ಲ ಅಧಿಕಾರಿಗಳು ಹಾಗೂ ನೌಕರರು ಸಾರ್ವಜನಿಕ ರಜಾ ದಿನಗಳಲ್ಲೂ ಕಾರ್ಯನಿರ್ವಹಿಸಬೇಕೆಂದು ಬಿಬಿಎಂಪಿ ಉಪ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

'ಕೋವಿಡ್ ನಿಯಂತ್ರಣ ಕೆಲಸಕ್ಕೆ ನಿಯೋಜನೆಗೊಳ್ಳದ ಎಲ್ಲ ಅಧಿಕಾರಿಗಳು ಹಾಗೂ ನೌಕರರು ಯಾವುದೇ ಕಾರಣಕ್ಕೂ ತಮ್ಮ ಕೇಂದ್ರಸ್ಥಾನವನ್ನು ತೊರೆಯಬಾರದು. ಮೊಬೈಲ್ ಹಾಗೂ ದೂರವಾಣಿಯನ್ನು ಸದಾ ಚಾಲ್ತಿಯಲ್ಲಿಟ್ಟುಕೊಂಡಿರಬೇಕು. ತುರ್ತು ಸಂದರ್ಭಗಳಲ್ಲಿ ಕೂಡಲೇ ಕೆಲಸಕ್ಕೆ ಹಾಜರಾಗಬೇಕು. ಈ ಸಂಬಂಧ ಮುಖ್ಯ ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸುದ್ದಿ 2 ನಿಮಿಷ

ಎಲ್‌ಎಸ್‌ಡಿ: ಚಿಕಿತ್ಸೆಗೆ ಅನುದಾನ ಬಿಡುಗಡೆಗೆ ಸೂಚನೆ

ಬೆಂಗಳೂರು: ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ (ಎಲ್‌ಎಸ್‌ಡಿ; ನ್ಯೂಕ್ಲಿಯಸ್ ಜೀವಕೋಶಗಳ ಕೋಶಧಾತುವಿನಲ್ಲಿ ಶೇಖರಣಾ ಸಮಸ್ಯೆ) ಎಂಬ ಅಪರೂಪದ ರೋಗದಿಂದ ಬಳಲುತ್ತಿರುವ ಮಕ್ಕಳ ಚಿಕಿತ್ಸೆಗಾಗಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ₹3 ಕೋಟಿ ಮತ್ತು ₹2 ಕೋಟಿ ಅನುದಾನ ನೀಡಬೇಕು. ಮೇ 10ರೊಳಗೆ ಶೆ 50ರಷ್ಟು ಹಣ ಬಿಡುಗಡೆ ಮಾಡಬೇಕು ಎಂದು ತಿಳಿಸಿತು.



ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ ಸೊಸೈಟಿ ಆಫ್ ಇಂಡಿಯಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ನಿರ್ದೇಶನ ನೀಡಿತು.

'45 ಮಕ್ಕಳು ಈ ರೋಗದಿಂದ ಬಳಲುತ್ತಿದ್ದಾರೆ. 28 ಮಕ್ಕಳು ಸರ್ಕಾರದಿಂದ ನೆರವು ಪಡೆಯುತ್ತಿದ್ದರೆ, ಉಳಿದ 17 ಮಕ್ಕಳ ಚಿಕಿತ್ಸೆ ವೆಚ್ಚವನ್ನು ಕಾರ್ಪೊರೇಟ್ ಸಹಾಯಧನ ಪಡೆಯಲಾಗುತ್ತಿದೆ' ಎಂದು ಅರ್ಜಿದಾರರು ವಿವರಿಸಿದರು.

ಜೂನ್ 18ಕ್ಕೆ ವಿಚಾರಣೆ ಮುಂದೂಡಿದ ಪೀಠ, ಅನುಸರಣಾ ವರದಿ ಸಲ್ಲಿಸಬೇಕು ಎಂದು ತಿಳಿಸಿತು.

ಒಕ್ಕಲಿಗರ ಸಂಘದ ಚುನಾವಣೆ ಮುಂದೂಡಲು ಸಮ್ಮತಿ

ಬೆಂಗಳೂರು: ಕೋವಿಡ್ ಉಲ್ಬಣಗೊಂಡಿರುವ ಕಾರಣ ರಾಜ್ಯ ಒಕ್ಕಲಿಗರ ಸಂಘದ ಚುನಾವಣೆ ಮುಂದೂಡಲು ಹೈಕೋರ್ಟ್ ಸಮ್ಮತಿಸಿದೆ.

ಸಂಘಕ್ಕೆ ಚುನಾವಣೆ ನಡೆಸುವಂತೆ ಕೋರಿ ಚಿತ್ರ ನಿರ್ಮಾಪಕ ಕೃಷ್ಣೇಗೌಡ ಸಲ್ಲಿಸಿದ್ದ ಅರ್ಜಿ ಸಂಬಂಧ ಮಾ.5ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಮೂರು ತಿಂಗಳೊಳಗೆ ಚುನಾವಣೆ ನಡೆಸಲು ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಅದರಂತೆ ಚುನಾವಣಾಧಿಕಾರಿಯನ್ನು ನೇಮಿಸಿ ಮೇ 16ಕ್ಕೆ ಚುನಾವಣೆಯನ್ನು ನಿಗದಿ ಮಾಡಲಾಗಿತ್ತು.

ಈ ನಡುವೆ ಕೋವಿಡ್ ವೇಗವಾಗಿ ಹರಡುತ್ತಿರುವ ಕಾರಣ ಚುನಾವಣೆ ಮುಂದೂಡುವುದು ಸೂಕ್ತ ಎಂದು ಚುನಾವಣಾಧಿಕಾರಿ ಸರ್ಕಾರಕ್ಕೆ ಪತ್ರ ಬರೆದಿದ್ದರು. ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಸರ್ಕಾರ, 'ಮೂರು ತಿಂಗಳಲ್ಲಿ ಚುನಾವಣೆ ನಡೆಸಬೇಕು ಎಂಬ ಆದೇಶದಿಂದ ವಿನಾಯಿತಿ ನೀಡಬೇಕು. ಮುಂದೂಡಲು ಅನುಮತಿ ನೀಡಬೇಕು' ಎಂದು ಕೋರಿತ್ತು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ, ಚುನಾವಣೆ ಮುಂದೂಡಲು ಅನುಮತಿ ನೀಡಿತು. 'ಕೋವಿಡ್ ಹತೋಟಿಗೆ ಬಂದ ನಂತರವೂ ಚುನಾವಣೆ ನಡೆಸದಿದ್ದರೆ ಅರ್ಜಿದಾರರು ನ್ಯಾಯಾಲಯದಲ್ಲಿ ಮತ್ತೆ ಪ್ರಶ್ನಿಸಬಹುದು' ಎಂದು ತಿಳಿಸಿ ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿತು.

ಇಂದಿನಿಂದ 'ಕನ್ನಡ ಅಭಿಮಾನಿ ದಿನ' ಆನ್‌ಲೈನ್ ಅಭಿಯಾನ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಕಾಯಕ ವರ್ಷ ಹಾಗೂ ನಟ ರಾಜಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ 'ಅಭಿಮಾನಿ ದಿನ' ಹಾಗೂ 'ಗ್ರಾಹಕ ಸೇವೆಯಲ್ಲಿ ಕನ್ನಡ' ಎಂಬ ಆನ್‌ಲೈನ್ ಅಭಿಯಾನ'ವನ್ನು ಏ.24ರಿಂದ 26ರವರೆಗೆ ಹಮ್ಮಿಕೊಂಡಿದೆ.

'ಕನ್ನಡಿಗರೆಲ್ಲರೂ 24ರ ಬೆಳಿಗ್ಗೆ 10ಕ್ಕೆ ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್ ಬುಕ್ ಖಾತೆಗಳಲ್ಲಿ ಪ್ರಾಧಿಕಾರದ ಹ್ಯಾಷ್‌ಟ್ಯಾಗ್‌ಗಳಾದ '#ಕನ್ನಡ ಕಾಯಕ ವರ್ಷ 2020-21, #ಕನ್ನಡ ಅಭಿಮಾನಿ ದಿನ, #ಗ್ರಾಹಕ ಸೇವೆಯಲ್ಲಿ ಕನ್ನಡ' ಸಾಲುಗಳನ್ನು ಬಳಸಿ, ನಿಮ್ಮದೇ ನೂತನ ಯೋಚನೆಗಳೊಂದಿಗೆ ಗ್ರಾಹಕ ಸೇವೆಯಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಮಾಹಿತಿ ಹಂಚಿಕೊಳ್ಳಿ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಮನವಿ ಮಾಡಿದ್ದಾರೆ.

ಸಂಪರ್ಕ: 080-22256365, 22033519

ನಿಧನ ವಾರ್ತೆ

ಪತ್ರಕರ್ತ ಶಾಂತಾರಾಮ್ ಭಟ್



ಬೆಂಗಳೂರು: ಹಿರಿಯ ಪತ್ರಕರ್ತ ಶಾಂತಾರಾಮ್ ಭಟ್ (62) ಅವರು ಇಲ್ಲಿನ ತಾವರೆಕೆರೆ ಬಳಿಯ ಗಾಣಕಲ್ಲು ಸ್ವಗೃಹದಲ್ಲಿ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಇಟಗಿಯವರಾದ ಶಾಂತರಾಮ ಅವರಿಗೆ ಪತ್ನಿ ಹಾಗೂ ಮೂವರು ಸಹೋದರರು ಮತ್ತು ಇಬ್ಬರು ಸಹೋದರಿಯರು ಇದ್ದಾರೆ.

ಸಂಯುಕ್ತ ಕರ್ನಾಟಕ ಹಾಗೂ 'ಪ್ರಜಾವಾಣಿ'ಯಲ್ಲಿ ಕೆಲಸ ಮಾಡಿದ್ದ ಅವರು ನಿವೃತ್ತರಾಗಿದ್ದರು.

ಗುಂಪುಗೂಡಿ ಚುನಾವಣಾ ಪ್ರಚಾರ

ಮಾರ್ಗಸೂಚಿ ಉಲ್ಲಂಘಿಸಿದ ಸಚಿವ ಯೋಗೇಶ್ವರ್: ನಾಗರಿಕರ ಟೀಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಕೊರೊನಾ ನಿರ್ಬಂಧದ ನಡುವೆಯೂ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಶುಕ್ರವಾರ ಪಟ್ಟಣದಲ್ಲಿ ಗುಂಪುಗೂಡಿಕೊಂಡು ನಗರಸಭಾ ಚುನಾವಣಾ ಪ್ರಚಾರ ನಡೆಸಿದ್ದು, ಟೀಕೆಗೆ ಗುರಿಯಾಗಿದೆ.

ಜವಾಬ್ದಾರಿಯುತ ಸ್ಥಾನದಲ್ಲಿರುವ ಸಿ.ಪಿ.ಯೋಗೇಶ್ವರ್ ಕೊರೊನಾ ನಿಯಮಗಳನ್ನು ಉಲ್ಲಂಘನೆ ಮಾಡಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಸರ್ಕಾರದ ನಿಯಮಗಳನ್ನು ಇವರೇ ಉಲ್ಲಂಘನೆ ಮಾಡಿದರೆ ಸಾಮಾನ್ಯ ಸಾರ್ವಜನಿಕರು ಹೇಗೆ ಪಾಲಿಸುತ್ತಾರೆ ಎಂದು ವಿರೋಧ ಪಕ್ಷಗಳ ಮುಖಂಡರು ಟೀಕಿಸಿದ್ದಾರೆ.

ಸಿ.ಪಿ.ಯೋಗೇಶ್ವರ್ ಅವರು ಗುರುವಾರವೂ ಪಟ್ಟಣದಲ್ಲಿ ನಗರಸಭಾ ಚುನಾವಣಾ ಪ್ರಚಾರ ನಡೆಸಿದ್ದರು. ಜೊತೆಗೆ ಪಟ್ಟಣದ ಕುವೆಂಪುನಗರ 5ನೇ ಅಡ್ಡರಸ್ತೆಯ ತಮ್ಮ ನಿವಾಸದಲ್ಲಿ ಮುಖಂಡರ ಸಭೆ ನಡೆಸಿ ಬಿಜೆಪಿ ಬೆಂಬಲಿಸಲು ಮನವಿ ಮಾಡಿದ್ದರು. ಅಂತರ ಕಾಪಾಡುವಲ್ಲಿ ಯಾವುದೇ ನಿಯಮ ಪಾಲಿಸಿರಲಿಲ್ಲ. ಇದು ಟೀಕೆಗೆ ಗುರಿಯಾಗಿತ್ತು.



ಚನ್ನಪಟ್ಟಣದಲ್ಲಿ ಸಚಿವ ಸಿ.ಪಿ.ಯೋಗೇಶ್ವರ್ ನಗರಸಭಾ ಚುನಾವಣಾ ಪ್ರಚಾರದ ವೇಳೆ ಅಂತರ ಕಾಯ್ದುಕೊಳ್ಳದೇ ಪ್ರಚಾರ ನಡೆಸಿದರು

ಶುಕ್ರವಾರವೂ ಸಹ ಯೋಗೇಶ್ವರ್ ಪಟ್ಟಣದಲ್ಲಿ ಪಕ್ಷದ ಮುಖಂಡರು, ಜನರ ಗುಂಪುಗೂಡಿಕೊಂಡು ಪ್ರಚಾರ ಮಾಡಿದ್ದು, ಕೊರೊನಾ ನಿಯಮ ಉಲ್ಲಂಘಿಸಿದ್ದಾರೆ. ಮಹಿಳೆಯರು ಮಕ್ಕಳ ಮಧ್ಯೆಯಲ್ಲಿ ನಿಂತು ಪ್ರಚಾರ ನಡೆಸಿದ್ದಾರೆ ಎಂದು ಆರೋಪಕ್ಕೆ ಗುರಿಯಾಗಿದ್ದಾರೆ.

ಒಂದು ಕಡೆ ಸರ್ಕಾರ ಸಾರ್ವಜನಿಕರಿಗೆ ಕೊರೊನಾ ನಿಯಮ ಪಾಲಿಸುವಂತೆ ಸೂಚನೆ ನೀಡುತ್ತದೆ. ಪಾಲನೆ ಉಲ್ಲಂಘನೆ ಮಾಡುವವರಿಗೆ ದಂಡ ವಿಧಿಸುತ್ತದೆ. ಇಲ್ಲಿ ಸರ್ಕಾರದ ಸಚಿವರೆ ನಿಯಮ ಉಲ್ಲಂಘನೆ ಮಾಡಿದ್ದು, ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲವೆ ಎಂದು ವಿರೋಧ ಪಕ್ಷದ ಮುಖಂಡರು ಪ್ರಶ್ನಿಸಿದ್ದಾರೆ.

ಮುಖ್ಯಾಂಶಗಳು

- ಮಹಿಳೆಯರು, ಮಕ್ಕಳ ಮಧ್ಯೆ ನಿಂತು ಪ್ರಚಾರ
- ಸಚಿವರ ಕ್ರಮಕ್ಕೆ ವಿರೋಧ ಪಕ್ಷದ ಮುಖಂಡರ ಟೀಕೆ

ಚಿತಾಗಾರ: ನೋಡಲ್ ಅಧಿಕಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಏರುತ್ತಿರುವುದಿಂದ ಅಂತ್ಯಕ್ರಿಯೆಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಲು ನಗರದ 12 ವಿದ್ಯುತ್ ಚಿತಾಗಾರಗಳಿಗೆ ನೋಡಲ್ ಅಧಿಕಾರಿಗಳನ್ನು ಪಾಲಿಕೆ ನಿಯೋಜಿಸಿದೆ.

ನೋಡಲ್ ಅಧಿಕಾರಿಗಳು ಮೊದಲನೆ ಪಾಳಿಯಲ್ಲಿ ಬೆಳಿಗ್ಗೆ 7ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಎರಡನೇ ಪಾಳಿಯಲ್ಲಿ ಮಧ್ಯಾಹ್ನ 2ರಿಂದ ರಾತ್ರಿ 10 ಗಂಟೆಯವರೆಗೆ ಕಾರ್ಯನಿರ್ವಹಿಸಲಿದ್ದಾರೆ.

ಚಿತಾಗಾರಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಸುರಕ್ಷಾ ಸಾಮಗ್ರಿಗಳು, ಅವಶ್ಯಕ ಸಲಕರಣೆಗಳನ್ನು ಒದಗಿಸುವುದು, ಸರದಿಯಲ್ಲಿ ಮೃತದೇಹಗಳ ಅಂತ್ಯಕ್ರಿಯೆ, ಜನಸಂದಣಿಯಾಗದಂತೆ ತಡೆಯುವುದು, ಚಿತಾಗಾರಕ್ಕೆ ಬರುವ ಮೃತದೇಹಗಳ ವಿವರ ಸೇರಿದಂತೆ ಇನ್ನಿತರ ಮಾಹಿತಿಗಳನ್ನು ಪ್ರತಿ ನಿತ್ಯ ವರದಿ ನೀಡಲು ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೋಡಲ್ ಅಧಿಕಾರಿಗಳ ಪಟ್ಟಿ

	ಚಿತಾಗಾರ	ಒಂದನೇ ಪಾಳಿ	ಸಂಪರ್ಕ	ಎರಡನೇ ಪಾಳಿ	ಸಂಪರ್ಕ
1	ಮೇಡಿ ಅಗ್ರಹಾರ	ಕೆ.ಎನ್.ನಂದೀಶ್	9343749635	ಕೃಷ್ಣಲಾಲ್	9620570508
2	ಹೆಬ್ಬಾಳ-ಕೆಂಪಾಪುರ	ನವೀನ್‌ಕುಮಾರ್	9980766977	ನಾರಾಯಣಸ್ವಾಮಿ	9449764744
3	ಕೂಡ್ಲು	ರವಿಕುಮಾರ್	9845723479	ವಸಂತಕುಮಾರ್	9008746150
4	ಪಣತ್ತೂರು	ಮುನಿರೆಡ್ಡಿ	9480684748	ಬಿ.ಎನ್.ಪ್ರದೀಪ್	9916873120
5	ಕಲ್ಲಹಳ್ಳಿ	ನಿರಂಜನ್	9036888707	ಲಕ್ಷ್ಮಣಪ್ಪ	9663421895
6	ಹರಿಶ್ಚಂದ್ರ ಘಾಟ್	ವೆಂಕಟೇಶ್	9480683659	ಕೇಶವಮೂರ್ತಿ	9945697425
7	ಮೈಸೂರು ರಸ್ತೆ	ಜಿ.ಕೆ.ವಿಶ್ವನಾಥ್	9900095559	ವೀರೇಶ್	7349100123
8	ಕೆಂಗೇರಿ	ಶಿವಪ್ರಸಾದ್	9739094360	ರಾಘವೇಂದ್ರ	9483535499
9	ಸುಮನಹಳ್ಳಿ	ಮೋಹನ್	9448630428	ಸುರೇಶ್	9448289846
10	ಪೀಣ್ಯ	ದಿನೇಶ್	9448719897	ಜಯಶಂಕರ್	9743490207
11	ಬನಶಂಕರಿ	ಕಲ್ಲೇಶಪ್ಪ	8095255311	ಶ್ರೀನಿವಾಸ	9035087060
12	ವಿಲ್ಸನ್‌ಗಾರ್ಡನ್	ಚೇತನ್	9880800788	ಅನಿಲ್‌ಕುಮಾರ್	9880983448

ಉತ್ತರಾಖಂಡ: ಭಾರಿ ಹಿಮಪಾತ

ಗೋಪೇಶ್ವರ(ಉತ್ತರಾಖಂಡ): ಭಾರತ-ಚೀನಾ ಗಡಿ ಸಮೀಪದ ಚಮೋಲಿ ಜಿಲ್ಲೆಯ ನೀತಿ ಕಣಿವೆ ಹತ್ತಿರದಲ್ಲೇ ಶುಕ್ರವಾರ ಹಿಮಪಾತ ಸಂಭವಿಸಿದೆ.

ಗಡಿ ರಸ್ತೆ ನಿರ್ಮಾಣ ಸಂಸ್ಥೆ (ಬಿಆರ್‌ಒ) ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯಗಳನ್ನು ಕೈಗೊಂಡಿದ್ದಾರೆ. ಆದರೆ, ಅಪಾರ ಪ್ರಮಾಣ ಪ್ರಮಾಣದಲ್ಲಿ ಹಿಮಪಾತ ಸಂಭವಿಸುತ್ತಿರುವುದರಿಂದ ಯಾರ ಜತೆಯೂ ಸಂಪರ್ಕ ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಮನದಿ ಕುಸಿತದಿಂದ ಈ ಘಟನೆ ನಡೆದಿದೆ. ಇದೇ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ಹಲವು ಕಾರ್ಮಿಕರು ತೊಡಗಿದ್ದರು ಎಂದು ತಿಳಿಸಿದ್ದಾರೆ.

'ಘಟನೆ ಬಗ್ಗೆ ಅಧಿಕಾರಿಗಳ ಜತೆ ಸಂಪರ್ಕದಲ್ಲಿದ್ದು, ಮಾಹಿತಿ ಪಡೆಯಲಾಗುತ್ತಿದೆ' ಎಂದು ಉತ್ತರಾಖಂಡ ಮುಖ್ಯಮಂತ್ರಿ ತಿರಥ್ ಸಿಂಗ್ ರಾವತ್ ಟ್ವೀಟ್ ಮಾಡಿದ್ದಾರೆ.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು, ರಾಜ್ಯಕ್ಕೆ ಎಲ್ಲ ರೀತಿಯ ನೆರವು ನೀಡುವುದಾಗಿ ತಿಳಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಫೆಬ್ರುವರಿ ತಿಂಗಳಲ್ಲಿ ಸಂಭವಿಸಿದ ಹಿಮನದಿ ಕುಸಿತ ಸಂದರ್ಭದಲ್ಲಿ ಸುಮಾರು 80 ಮಂದಿ ಮೃತಪಟ್ಟಿದ್ದರು.

ಕೋವಿಡ್ ನಿಯಂತ್ರಣಕ್ಕೆ ಜಾಗೃತರಾಗಿ: ಸುತ್ತೂರು ಶ್ರೀ



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಮೈಸೂರು: 'ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು, ಔಷಧಿ, ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸುತ್ತಿದೆ. ಈ ಸ್ಥಿತಿ ಮುಂದುವರಿದರೆ ಇಡೀ ವ್ಯವಸ್ಥೆ ಅಸಹಾಯಕವಾಗಲಿದೆ. ಹೀಗಾಗಿ ಸದ್ಯ ವೈಯಕ್ತಿಕ ಹಾಗೂ ಸಾಮಾಜಿಕ ಎಚ್ಚರಿಕೆ ಅತ್ಯಂತ ಅಗತ್ಯ' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಹಿಂದೆಂದಿಗಿಂತಲೂ ಈಗ ಹೆಚ್ಚು ಜಾಗೃತರಾಗಬೇಕಿದೆ. ಒಬ್ಬರು ಇನ್ನೊಬ್ಬರನ್ನು ದೂಷಿಸುತ್ತಾ ಕೂರುವ ಸಮಯ ಇದಲ್ಲ. ಎಲ್ಲರೂ ಜತೆಯಾಗಿ ಕೋವಿಡ್ ವಿರುದ್ಧ ಸೆಣಸಬೇಕು. ತಡಮಾಡದೆ ಲಸಿಕೆ ಹಾಕಿಸಿಕೊಳ್ಳಿ, ಪರಿಚಿತರೆಲ್ಲರನ್ನು ಲಸಿಕೆ ಹಾಕಿಸಿಕೊಳ್ಳುವಂತೆ ಪ್ರೋತ್ಸಾಹಿಸಿ ಎಂದು ಮನವಿ ಮಾಡಿದ್ದಾರೆ.

ಚಿಂತಕ ರಹಮತ್ ತರೀಕೆರೆ ಅಭಿಮತ

'ಕೆಟ್ಟ ಕಾವ್ಯಕ್ಕಿಂತ ಸಾಮಾನ್ಯರ ಆತ್ಮಕಥನ ಲೇಸು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಿದ್ಧ ಲೇಖಕರು ಬರೆದ ಕೆಟ್ಟ ಕಾವ್ಯ ಅಥವಾ ಕಾದಂಬರಿ ಓದುವ ಬದಲು, ಜನಸಾಮಾನ್ಯರ ಹಾಗೂ ವಿವಿಧ ಕ್ಷೇತ್ರಗಳ ಜನರ ಆತ್ಮಕಥನಗಳನ್ನು ಓದಲು ಬಯಸುತ್ತೇನೆ' ಎಂದು ಚಿಂತಕ ರಹಮತ್ ತರೀಕೆರೆ ತಿಳಿಸಿದರು.

ವಿಶ್ವ ಪುಸ್ತಕ ದಿನದ ಅಂಗವಾಗಿ ಪುಸ್ತಕ ಪ್ರೀತಿ ಹಾಗೂ ಜನಶಕ್ತಿ ಮೀಡಿಯಾ ಸಹಯೋಗದಲ್ಲಿ ಆನ್‌ಲೈನ್ ಮೂಲಕ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೇಖಕಿ ರೇಣುಕಾ ನಿಡಗುಂದಿ ಕನ್ನಡಕ್ಕೆ ಅನುವಾದಿಸಿರುವ 'ಅಲೆಮಾರಿಯೊಬ್ಬಳ ಆತ್ಮವೃತ್ತಾಂತ' ಕೃತಿ ಕುರಿತು ಮಾತನಾಡಿದರು.



ರಹಮತ್ ತರೀಕೆರೆ

'ಲೇಖಕರು ಎಂದು ಪ್ರತಿಷ್ಠಾಪಿತಗೊಳ್ಳದವರು ಕೂಡ ತಮ್ಮ ಜೀವನದ ಅನುಭವಗಳನ್ನು ಬರೆಯುವ ಹೊಸ ಪ್ರಕಾರ ಹಾಗೂ ಆಯಾಮ ಕನ್ನಡ ಸಾಹಿತ್ಯ ಪ್ರವೇಶಿಸಿದೆ. ಬೇರೆ ಭಾಷೆಯ ಆತ್ಮಕಥನಗಳನ್ನೂ ತಮ್ಮದೇ ಎಂದು ಸ್ವೀಕರಿಸುವ ಪ್ರವೃತ್ತಿ ಬೆಳೆದಿದೆ' ಎಂದರು.

'ಸಾಮಾನ್ಯವಾಗಿ ಆತ್ಮಕಥನಗಳಲ್ಲಿ ಬಾಲ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿರುತ್ತದೆ. ಆದರೆ, ಈ ಕೃತಿಯಲ್ಲಿ ಬಾಲ್ಯದ ವಿನ್ಯಾಸವನ್ನು ಮುರಿಯಲಾಗಿದೆ. ಮಹಿಳಾ ಆತ್ಮಕಥೆಗಳಲ್ಲಿ ಹೊಸ ಆಯಾಮಗಳು ಕಂಡುಬರುತ್ತಿದ್ದು, ರೈತ, ರಂಗಕರ್ಮಿ, ಪತ್ರಕರ್ತ, ನಟ-ನಟಿ, ರಾಜಕಾರಣಿಗಳ ಆತ್ಮಕಥನಗಳು ಹೊಸ ವಿನ್ಯಾಸದಿಂದ ಕೂಡಿವೆ. ಇದರಿಂದ ಕನ್ನಡ ಸಾಹಿತ್ಯದ ಜೀವಂತಿಕೆ ಹೆಚ್ಚುತ್ತಿದೆ' ಎಂದು ಹೇಳಿದರು.

ಲೇಖಕಿ ರೇಣುಕಾ ನಿಡಗುಂದಿ,'ಈ ಅನುವಾದಿತ ಕೃತಿ ಮೂಲ ಅಜಿತ್ ಕೌರ್ ಅವರದ್ದು. ಪಂಜಾಬ್‌ನ ಘಟನೆಗಳನ್ನು ಅನುವಾದಿಸುವಾಗ ಕೆಲವು ಬಾರಿ ಭಾಷಾ ಸಮಸ್ಯೆ ಎದುರಾಯಿತು. ಕೊನೆಗೆ ಅಲ್ಲಿನ ಭಾಷಿಕರನ್ನೇ ಸಂಪರ್ಕಿಸಿ, ಅದೇ ರೀತಿ ಕನ್ನಡದಲ್ಲಿ ಕೃತಿ ಹೊರತರಲು ಸಹಕಾರಿಯಾಯಿತು' ಎಂದರು.

ಮಹಿಳಾ ಹೋರಾಟಗಾರ್ತಿ ಕೆ.ಎಸ್.ವಿಮಲಾ ಹಾಗೂ ಇತರರು ಭಾಗವಹಿಸಿದ್ದರು.

ಬೀಳ್ಕೊಡುಗೆಯಲ್ಲಿ ವಿಕಾಸ್ ಅವರಿಂದ ಬಹಿರಂಗ

ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿದ ಸಾಂವಿಧಾನಿಕ ಪೀಠದ ಐವರು ನ್ಯಾಯಮೂರ್ತಿಗಳಲ್ಲಿ ಬೊಬಡೆ ಅವರು ಸಹ ಇದ್ದರು.

'ಅಯೋಧ್ಯೆ ಬಿಕ್ಕಟ್ಟಿಗೆ ಶಾರುಕ್ ಮಧ್ಯಸ್ಥಿಕೆ ಬಯಸಿದ್ದ ಬೊಬಡೆ'

ನವದೆಹಲಿ: ಅಯೋಧ್ಯೆ ಪ್ರಕರಣವನ್ನು ಇತ್ಯರ್ಥಗೊಳಿಸಲು ನಟ ಶಾರುಕ್ ಖಾನ್ ಅವರು ಮಧ್ಯಸ್ಥಿಕೆಯ ಪಾತ್ರ ವಹಿಸಬೇಕು ಎಂದು ಶುಕ್ರವಾರ ನಿವೃತ್ತಿ ಹೊಂದಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ಬಯಸಿದ್ದರು.

ಸುಪ್ರೀಂ ಕೋರ್ಟ್‌ನ ಬಾರ್ ಅಸೋಸಿಯೇಷನ್ ಅಧ್ಯಕ್ಷ ವಿಕಾಸ್ ಸಿಂಗ್ ಈ ವಿಷಯ ಬಹಿರಂಗಪಡಿಸಿದ್ದಾರೆ.



ಎಸ್‌.ಎ. ಬೊಬಡೆ

ಶುಕ್ರವಾರ ನಡೆದ ವರ್ಚುವಲ್ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ವಿಕಾಸ್ ಸಿಂಗ್ ಅವರು, ಅಯೋಧ್ಯೆ ಪ್ರಕರಣವನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಬೇಕು ಎನ್ನುವುದು ಬೊಬಡೆ ಅವರ ಉದ್ದೇಶವಾಗಿತ್ತು. ಹೀಗಾಗಿ, ಜನಪ್ರಿಯ ನಟ ಶಾರುಕ್ ಖಾನ್ ಅವರ ನೆರವು ಪಡೆಯಲು ಬಯಸಿದ್ದರು. ಆದರೆ, ಅಂತಿಮವಾಗಿ ಇದು ಈಡೇರಲಿಲ್ಲ ಎಂದು ವಿವರಿಸಿದರು.

43 ವರ್ಷಗಳ ಕಾಲ ಕಾನೂನು ವೃತ್ತಿಯಲ್ಲಿದ್ದ ಬೊಬಡೆ ಅವರು, ಸುಪ್ರೀಂ ಕೋರ್ಟ್‌ನ 47ನೇ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದರು. ನಾಗ್ಪುರದಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಅವರು, ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಮತ್ತು ಮಧ್ಯ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ 2013ರ ಏಪ್ರಿಲ್ 12ರಂದು ನೇಮಕಗೊಂಡಿದ್ದರು. ಬಳಿಕ, 2019ರ ನವೆಂಬರ್ 18ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ತೆರಿಗೆ ಪ್ರಶ್ನೆಗಳಿಗೆ ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ಉತ್ತರ

ಬೆಂಗಳೂರು: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯ ಬೆಂಗಳೂರು ಘಟಕವು 'ಟ್ಯಾಕ್ಸ್ ಕ್ಲಿನಿಕ್'ಗೆ ಚಾಲನೆ ನೀಡಿದ್ದು, ಈ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ತಜ್ಞರು ತೆರಿಗೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ.

www.bangaloreicai.org ವೆಬ್‌ಸೈಟ್‌ಗೆ ಭೇಟಿ ನೀಡಿ ಸಾರ್ವಜನಿಕರು ಆದಾಯ ತೆರಿಗೆಯಂತಹ ನೇರ ತೆರಿಗೆಗಳ ಬಗ್ಗೆ ಅಥವಾ ಜಿಎಸ್‌ಟಿಯಂತಹ ಪರೋಕ್ಷ ತೆರಿಗೆಗಳ ಬಗ್ಗೆ ಪ್ರಶ್ನೆಗಳನ್ನು ಸಲ್ಲಿಸಬಹುದು. ಈ ಪ್ರಶ್ನೆಗಳಿಗೆ ತಜ್ಞರು ಉತ್ತರ ನೀಡುತ್ತಾರೆ ಎಂದು ಸಂಸ್ಥೆಯ ಬೆಂಗಳೂರು ಘಟಕವು ಪ್ರಕಟಣೆಯಲ್ಲಿ ತಿಳಿಸಿದೆ.

ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯ ಹಿರಿಯ ಸದಸ್ಯರು, ವಿಷಯ ತಜ್ಞರು ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಪ್ರಶ್ನೆ ಕೇಳಲು, ಉತ್ತರ ಪಡೆಯಲು ಶುಲ್ಕ ಕೊಡಬೇಕಿಲ್ಲ.

ರೇರಾ ಕುರಿತ ಮಾಹಿತಿ, ತೆರಿಗೆ ಬದಲಾವಣೆಗಳು, ವಿದೇಶಿ ವಿನಿಮಯ, ಷೇರು ಮಾರುಕಟ್ಟೆ ಕುರಿತ ಪ್ರಶ್ನೆಗಳು, ಮನೆ ಅಥವಾ ನಿವೇಶನ ಮಾರಾಟ ಮಾಡಿದಾಗ ಪಾವತಿಸಬೇಕಾದ ತೆರಿಗೆ ಕುರಿತ ಪ್ರಶ್ನೆಗಳನ್ನೂ ಈ ವೆಬ್‌ಸೈಟ್ ಮೂಲಕ ಕೇಳಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ 26 ರಿಂದ

ಬೆಂಗಳೂರು: ನಗರದ ಆಡುಗೋಡಿ ಉಪಕೇಂದ್ರದ ವ್ಯಾಪ್ತಿಯಲ್ಲಿ 26ರಿಂದ ಮೇ 1ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕೈಗಾರಿಕಾ ಬಡಾವಣೆ ಕೋರಮಂಗಲ ಐದನೇ ಬ್ಲಾಕ್, ಮಡಿವಾಳ, ವೆಂಕಟೇಶ್ವರ ಬಡಾವಣೆ, ಚಿಕ್ಕ ಆಡುಗೋಡಿ, ಜೋಗಿ ಕಾಲೊನಿ, ಈಸ್ಟ್ ಲ್ಯಾಂಡ್ ಹೋಲ್ಡಿಂಗ್ ಕಟ್ಟಡ, ಸೇಂಟ್ ಜಾನ್ ಸ್ಟಾಫ್ ಕ್ವಾರ್ಟರ್ಸ್, ಮಾರುತಿ ನಗರ. ಆಡುಗೋಡಿ 7 ಮತ್ತು 8ನೇ ಬ್ಲಾಕ್, ಸಿ.ಎ.ಆರ್. ಪೊಲೀಸ್ ಕ್ವಾರ್ಟರ್ಸ್, ಮಾರುತಿ ನಗರ, ಡಾಲರ್ಸ್ ಕಾಲೊನಿ, 100 ಅಡಿ ವರ್ತುಲ ರಸ್ತೆ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.





ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ವಿಲ್ಸನ್ ಗಾರ್ಡನ್‌ನ ರಸ್ತೆಯೊಂದರಲ್ಲಿ ಬಸ್ಸೊಂದು ಸಿಲುಕಿಕೊಂಡಿತ್ತು (ಎಡಚಿತ್ರ) ಶೇಷಾದ್ರಿಪುರದ ಮುಖ್ಯರಸ್ತೆಯಲ್ಲಿ ಕಾರೊಂದು ಗುಂಡಿಯಲ್ಲಿ ಸಿಲುಕಿಕೊಂಡಿತ್ತು ಪ್ರಜಾವಾಣಿ ಚಿತ್ರಗಳು/ ಎಸ್‌.ಕೆ. ದಿನೇಶ್

ಗುಡುಗು– ಸಿಡಿಲು ಸಹಿತ ಸುರಿದ ವರುಣ ● ಕೆಳಸೇತುವೆಗಳಲ್ಲಿ ತುಂಬಿ ಹರಿದ ನೀರು

ಭಾರಿ ಮಳೆ: ಮನೆಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ದಿನಗಳಿಂದ ಸಂಜೆ ಹೊತ್ತಿನಲ್ಲಿ ಮಳೆ ಸುರಿದಿದ್ದು, ಶುಕ್ರವಾರ ಸಂಜೆ ಮಳೆ ಅಬ್ಬರ ಜೋರಾಗಿತ್ತು.

ನಗರದ ಬಹುತೇಕ ಪ್ರದೇಶಗಳಲ್ಲಿ ಒಂದೂವರೆ ಗಂಟೆ ನಿರಂತರವಾಗಿ ಸುರಿದ ಮಳೆಯಿಂದಾಗಿ, ಪ್ರಮುಖ ರಸ್ತೆಗಳು ಹಾಗೂ ಕೆಳಸೇತುವೆಗಳು ಹೊಳೆಯಂತಾದವು. ಕೆಲವೆಡೆ ಮನೆಗಳಿಗೂ ನೀರು ನುಗ್ಗಿದ್ದರಿಂದ, ನಿವಾಸಿಗಳು ತೊಂದರೆ ಅನುಭವಿಸಿದರು.

ಶುಕ್ರವಾರ ಬೆಳಿಗ್ಗೆಯಿಂದ ನಗರದಲ್ಲಿ ಬಿಸಿಲು ಇತ್ತು. ಆಗಾಗ ಮಾತ್ರ ಮೋಡ ಕವಿದ ವಾತಾವರಣ ಕಾಣಿಸಿತ್ತು. ಸಂಜೆ 6 ಗಂಟೆ ಸುಮಾರಿಗೆ ಮೋಡ ಕವಿದ ವಾತಾವರಣದೊಂದಿಗೆ ಜೋರಾಗಿ ಗಾಳಿ ಬೀಸಿತು.

6.30 ಗಂಟೆ ಸುಮಾರಿಗೆ ಶುರುವಾದ ಮಳೆಯ ಅಬ್ಬರ, ರಾತ್ರಿ 8 ಗಂಟೆಯವರೆಗೂ ಇತ್ತು. ಈ ಅವಧಿಯಲ್ಲಿ ಗುಡುಗು– ಸಿಡಿಲು ಆರ್ಭಟವೂ ಹೆಚ್ಚಾಗಿತ್ತು.


ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಬಸವನಗುಡಿ, ರಾಜಾಜಿನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ, ಯಶವಂತಪುರ, ಜಾಲಹಳ್ಳಿ, ಪೀಣ್ಯ, ಲಗ್ಗೆರೆ, ಕೆಂಗೇರಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಜೋರಾಗಿ ಸುರಿಯಿತು.

ಧಾರಾಕಾರ ಮಳೆಯಿಂದಾಗಿ ರಸ್ತೆ ಹಾಗೂ ಕೆಳಸೇತುವೆಯಲ್ಲಿ ನೀರು ಹರಿಯಿತು. ಅದರ ಜೊತೆಗೆ ಕಾಲುವೆ ಹಾಗೂ ಚರಂಡಿ ತ್ಯಾಜ್ಯವೆಲ್ಲ ರಸ್ತೆ ಮೇಲೆ ಬಂದಿತ್ತು.

ಮೇಖ್ರಿ ವೃತ್ತದ ಮುಖ್ಯರಸ್ತೆ, ಕಾವೇರಿ ಜಂಕ್ಷನ್, ಶಿವಾನಂದ ವೃತ್ತ, ಮೆಜೆಸ್ಟಿಕ್, ಓಕಳಿಪುರ, ಮಲ್ಲೇಶ್ವರ ಕೆಳಸೇತುವೆಯಲ್ಲೂ ನೀರು ಹರಿಯುವಿಕೆ ಪ್ರಮಾಣ ಹೆಚ್ಚಿತ್ತು. ಅದರಲ್ಲೇ ವಾಹನಗಳು ಸಂಚರಿಸಿದವು.



ನಗರದ ಪ್ರಮೋದ್ ಲೇಔಟ್‌ಗೆ ಮಳೆ ನೀರು ನುಗ್ಗಿ ತೊಂದರೆಯಾಯಿತು ಪ್ರಜಾವಾಣಿ ಚಿತ್ರ/ ಇರ್ಷಾದ್ ಮೊಹಮದ್



ಮಾಗಡಿರಸ್ತೆಯ ಅಗ್ರಹಾರ ದಾಸರಹಳ್ಳಿ ಬಸ್ ನಿಲ್ದಾಣದ ಬಳಿ ಕಾರಿನ ಮೇಲೆ ಮರ ಉರುಳಿ ಬಿದ್ದಿದೆ ಪ್ರಜಾವಾಣಿ ಚಿತ್ರ/ಈಶ್ವರ ಬಡಿಗೇರ್

ಕೆಲ ವಾಹನಗಳು ನೀರಿನಲ್ಲೇ ಕೆಟ್ಟು ನಿಂತಿದ್ದವು. ಅದರ ಜೊತೆಗೆ ಸವಾರರು, ನೀರಿನ ಮಧ್ಯೆಯೇ ನಿಂತುಕೊಂಡಿದ್ದರು. ಸ್ಥಳೀಯರೇ ವಾಹನಗಳನ್ನು ತಳ್ಳಿ ದಡ ಮುಟ್ಟಿಸಿದರು.

ವಿಜಿನಾಪುರದಲ್ಲಿ ಮನೆಗಳಿಗೆ ನುಗ್ಗಿದ ನೀರು: ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವಿಜಿನಾಪುರ ಕೊಳಚೆ ಪ್ರದೇಶದ ಮನೆಗಳಿಗೆ ನೀರು ನುಗ್ಗಿತ್ತು. ನಿವಾಸಿಗಳು, ನೀರು ಹೊರಹಾಕುವುದರಲ್ಲೇ ರಾತ್ರಿ ಕಳೆದರು.

ನೀರಿನ ಜೊತೆಯಲ್ಲೇ ಹುಳುಗಳು ಹಾಗೂ ತ್ಯಾಜ್ಯವೆಲ್ಲ ಮನೆಯೊಳಗೆ ಸೇರಿತ್ತು. 'ಜೋರು ಮಳೆ ಬಂದಾಗಲೆಲ್ಲ ನೀರು ಮನೆಯೊಳಗೆ ನುಗ್ಗುತ್ತಿದೆ. ಈ ಬಗ್ಗೆ ಹಲವು ಬಾರಿ ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಸ್ಥಳೀಯರು ದೂರಿದರು.

ಸಂಚಾರ ದಟ್ಟಣೆ: ಕೆಲಸ ಹಾಗೂ ಮಾರುಕಟ್ಟೆಗೆ ಬಂದಿದ್ದ ಸಾರ್ವಜನಿಕರು, ಕರ್ಫ್ಯೂ ಜಾರಿಗೂ ಮುನ್ನವೇ ಮನೆ ಸೇರಲು ಮುಂದಾಗಿದ್ದರು. ಸಂಜೆ ಮಳೆ ಬಂದಿದ್ದರಿಂದಾಗಿ ಅವಸರದಲ್ಲಿ ವಾಹನಗಳನ್ನು ಚಲಾಯಿಸಿದರು. ಇದರಿಂದಾಗಿ ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಮೇಖ್ರಿ ವೃತ್ತ, ಓಕಳಿಪುರ, ಮೆಜೆಸ್ಟಿಕ್ ಕೆಳಸೇತುವೆಗಳಲ್ಲೂ ನೀರು ನಿಂತಿದ್ದರಿಂದಾಗಿ ವಾಹನಗಳ ಸಂಚಾರ ನಿಧಾನವಾಗಿತ್ತು. ಈ ಭಾಗದಲ್ಲಿ ವಾಹನಗಳ ದಟ್ಟಣೆ ಕಂಡುಬಂತು. ಕೆಲ ವಾಹನಗಳು ಕೆಟ್ಟು ನಿಲ್ಲುತ್ತಿದ್ದಂತೆ, ಅದರ ಹಿಂದೆಯೇ ವಾಹನಗಳು ಸಾಲುಗಟ್ಟಿ ನಿಂತಿದ್ದವು.

'ಕೆಳಸೇತುವೆ ಹಾಗೂ ರಸ್ತೆಯಲ್ಲಿ ನೀರು ನಿಂತಿದ್ದ ಬಗ್ಗೆ ದೂರುಗಳು ಬಂದಿದೆ. ಕೆಲವೆಡೆ ಮರದ ಟೊಂಗೆಗಳು ಬಿದ್ದಿವೆ. ದೂರುಗಳನ್ನು ಸ್ವೀಕರಿಸಿ ಆಯಾ ವಲಯದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ವಿದ್ಯುತ್ ಕಡಿತ: ಜೋರು ಮಳೆ ಸಂದರ್ಭದಲ್ಲೇ ಗಾಳಿ ವೇಗವಾಗಿ ಬೀಸಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ನಗರದ ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು. ಮಳೆ ಕಡಿಮೆಯಾದ ನಂತರ, ವಿದ್ಯುತ್ ಸರಬರಾಜು ಪುನಃ ಆರಂಭವಾಯಿತು.

ಮಳೆಯಲ್ಲೇ ಕರ್ಫ್ಯೂ ಸಿದ್ಧತೆ

ಕೊರೊನಾ ಸೋಂಕು ತಡೆಗಾಗಿ ರಾತ್ರಿಯಿಂದಲೇ ಕರ್ಫ್ಯೂ ಜಾರಿ ಮಾಡಲಾಗಿದ್ದು, ಸಾರ್ವಜನಿಕರ ಸಂಚಾರ ನಿರ್ಬಂಧಿಸಲು ಮಳೆಯಲ್ಲೇ ಪೊಲೀಸರು ಸಿದ್ಧತೆ ಮಾಡಿದರು.

ಬ್ಯಾರಿಕೇಡ್ ಹಾಗೂ ಸೂಚನಾ ಫಲಕಗಳನ್ನು ಶುಕ್ರವಾರ ಮಧ್ಯಾಹ್ನದಿಂದಲೇ ವಾಹನಗಳಲ್ಲಿ ನಿಗದಿತ ಸ್ಥಳಗಳಿಗೆ ಸಾಗಿಸಲಾಯಿತು. ಅವುಗಳನ್ನು ನಿಗದಿತ ಸ್ಥಳಗಳಲ್ಲಿ ಇರಿಸಿ ಹೊಂದಿಸುವ ಸಂದರ್ಭದಲ್ಲೇ ಮಳೆ ಶುರುವಾಯಿತು. ಕರ್ತವ್ಯ ನಿರತ ಪೊಲೀಸರು, ಮಳೆಯಲ್ಲೇ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿದರು. ಕೆಲವರು, ಸುರಕ್ಷಿತ ಸ್ಥಳಗಳಲ್ಲಿ ನಿಂತು ಮಳೆಯಿಂದ ರಕ್ಷಣೆ ಪಡೆದರು. ಮಳೆ ಕಡಿಮೆಯಾದ ನಂತರವೇ ಸಿದ್ಧತೆ ಕೆಲಸ ಪುನಃ ಆರಂಭವಾಗಿ ಪೂರ್ಣಗೊಂಡಿತು.

ಸಂತ್ರಸ್ತರಿಗೆ 162 ಮನೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ 2018ರ ಆಗಸ್ಟ್‌ನಲ್ಲಿ ಸುರಿದಿದ್ದ ಭಾರಿ ಮಳೆಯಿಂದ ನೆಲೆ ಕಳೆದುಕೊಂಡು ಸಂತ್ರಸ್ತರಾಗಿದ್ದ 162 ಕುಟುಂಬಗಳಿಗೆ ಶುಕ್ರವಾರ ಮನೆ ಹಸ್ತಾಂತರಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಫಲಾನುಭವಿಗಳಿಗೆ ಮನೆಗಳ ಕೀ ನೀಡಿ ಶುಭ ಕೋರಿದರು.

ತಾಲ್ಲೂಕಿನ ಬಿಳಿಗೆರೆ ಗ್ರಾಮದಲ್ಲಿ 22 ಹಾಗೂ ಗಾಳಿಬೀಡು ಗ್ರಾಮದಲ್ಲಿ 140 ಮನೆಗಳನ್ನು ಹಸ್ತಾಂತರಿಸಲಾಯಿತು. ಮನೆಗಳನ್ನು ಮಾರಾಟ ಮಾಡದಂತೆ ಸಂತ್ರಸ್ತರಲ್ಲಿ ಸಚಿವರು ಮನವಿ ಮಾಡಿದರು.

'ಪುರುಷರ ಹೆಸರಿಗೆ ಮನೆ ನೀಡಿದರೆ ಮಾರಾಟ ಮಾಡಿಕೊಳ್ಳುವ ಸಾಧ್ಯತೆಯಿದೆ. ಮುಂದಿನ ದಿನಗಳಲ್ಲಿ ಮಹಿಳೆಯರ ಹೆಸರಿಗೇ ಮನೆ ನೀಡಲಾಗುವುದು. ಪ್ರತಿಯೊಬ್ಬರಿಗೂ ಮನೆ ನೀಡಬೇಕೆಂಬ ಸರ್ಕಾರದ ಆಶಯವು ಕೊಡಗಿನಲ್ಲಿ ಈಡೇರಿದಂತಾಗಿದೆ' ಎಂದು ಸೋಮಣ್ಣ ತಿಳಿಸಿದರು.

'ಒಟ್ಟು 836 ಕುಟುಂಬಗಳು ನೆಲೆ ಕಳೆದುಕೊಂಡಿದ್ದವು. 786 ಫಲಾನುಭವಿಗಳಿಗೆ ಮನೆ ಹಸ್ತಾಂತರ ಮಾಡಲಾಗಿದೆ. ಕೆ.ನಿಡುಗಣೆ ಗ್ರಾಮದಲ್ಲೂ ನಿರ್ಮಿಸುತ್ತಿರುವ ಮನೆಗಳನ್ನು ತಿಂಗಳಲ್ಲಿ ಹಸ್ತಾಂತರ ಮಾಡುತ್ತೇವೆ' ಎಂದರು. ರಾಜೀವ್ ಗಾಂಧಿ ವಸತಿ ನಿಗಮದ ಅಡಿ ಮನೆ ನಿರ್ಮಿಸಲಾಗಿದ್ದು, ಪ್ರತಿ ಮನೆಗೆ ₹ 9.85 ಲಕ್ಷ ವೆಚ್ಚ ಮಾಡಲಾಗಿದೆ.



ಮಡಿಕೇರಿ ತಾಲ್ಲೂಕಿನ ಬಿಳಿಗಿರಿ ಗ್ರಾಮದಲ್ಲಿ ಸಂತ್ರಸ್ತರಿಗೆ ಹಸ್ತಾಂತರಿಸಿದ ಮನೆಗಳು

ಸರಕು ಸಾಗಣೆ ವಾಹನ ಸಂಚಾರ ನಿಷೇಧ

ಜೋಡುಪಾಲದ ಬಳಿ ಹೆದ್ದಾರಿ ಕುಸಿತ

ಮಡಿಕೇರಿ: ಮೈಸೂರು– ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ ಜೋಡುಪಾಲದ ಬಳಿ ರಸ್ತೆಗೆ ಹಾಕಿದ್ದ ಮಣ್ಣು ಕುಸಿದಿದ್ದು, ಸರಕು ಸಾಗಣೆ ವಾಹನ ಸಂಚಾರ ನಿಷೇಧಿಸಲಾಗಿದೆ. ನಾಲ್ಕು ದಿನಗಳಿಂದ ಸುರಿದ ಮಳೆಯಿಂದ ಮಣ್ಣು ಸಡಿಲಗೊಂಡು ಕುಸಿದಿದೆ. ಹೆದ್ದಾರಿ ಮತ್ತೆ ಅಪಾಯದಲ್ಲಿದೆ.

ಸ್ಥಳಕ್ಕೆ ಶಾಸಕ ಕೆ.ಜಿ.ಬೋಪಯ್ಯ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು. ರಸ್ತೆ ಬದಿ ನಿರ್ಮಾಣ ಮಾಡಲಾಗಿರುವ ಚರಂಡಿ ಬಳಿ ಮಣ್ಣು ಕುಸಿದಿದ್ದು, ರಸ್ತೆಯ ಒಳಭಾಗದಿಂದ ನೀರು ಹರಿಯುತ್ತಿದೆ. ತಕ್ಷಣ ರಸ್ತೆ ಸರಿಪಡಿಸುವಂತೆ ರಾಷ್ಟ್ರೀಯ ಹೆದ್ದಾರಿ ವಿಭಾಗದ ಎಂಜಿನಿಯರ್‌ಗೆ ಬೋಪಯ್ಯ ಸೂಚಿಸಿದರು.



ಜೋಡುಪಾಲದ ಬಳಿ ಹೆದ್ದಾರಿ ಕುಸಿದಿದೆ

ಅಪಘಾತ: ಈರುಳ್ಳಿ ವ್ಯಾಪಾರಿ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಈರುಳ್ಳಿ ವ್ಯಾಪಾರಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ವ್ಯಾಪಾರಿ ತಬರೇಜ್ ಪಾಷಾ (21) ಹಾಗೂ ಮಂಜುಳಾ ಮೃತರು. ಪ್ರತ್ಯೇಕ ಅಪಘಾತಗಳ ಸಂಬಂಧ ವೈಟ್‌ಫೀಲ್ಡ್ ಹಾಗೂ ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿಜಿನಾಪುರದ ತಬರೇಜ್, ಆಟೊ ಮಾಲೀಕರಾಗಿದ್ದರು. ತಮ್ಮ ಆಟೊದಲ್ಲಿ ನಗರದಲ್ಲಿ ಸುತ್ತಾಡಿ ಈರುಳ್ಳಿ ಮಾರುತ್ತಿದ್ದರು. ಗುರುವಾರ ರಾತ್ರಿ ಆಟೊದಲ್ಲಿ ಚನ್ನಸಂದ್ರ ಕಡೆಯಿಂದ ಹೋಪ್ ಫಾರಂ ಕಡೆಗೆ ವೇಗವಾಗಿ ಹೊರಟಿದ್ದರು. ಅದೇ ಸಂದರ್ಭದಲ್ಲೇ ಎಂ.ವಿ.ಜೆ. ಕಾಲೇಜು ಎದುರು ಪುಟ್‌ಪಾತ್‌ಗೆ ಆಟೊ ಗುದ್ದಿ ಉರುಳಿ ಬಿದ್ದಿತ್ತು' ಎಂದು ಪೊಲೀಸರು ಹೇಳಿದರು.

'ರಸ್ತೆ ಮೇಲೆ ಬಿದ್ದ ತಬರೇಜ್ ಮುಖ, ತಲೆ, ಎದೆ ಮತ್ತು ಸೊಂಟಕ್ಕೆ ತೀವ್ರ ಗಾಯವಾಗಿತ್ತು. ಸ್ಥಳೀಯರೇ ಅವರನ್ನು ವೈದೇಹಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ತಬರೇಜ್ ಅಸುನೀಗಿದ್ದಾರೆ' ಎಂದೂ ತಿಳಿಸಿದರು.

ವಿಭಜಕಕ್ಕೆ ಗುದ್ದಿದ ಬೈಕ್: 'ಸಂಬಂಧಿಕರ ಮನೆಯಲ್ಲಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಪಸು ಬೈಕ್‌ನಲ್ಲಿ ಹೋಗುವಾಗ ಅಪಘಾತವಾಗಿ ಮಂಜುಳಾ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಣ್ಣೂರು – ಬಾಗಲೂರು ರಸ್ತೆಯಲ್ಲಿ ವಿಭಜಕಕ್ಕೆ ಬೈಕ್ ಗುದ್ದಿತ್ತು. ಹಿಂಬದಿಯಲ್ಲಿ ಕುಳಿತಿದ್ದ ಮಂಜುಳಾ ಅವರಿಗೆ ತೀವ್ರ ಗಾಯವಾಗಿ ಅಸುನೀಗಿದ್ದಾರೆ. ಸವಾರ ಪವನ್‌ಕುಮಾರ್ ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ತಿಳಿಸಿದರು.

ಬಿ.ಇಡಿ ಪ್ರವೇಶ ಕೊನೆಯ ಅವಕಾಶ

ಬೆಂಗಳೂರು: ಬಿ.ಇಡಿ ಕೋರ್ಸ್ ದಾಖಲಾತಿಗೆ ಸಂಬಂಧಿಸಿದಂತೆ ಸರ್ಕಾರಿ ಕೋಟಾದಲ್ಲಿ ಲಭ್ಯವಿರುವ ಸೀಟುಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರಿಕೃತ ದಾಖಲಾತಿ ಘಟಕ ಬಿಡುಗಡೆ ಮಾಡಿದೆ.

ಕಲಾ ವಿಭಾಗದ ಅಭ್ಯರ್ಥಿಗಳು ದಾಖಲಿಸಿರುವ ಕಾಲೇಜುಗಳ ಆಯ್ಕೆಗಳನ್ನು ಪರಿಗಣಿಸಿ ಅಂತಿಮ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನಿಗದಿತ ಶುಲ್ಕ ಪಾವತಿಸಿ ಹಂಚಿಕೆಯಾದ ಕಾಲೇಜಿಗೆ ದಾಖಲಾಗಲು ಏ.28ರವರೆಗೆ ಅವಕಾಶ ನೀಡಲಾಗಿದೆ.

ವಿವರಗಳಿಗೆ http://schooleducation.kar.nic.in/ ಸಂಪರ್ಕಿಸಬಹುದು.

'ಸರ್ವೋತ್ತಮ ಸೇವಾ' ಪ್ರಶಸ್ತಿ ಪ್ರಕಟ

ಬೆಂಗಳೂರು: ಅತ್ಯುನ್ನತ ಸಾಧನೆ ಮಾಡಿದ ಅಧಿಕಾರಿಗಳು ಮತ್ತು ನೌಕರರಿಗೆ ರಾಜ್ಯ ಸರ್ಕಾರ ನೀಡುವ 'ಸರ್ವೋತ್ತಮ ಸೇವಾ' ಪ್ರಶಸ್ತಿಗೆ 10 ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಡಾ.ಟಿ.ಎಸ್.ಲತಾ (ಸಾರ್ವಜನಿಕ ಸಂಪರ್ಕಾಧಿಕಾರಿ, ಕೆಎಸ್‌ಆರ್‌ಟಿಸಿ), ಆರ್.ಚಂದ್ರಶೇಖರ್ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿ), ಗಂಗಾರಾಮ್ (ಪಿಡಿಒ, ದೊಡ್ಡಜಾಲ), ಬಿ.ಎನ್. ಗಿರೀಶ್ (ತಹಶೀಲ್ದಾರ್, ದಾವಣಗೆರೆ), ಬಸಲಿಂಗಯ್ಯ ಆರ್ ಹಿರೇಮಠ (ಉಪ ಆಯುಕ್ತ, ಅಬಕಾರಿ ಇಲಾಖೆ, ಬೆಂಗಳೂರು), ಜಿ.ಹರ್ಷ (ಪ್ರಥಮ ದರ್ಜೆ ಸಹಾಯಕ, ಎಜಿ ಕಚೇರಿ), ಎಚ್.ಪಿ.ಹೇಮಾವತಿ (ಶುಶ್ರೂಷಾಧಿಕಾರಿ, ಸಿ.ವಿ. ರಾಮನ್ ನಗರ ಸರ್ಕಾರಿ ಆಸ್ಪತ್ರೆ), ಆಂಜನೇಯ (ಹಿರಿಯ ಆರೋಗ್ಯ ಸಹಾಯಕ, ಡಿವಿಬಿಡಿಸಿ, ಕೂಡ್ಲಿಗಿ), ಚಂದ್ರಮತಿ ಎಂ ಹೆಗ್ಗಡೆ (ಶುಶ್ರೂಷಕ ಅಧೀಕ್ಷಕ, ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ), ಚಂದ್ರಶೇಖರ್ ನಾಯಕ್ (ಉಪ ನಿರ್ದೇಶಕರು, ಜಿಲ್ಲಾಧಿಕಾರಿ ಕಚೇರಿ, ಮಣಿಪಾಲ). ಪ್ರಶಸ್ತಿಯು ತಲಾ ₹25 ಸಾವಿರ ಪ್ರೋತ್ಸಾಹಧನ, ಪ್ರಮಾಣ ಪತ್ರವನ್ನು ಒಳಗೊಂಡಿದೆ.

'ಮತ ಎಣಿಕೆ ಮುಂದೂಡದಿದ್ದರೆ ಪಿಐಎಲ್'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಮೇ 3ರಂದು ನಡೆಯಬೇಕಿರುವ ಮೂರು ಕ್ಷೇತ್ರಗಳ ಉಪ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆಯನ್ನು, ಕೋವಿಡ್ ಹರಡುವ ಪ್ರಮಾಣ ಹೆಚ್ಚಾಗುತ್ತಿರುವ ಕಾರಣದಿಂದಾಗಿ ಮುಂದೂಡಬೇಕು' ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಮುಖ್ಯ ಕಾರ್ಯದರ್ಶಿ ಹಾಗೂ ಚುನಾವಣಾ ಆಯೋಗಕ್ಕೆ ಶುಕ್ರವಾರ ಪತ್ರ ಬರೆದಿದ್ದಾರೆ.

'ಉಪ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ನಾಯಕರು ಕೋವಿಡ್ ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಪ್ರಚಾರ ಸಭೆಗಳನ್ನು ನಡೆಸಿದರು. ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಸಿಲುಕಿ ಕಠಿಣ ಕ್ರಮ ವಹಿಸಲಿಲ್ಲ. ಗಣ್ಯರ ವಿರುದ್ಧ ಎಫ್‌ಐಆರ್ ದಾಖಲಿಸದೆ, ಅಲ್ಲಲ್ಲಿ ಅಲ್ಪ ಸ್ವಲ್ಪ ದಂಡ ವಿಧಿಸಿ ಕೈತೊಳೆದುಕೊಂಡರು. ಉಪ ಚುನಾವಣೆ ಘೋಷಣೆಗೆ ಮುನ್ನ ಇದ್ದ ಪ್ರಕರಣಗಳು ಹಾಗೂ ಬಳಿಕ ಏರಿಕೆಯಾದ ಕೋವಿಡ್ ಪ್ರಕರಣಗಳನ್ನು ಗಮನಿಸಿದರೆ, ಪ್ರಚಾರ ಸಮಾವೇಶಗಳೇ ಕಾರಣ ಆಗಿರುವುದನ್ನು ಗಮನಿಸಬಹುದು' ಎಂದಿದ್ದಾರೆ.

'ನೂರಾರು ಜನರು ಸೇರುವುದಕ್ಕೆ ಕಾರಣವಾಗುವ ಮತ ಎಣಿಕೆ ಪ್ರಕ್ರಿಯೆಯನ್ನು ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಮುಂದೂಡಬೇಕು. ಇಲ್ಲದಿದ್ದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ದಾಖಲಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ವರದಿ ನಂತರ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ

ಡೀಮ್ಡ್ ಫಾರೆಸ್ಟ್ ಸಮೀಕ್ಷೆ: ಲಿಂಬಾವಳಿ

ಪ್ರಜಾವಾಣಿ ವಾರ್ತೆ

ಪುತ್ತೂರು: 'ರಾಜ್ಯದಲ್ಲಿರುವ ಡೀಮ್ಡ್ ಫಾರೆಸ್ಟ್ ಬಗ್ಗೆ ಮತ್ತೊಮ್ಮೆ ವೈಜ್ಞಾನಿಕ ಸಮೀಕ್ಷೆ ಮಾಡಿ, ಸಮಗ್ರ ವರದಿ ಸಲ್ಲಿಸಲು ಇಲಾಖೆಗೆ ಸೂಚಿಸಿದ್ದೇನೆ. ಅಂತಿಮ ವರದಿ ಬಂದ ಬಳಿಕ ಆ ಬಗ್ಗೆ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲಾಗುವುದು' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡೀಮ್ಡ್ ಫಾರೆಸ್ಟ್‌ನಲ್ಲಿ ಎಷ್ಟು ಭಾಗದಲ್ಲಿ ವಸತಿ, ಕೃಷಿ ಇತ್ಯಾದಿ ಇದೆ. ಸಾರ್ವಜನಿಕ ವ್ಯವಸ್ಥೆಗಾಗಿ ಎಷ್ಟು ಪ್ರದೇಶ ಬೇಕು ಎಂಬುದನ್ನು ನೋಡಿಕೊಂಡು, ಅರಣ್ಯ ವ್ಯಾಪ್ತಿಯಲ್ಲಿ ಎಷ್ಟನ್ನು ಉಳಿಸಿಕೊಳ್ಳಹುದು ಎಂಬುದನ್ನು ವರದಿಯಲ್ಲಿ ದಾಖಲಿಸಲಾಗುತ್ತದೆ. ಡೀಮ್ಡ್ ಫಾರೆಸ್ಟ್‌ನಲ್ಲಿ ಎಷ್ಟನ್ನು ಅರಣ್ಯಕ್ಕಾಗಿ ಉಳಿಸಿಕೊಳ್ಳುತ್ತೀರಿ ಎಂದು ಕೋರ್ಟ್ ಕೇಳಿರುವ ಕಾರಣ ಈ ವರದಿ ಮಹತ್ವದ್ದಾಗಿದೆ' ಎಂದರು.

'ಕುದುರೆಮುಖ ವನ್ಯಜೀವಿ ವಲಯ ಪ್ರದೇಶದಲ್ಲಿ ವಾಸ ಮಾಡುತ್ತಿರುವ 624 ಕುಟುಂಬಗಳು ಅರಣ್ಯ ಬಿಟ್ಟು ಹೊರ ಬರಲು ಒಪ್ಪಿವೆ. ಇನ್ನೂ 760 ಕುಟುಂಬಗಳು ಬಾಕಿ ಇದೆ. ಇವರ ಮನವೊಲಿಕೆ ಕಾರ್ಯ ನಡೆಯುತ್ತಿದೆ. ಹೊರ ಬರುವ ಕುಟುಂಬಗಳಿಗೆ ಉತ್ತಮ ಪರಿಹಾರ, ನಿವೇಶನ ಪ್ಯಾಕೇಜ್ ಇದೆ. ವನ್ಯಧಾಮದಿಂದ ಹೊರ ಬರುವ ಮೂಲಕ ಪ್ರಾಣಿಗಳಿಗೆ ಬದುಕಲು ಬಿಡಬೇಕು ಎಂಬುದು ನಮ್ಮ ಮನವಿ' ಎಂದರು.



ಗೋಕಾಕ ತಾಲ್ಲೂಕಿನ ದಂಡಾಪುರದ ಕೃಷಿಕ ರಾಯಪ್ಪ ರಾಜಾಪುರ ಚೆಂಡು ಹೂವು ಹಾಗೂ ಹೂಕೋಸನ್ನು ಅಲ್ಲಿನ ಮಿನಿ ವಿಧಾನಸೌಧ ಆವರಣದಲ್ಲಿ ಚೆಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

ಸಿಗದ ಬೆಲೆ: ಚೆಂಡು ಹೂ ಚೆಲ್ಲಿ ಪ್ರತಿಭಟನೆ

ಗೋಕಾಕ (ಬೆಳಗಾವಿ ಜಿಲ್ಲೆ): ದಿಢೀರನೆ ಭಾಗಶಃ ಲಾಕ್‌ಡೌನ್ ಜಾರಿಯಾಗಿ ಸರಿಯಾದ ಬೆಲೆ ಸಿಗದಿದ್ದಕ್ಕೆ ಆಕ್ರೋಶಗೊಂಡ ತಾಲ್ಲೂಕಿನ ದಂಡಾಪುರದ ರೈತ ರಾಮಪ್ಪ ಸಿದ್ದಪ್ಪ ರಾಜಾಪುರ ಅವರು ಚೆಂಡು ಹೂವು ಹಾಗೂ ಹೂಕೋಸನ್ನು ಇಲ್ಲಿನ ಮಿನಿ ವಿಧಾನಸೌಧದ ಬಾಗಿಲಲ್ಲಿ ಚೆಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ರೈತನ ದಿಢೀರ್ ಪ್ರತಿಭಟನೆಯಿಂದಾಗಿ ಅಲ್ಲಿನ ಸಿಬ್ಬಂದಿ ಹಾಗೂ ಅಧಿಕಾರಿಗಳು ಕಕ್ಕಾಬಿಕ್ಕಿಯಾದರು. 'ಕಷ್ಟಪಟ್ಟು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗಲಿಲ್ಲ. ಹೀಗಾಗಿ, ಸರ್ಕಾರದ ಗಮನಸೆಳೆಯಲು ಹೀಗೆ ಮಾಡಬೇಕಾಯಿತು. ಕೃಷಿಕರ ಸಂಕಷ್ಟಗಳನ್ನು ಅಧಿಕಾರಿಗಳು ಅರಿಯಲಿ' ಎಂದು ಹೇಳಿದರು.

'7 ಎಕರೆ ಜಮೀನಿದ್ದು, ಅದರಲ್ಲಿ 5 ಎಕರೆ ಚೆಂಡು ಹೂ ಹಾಗೂ 2 ಎಕರೆಯಲ್ಲಿ ಹೂಕೋಸು ಬೆಳೆದಿದ್ದೆ. ₹ 3 ಲಕ್ಷ ವೆಚ್ಚವಾಗಿದೆ. ಯೋಗ್ಯ ಬೆಲೆ ಸಿಕ್ಕರೆ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ ಎನ್ನುವಷ್ಟರಲ್ಲಿ ಸರ್ಕಾರ ಭಾಗಶಃ ಲಾಕ್‌ಡೌನ್ ಜಾರಿ ಮಾಡಿದೆ. ಇದರಿಂದಾಗಿ ಅಪಾರ ಹಾನಿ ಸಂಭವಿಸಿದೆ. ಮಾರುಕಟ್ಟೆಯುಲ್ಲಿ ಬೇಡಿಕೆ ಕುಸಿದಿರುವುದರಿಂದಾಗಿ, ಹೂ ಹಾಗೂ ಹೂಕೋಸನ್ನು ಮಾರುಕಟ್ಟೆಗೆ ತರಲು ಮಾಡಿರುವ ಖರ್ಚು ಕೂಡ ಸಿಗುತ್ತಿಲ್ಲ' ಎಂದು ರಾಯಪ್ಪ ಅಳಲು ತೋಡಿಕೊಂಡರು.

ಸ್ಥಳಕ್ಕೆ ಬಂದ ತಹಶೀಲ್ದಾರ್ ನವೀನ ಹುಲ್ಲೂರ, ನಗರ ಠಾಣೆಯ ಪಿಎಸ್‌ಐ ಕೆ.ಬಿ. ವಾಲಿಕಾರ ಹಾಗೂ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎಂ.ಎಲ್. ಜನ್ಮಟ್ಟಿ ರೈತನೊಂದಿಗೆ ಮಾತುಕತೆ ನಡೆಸಿ ಮನವೊಲಿಸುವಲ್ಲಿ ಯಶಸ್ವಿಯಾದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಅಭಿಯಾನಕ್ಕೆ ನಗರದ ಖಾಸಗಿ ಆಸ್ಪತ್ರೆಗಳ ನಿರ್ಧಾರ

ಆಮ್ಲಜನಕ ಕೊರತೆ: ಪ್ರಧಾನಿಗೆ ಮೊರೆ ಇಡಲು ಸಜ್ಜು

● ಸುರಕ್ಷಾ ಪಿ.

ಬೆಂಗಳೂರು: ರಾಜ್ಯ ರಾಜಧಾನಿಯಲ್ಲಿ ಉಂಟಾಗಿರುವ ಆಮ್ಲಜನಕದ ಕೊರತೆಯ ವಿಚಾರದಲ್ಲಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ನಡೆಸಲು ಬೆಂಗಳೂರಿನ ಖಾಸಗಿ ಆಸ್ಪತ್ರೆಗಳು ಮುಂದಾಗಿವೆ.

ಬೆಂಗಳೂರಿನಲ್ಲಿ ಆಮ್ಲಜನಕದ ಕೊರತೆ ಕ್ಷಣದಿಂದ ಕ್ಷಣಕ್ಕೆ ಹೆಚ್ಚುತ್ತಲೇ ಇದೆ. ಆದರೆ, ಸುಧಾಕರ್ ಸಮಸ್ಯೆಯನ್ನು ಅಲ್ಲಗಳೆಯುತ್ತಿದ್ದಾರೆ. 'ಆಮ್ಲಜನಕದ ಕೊರತೆಯನ್ನು ಪರಿಹರಿಸಲಾಗಿದೆ' ಎಂದು ಸುಧಾಕರ್ ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ. 'ಆಸ್ಪತ್ರೆಗಳಲ್ಲಿ ಆಮ್ಲಜನಕ ದಾಸ್ತಾನಿಗೆ ವ್ಯವಸ್ಥೆ ಇಲ್ಲದಿರುವುದೇ ಸಮಸ್ಯೆಗೆ ಕಾರಣ' ಎಂಬ ಸಚಿವರ ಹೇಳಿಕೆಯಿಂದ ಬೇಸತ್ತಿರುವ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು, ದೆಹಲಿ ಮಾದರಿಯಲ್ಲಿ ಪ್ರಧಾನಿ ಕಚೇರಿಯನ್ನು 'ಟ್ಯಾಗ್' ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ನಡೆಸಲು ಸಜ್ಜಾಗಿದ್ದಾರೆ.

ರಾಜಾಜಿನಗರದ ಪ್ರಿಸ್ಟೀನ್ ಆಸ್ಪತ್ರೆಯಲ್ಲಿ 60 ಕೋವಿಡ್ ರೋಗಿಗಳು ಆಮ್ಲಜನಕದ ನೆರವಿನಲ್ಲಿದ್ದಾರೆ. ಶುಕ್ರವಾರ ಮಧ್ಯಾಹ್ನದ ವೇಳೆಗೆ ಅಲ್ಲಿ ನಾಲ್ಕು ಗಂಟೆಗಳಿಗೆ ಆಗುವಷ್ಟು ಮಾತ್ರ ಆಮ್ಲಜನಕದ ದಾಸ್ತಾನು ಇತ್ತು. ನಗರದ 40 ಆಸ್ಪತ್ರೆಗಳಲ್ಲಿ ಇದೇ ಪರಿಸ್ಥಿತಿ ಇತ್ತು. ಆಮ್ಲಜನಕದ ದಾಸ್ತಾನಿಗೆ ವ್ಯವಸ್ಥೆ ಇದ್ದರೂ ಅಲ್ಲಿಗೆ ಪೂರೈಕೆಯೇ ಆಗಿರಲಿಲ್ಲ.

ಆಮ್ಲಜನಕ ಟ್ಯಾಂಕರ್ ಸಾಗಲು 'ಗ್ರೀನ್ ಕಾರಿಡಾರ್'

ಬೆಂಗಳೂರು: ನಗರದಲ್ಲಿ ಆಮ್ಲಜನಕ ಸಿಲಿಂಡರ್ ಕೊರತೆ ಮುಂದುವರಿದಿದ್ದು, ವೈದ್ಯಕೀಯ ಆಮ್ಲಜನಕ ಪೂರೈಸುವ ಟ್ಯಾಂಕರ್ ಸಂಚಾರಕ್ಕೆ ಪೊಲೀಸರು ಪ್ರತ್ಯೇಕ 'ಗ್ರೀನ್ ಕಾರಿಡಾರ್' ವ್ಯವಸ್ಥೆ ಮಾಡಿದ್ದಾರೆ.

ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಬೆನ್ನಲ್ಲೇ ನಗರದಲ್ಲಿ ಆಂಬುಲೆನ್ಸ್‌ಗಳ ಓಡಾಟ ಜಾಸ್ತಿ ಆಗಿದೆ. ಅಂಥ ಅಂಬುಲೆನ್ಸ್‌ಗಳಿಗೆ ಪೊಲೀಸರು ದಾರಿ ಮಾಡಿಕೊಡುತ್ತಿದ್ದಾರೆ. ಅದರ ನಡುವೆಯೇ ನಗರಕ್ಕೆ ಬರುತ್ತಿರುವ ವೈದ್ಯಕೀಯ ಆಮ್ಲಜನಕ ಹೊತ್ತ ಟ್ಯಾಂಕರ್‌ಗಳ ತಡೆರಹಿತ ಸಂಚಾರಕ್ಕೂ ಅನುಕೂಲ ಕಲ್ಪಿಸಿದ್ದಾರೆ.

ಗುರುವಾರ ದಾಬಸಪೇಟೆಗೆ ಬಂದಿದ್ದ ಟ್ಯಾಂಕರ್, ಗ್ರೀನ್ ಕಾರಿಡಾರ್ ಮೂಲಕವೇ ತಡೆರಹಿತವಾಗಿ ಸಂಚರಿಸಿ 30 ನಿಮಿಷಗಳಲ್ಲಿ ನಗರದ ಬೌರಿಂಗ್ ಆಸ್ಪತ್ರೆ ತಲುಪಿತು. ಯಾವುದೇ ವೃತ್ತದಲ್ಲೂ ಟ್ಯಾಂಕರ್ ನಿಲ್ಲಲಿಲ್ಲ. ಖಾಸಗಿ ವಾಹನಗಳನ್ನು ತಡೆದು ಪೊಲೀಸರು, ಟ್ಯಾಂಕರ್ ಮುಂದಕ್ಕೆ ಕಳುಹಿಸಿದರು.

ಈ ಬಗ್ಗೆ ಮಾತನಾಡಿದ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, 'ಒಂದು ಆಂಬುಲೆನ್ಸ್‌ನಿಂದ ಒಂದು ಜೀವ ಉಳಿಯುತ್ತದೆ. ಅದೇ ಒಂದು ಆಮ್ಲಜನಕ ಟ್ಯಾಂಕರ್‌ನಿಂದ 100 ಜೀವಗಳು ಉಳಿಯುತ್ತವೆ. ಹೀಗಾಗಿ, ಟ್ಯಾಂಕರ್‌ಗಳ ತಡೆರಹಿತ ಸಂಚಾರಕ್ಕಾಗಿ ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡಲಾಗಿದೆ. ಆಂಬುಲೆನ್ಸ್‌ಗಳಿಗೂ ನಿತ್ಯವೂ ದಾರಿ ಮಾಡಿಕೊಡುತ್ತಿದ್ದೇವೆ' ಎಂದರು.

ಮಹಾಲಕ್ಷ್ಮಿ ಬಡಾವಣೆಯ ಸಂಜೀವಿನಿ ಆಸ್ಪತ್ರೆ, ತೇಜಸ್ ನರ್ಸಿಂಗ್ ಹೋಂ, ಬಿಟಿಎಂ ಬಡಾವಣೆಯ ಲೈಫ್‌ಲೈನ್ ಆಸ್ಪತ್ರೆ, ವೈಟ್‌ಫೀಲ್ಡ್‌ನ ಬ್ರೂಕ್‌ಫೀಲ್ಡ್ ಆಸ್ಪತ್ರೆ, ಕನ್ನಿಂಗ್‌ಹ್ಯಾಂ ರಸ್ತೆಯ ಫೋರ್ಟಿಸ್ ಆಸ್ಪತ್ರೆ, ಪುಲಿಕೇಶಿನಗರದ ಸಂತೋಷ್ ಆಸ್ಪತ್ರೆ, ವಿಜಯನಗರದ ಗಾಯತ್ರಿ ಆಸ್ಪತ್ರೆ, ನಂದಿನಿ ಬಡಾವಣೆಯ ಕಣ್ವ ಸಾಯಿ ಆಸ್ಪತ್ರೆಗಳು ಆಮ್ಲಜನಕದ ದಾಸ್ತಾನಿಗೆ ವ್ಯವಸ್ಥೆ ಇದ್ದರೂ ಪೂರೈಕೆ ಇಲ್ಲದೆ ಸಮಸ್ಯೆಗೆ ಸಿಲುಕಿರುವವರಲ್ಲಿ ಸೇರಿವೆ. ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫನಾ) ಕೂಡ ಇದನ್ನು ದೃಢಪಡಿಸಿದೆ.

ಪ್ರಿಸ್ಟೀನ್ ಆಸ್ಪತ್ರೆಗೆ ಒಂದು ದಿನಕ್ಕೆ ತಲಾ 2,000 ಲೀಟರ್ ಸಾಮರ್ಥ್ಯದ ನಾಲ್ಕು ದ್ರವರೂಪದ ಆಮ್ಲಜನಕದ ಸಿಲಿಂಡರ್‌ಗಳು ಬೇಕು. ಆದರೆ, ಸದರ್ನ್ ಗ್ಯಾಸಸ್ ಸಂಸ್ಥೆ ಗುರುವಾರ ಎರಡು ಸಿಲಿಂಡರ್ ಪೂರೈಸಿದೆ. ಬೇಡಿಕೆಯ ಶೇಕಡ 50ರಷ್ಟು ಮಾತ್ರ ಪೂರೈಕೆಯಾಗಿದ್ದು, ತಾವು ಅಸಹಾಯಕರಾಗಿದ್ದೇವೆ ಎನ್ನುತ್ತಾರೆ ಆಸ್ಪತ್ರೆಯವರು.

'40 ಟನ್ ಆಮ್ಲಜನಕ ಹೆಚ್ಚುವರಿಯಾಗಿ ಪೂರೈಕೆ ಆಗುತ್ತಿದೆ ಎಂದು ಆರೋಗ್ಯ ಸಚಿವರು ಮತ್ತು ಸಂಸದ ತೇಜಸ್ವಿ ಸೂರ್ಯ ಹೇಳಿಕೆ ನೀಡಿದ್ದಾರೆ. ಆದರೆ, ಪೂರೈಕೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಈವರೆಗೂ ಆಸ್ಪತ್ರೆಗಳಿಗೆ ಹೆಚ್ಚಿನ ಪ್ರಮಾಣದ ಆಮ್ಲಜನಕ ತಲುಪಿಲ್ಲ. ಪ್ರಧಾನಿ ಸಚಿವಾಲಯವನ್ನು ಟ್ಯಾಗ್ ಮಾಡಿ ಈ ಕುರಿತು ಅಭಿಯಾನ ನಡೆಸುವಂತೆ ನಮ್ಮ ಆಸ್ಪತ್ರೆಯ ಆಡಳಿತಾಧಿಕಾರಿಗೆ ಸೂಚಿಸಿದ್ದೇವೆ' ಎಂದು ಪ್ರಿಸ್ಟೀನ್ ಆಸ್ಪತ್ರೆಯ ಮುಖ್ಯಸ್ಥ ಡಾ.ಎಚ್.ಎಂ. ಪ್ರಸನ್ನ ತಿಳಿಸಿದರು.

ಫನಾದ ಎಲ್ಲ ಸದಸ್ಯರಿಗೂ ಸಲಹೆ ನೀಡಲಾಗಿದೆ. ಆಮ್ಲಜನಕದ ಕೊರತೆ ಉದ್ಭವಿಸಿದಲ್ಲಿ ಪ್ರಧಾನಿ ಸಚಿವಾಲಯವನ್ನು ಟ್ಯಾಗ್ ಮಾಡಿ ಅಭಿಯಾನ ನಡೆಸುವಂತೆ ತಿಳಿಸಲಾಗಿದೆ. ರಾಜ್ಯ ಸರ್ಕಾರ ಆಸ್ಪತ್ರೆಗಳ ನೆರವಿಗೆ ಬರುತ್ತಿಲ್ಲ ಎಂಬುದನ್ನು ಕೇಂದ್ರಕ್ಕೆ ತಿಳಿಸುವುದು ಇದರ ಉದ್ದೇಶ ಎಂದರು.

ಕೇರಳವೂ ರಾಜ್ಯಕ್ಕೆ ಆಮ್ಲಜನಕ ಪೂರೈಸುತ್ತಿದೆ. ಏಪ್ರಿಲ್ 9ರಿಂದ ಕರ್ನಾಟಕಕ್ಕೆ ನಿತ್ಯವೂ 25 ಟನ್ ಆಮ್ಲಜನಕವನ್ನು ಪೂರೈಸಲಾಗುತ್ತಿದೆ ಎಂದು ಕೇರಳದ ವೈದ್ಯಕೀಯ ಬಳಕೆಯ ಆಮ್ಲಜನಕ ವಿತರಣಾ ವ್ಯವಸ್ಥೆಯ ನೋಡಲ್ ಅಧಿಕಾರಿ ಆರ್. ವೇಣುಗೋಪಾಲ್ ತಿಳಿಸಿದರು.

ಮಣಿಪಾಲ್ ಆಸ್ಪತ್ರೆ ಒಪಿಡಿ 2 ಗಂಟೆ ಬಂದ್



ವೈಟ್‌ಫೀಲ್ಡ್‌ನಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿದ್ದ ಅಧಿಕಾರಿಗಳ ತಂಡ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರಿಗೆ ಶೇ 50ರಷ್ಟು ಹಾಸಿಗೆ ನೀಡದ ಆಸ್ಪತ್ರೆಗಳ ವಿರುದ್ಧ ಬಿಬಿಎಂಪಿ ಮತ್ತು ಪೊಲೀಸ್ ಅಧಿಕಾರಿಗಳು ಶುಕ್ರವಾರ ಜಂಟಿ ಕಾರ್ಯಾಚರಣೆ ನಡೆಸಿದರು.

ಬ್ರೂಕ್ ಫೀಲ್ಡ್ ಆಸ್ಪತ್ರೆ, ಜೀವಿಕಾ ಆಸ್ಪತ್ರೆ, ಕೊಶ್ಯ ಆಸ್ಪತ್ರೆ, ಮಣಿಪಾಲ್ ಆಸ್ಪತ್ರೆ (ವೈಟ್ ಫೀಲ್ಡ್), ನಾರ್ತ್ ಸೈಡ್ ಆಸ್ಪತ್ರೆ, ಸಾಯಿ ಆಸ್ಪತ್ರೆಗಳಿಗೆ ಬಿಬಿಎಂಪಿ ಜಂಟಿ ಆಯುಕ್ತ ವೆಂಕಟಾಚಲಪತಿ, ಡಿಸಿಪಿ ದೇವರಾಜ್, ಆರೋಗ್ಯಾಧಿಕಾರಿ ಡಾ. ಸುರೇಂದ್ರ ಮತ್ತು ಇತರ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

'ಮಣಿಪಾಲ್ ಆಸ್ಪತ್ರೆಯಲ್ಲಿ 106 ಹಾಸಿಗೆಗಳಿದ್ದು, ಅದರಲ್ಲಿ 42 ಹಾಸಿಗೆಗಳನ್ನಷ್ಟೇ ಕೋವಿಡ್ ಸೋಂಕಿತರಿಗೆ ಮೀಸಲಿಡಲಾಗಿತ್ತು. ಈ ಸಂಬಂಧ ನೋಟಿಸ್ ಜಾರಿ ಮಾಡಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಹೊರ ರೋಗಿಗಳ ವಿಭಾಗವನ್ನು 2 ಗಂಟೆ ಬಂದ್ ಮಾಡಲಾಯಿತು. ಬಳಿಕ ಶೇ 50ರಷ್ಟು ಹಾಸಿಗೆಯನ್ನು ಆಸ್ಪತ್ರೆ ಮೀಸಲು ಇಟ್ಟಿತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸೋಂಕಿತರ ಕೈಗೆ 'ಸೀಲ್' ಹಾಕಲು ಸಮಯವಿಲ್ಲ !

ಬೆಂಗಳೂರು: ಮನೆಯಲ್ಲಿ ಪ್ರತ್ಯೇಕವಾಗಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಕೈಗೆ ಮುದ್ರೆ ಅಥವಾ ಸೀಲ್ ಹಾಕಲಾಗುವುದು ಎಂದು ಬಿಬಿಎಂಪಿ ಹೇಳಿತ್ತು. ಆದರೆ, ಹಾಸಿಗೆ, ಆಕ್ಸಿಜನ್ ಕೊರತೆ ಹೆಚ್ಚಾಗಿದ್ದು, ಈ ಸಮಸ್ಯೆ ಪರಿಹಾರಕ್ಕೆ ಬಿಬಿಎಂಪಿ ಅಧಿಕಾರಿಗಳು ಆದ್ಯತೆ ನೀಡಿರುವುದರಿಂದ 'ಸೀಲ್' ಹಾಕುವ ಕಾರ್ಯ ಚುರುಕಾಗಿಲ್ಲ.

ನಗರದಲ್ಲಿ ಏ.12ರಿಂದ 22ರ ಅವಧಿಯಲ್ಲಿ 64,091 ರೋಗಿಗಳು ಮನೆಯಲ್ಲಿಯೇ ಪ್ರತ್ಯೇಕವಾಗಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ.

'ಕೈಗಳಿಗೆ ಸೀಲ್ ಹಾಕುವ ಕಾರ್ಯವನ್ನು ಎಂಜಿನಿಯರ್‌ಗಳು ನೋಡಿಕೊಳ್ಳುತ್ತಿದ್ದಾರೆ. ಆದರೆ, ಸದ್ಯ ಹಾಸಿಗೆಗಳ ಕೊರತೆ ಹೆಚ್ಚಾಗಿದೆ. ಬಹಳಷ್ಟು ಕಡೆ ಹಾಸಿಗೆಗಳೇ ಇಲ್ಲ. ಈ ಸಮಸ್ಯೆ ಪರಿಹಾರ ಮಾಡುವತ್ತ ನಾವು ಗಮನ ನೀಡುತ್ತಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ಅಧಿಕಾರಿ ಡಾ. ಎಂ. ಶಿವಕುಮಾರ್ ಹೇಳಿದರು.

'ಸೀಲ್ ಹಾಕುವ ಕಾರ್ಯವನ್ನು ಪರಿಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ. ಕೋವಿಡ್ ಕರ್ತವ್ಯಕ್ಕೆ ನಾವು ಬೂತ್ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ಬಳಸಿಕೊಳ್ಳುತ್ತಿದ್ದೇವೆ. ಶಿಕ್ಷಕರೇ ಬಿಎಲ್‌ಒಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪೈಕಿ ಬಹುತೇಕ ಶಿಕ್ಷಕರು ಕರ್ತವ್ಯಕ್ಕೆ ಹಾಜರಾಗಿಲ್ಲ. ಬಿಎಲ್‌ಒಗಳ ತಂಡವನ್ನು ಪುನರ್ ಸಂಘಟಿಸುವ ಕೆಲಸ ನಡೆಯುತ್ತಿದೆ. ಶಿಕ್ಷಕರು ಬೇರೆ ಜಾಗದಿಂದ ಬರಬೇಕಾಗಿರುವುದರಿಂದ ಅವರಿಗೂ ಕಷ್ಟ ಎನಿಸಬಹುದು. ಹೀಗಾಗಿ, ಸ್ಥಳೀಯರನ್ನೇ ಈ ಕಾರ್ಯಕ್ಕೆ ಬಳಸಿಕೊಳ್ಳುವ ಉದ್ದೇಶವಿದೆ' ಎಂದು ಬಿಬಿಎಂಪಿ ಪೂರ್ವ ವಲಯದ ಕೋವಿಡ್ ನೋಡಲ್ ಅಧಿಕಾರಿ, ಐಎಎಸ್ ಅಧಿಕಾರಿ ಮನೋಜ್ ಕುಮಾರ್ ಮೀನಾ ಹೇಳಿದರು.

'ಸೋಂಕಿತರ ಕೈಗೆ ಮುದ್ರೆ ಹಾಕುವ ಕಾರ್ಯವನ್ನು ನಾವು ಆರಂಭಿಸಿದ್ದೇವೆ. ಗುರುವಾರದವರೆಗೆ, ಬಿಬಿಎಂಪಿ ಪಶ್ಚಿಮ ವಲಯದಲ್ಲಿ 9,811 ಮಂದಿ ಹೋಂ ಐಸೊಲೇಷನ್‌ನಲ್ಲಿದ್ದಾರೆ. ವಾರ್ಡ್ ವಾರು ತಂಡ ರಚಿಸಲಾಗಿದೆ. ಆರೋಗ್ಯ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಬಿಎಲ್‌ಒಗಳು ಹಾಗೂ ಕಂದಾಯ ಇಲಾಖೆಯಿಂದ ಒಬ್ಬರನ್ನು ಆಯ್ಕೆ ಮಾಡಿಕೊಂಡು ತಂಡಗಳನ್ನು ರಚಿಸಲಾಗಿದೆ. ಈ ತಂಡ ಸೀಲ್ ಹಾಕಲಿದೆ. ಜೊತೆಗೆ, ವೈದ್ಯರೊಬ್ಬರಿದ್ದು ಅವರು ಸೋಂಕಿತರ ಸೋಂಕಿನ ಲಕ್ಷಣ ಹಾಗೂ ಆಕ್ಸಿಜನ್ ಮಟ್ಟವನ್ನು ಪರೀಕ್ಷಿಸುತ್ತಾರೆ' ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಬಿ. ಶಿವಸ್ವಾಮಿ ಹೇಳಿದರು.

'ಹೋಂ ಐಸೋಲೇಷನ್‌ನಲ್ಲಿರುವವರು ಐಸೊಲೇಷನ್ ಕಿಟ್ ಕೇಳುತ್ತಿದ್ದಾರೆ. ನಮ್ಮ ವಲಯದಲ್ಲಿ ಶಾಸಕರೊಬ್ಬರು ತಮ್ಮದೇ ಹಣದಿಂದ ಕಿಟ್ ಪೂರೈಸಲು ಮುಂದೆ ಬಂದಿದ್ದಾರೆ' ಎಂದರು.

ಕೋವಿಡ್: ಇದುವರೆಗೆ 14 ಸಾವಿರಕ್ಕೂ ಅಧಿಕ ಮಂದಿ ಮರಣ

ಹೊಸದಾಗಿ 27ಸಾವಿರ ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಏರುತ್ತಲೇ ಇದೆ. ಶುಕ್ರವಾರ ಒಟ್ಟು 26,962 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. 190 ಜನ ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಅತಿ ಗರಿಷ್ಠ ಪ್ರಕರಣ ಇದಾಗಿದೆ. ಕೋವಿಡ್ ತೀವ್ರಗತಿಯಲ್ಲಿ ಏರುತ್ತಿರುವ ಕಾರಣ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಶುಕ್ರವಾರ 1.77 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಹೀಗಾಗಿ ಸೋಂಕು ದೃಢ ಪ್ರಮಾಣ ಶೇ 15.19ಕ್ಕೆ ತಲುಪಿದೆ. ಮರಣ ಪ್ರಮಾಣ ದರ ಶೇ 0.70ಕ್ಕೆ ಹೆಚ್ಚಿದೆ.

26 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ ಒಂದೇ ದಿನ 16,662 ಮಂದಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ತುಮಕೂರಿನಲ್ಲಿ ಸೋಂಕಿತರ ಸಂಖ್ಯೆ 1,004ಕ್ಕೆ ತಗ್ಗಿದೆ. ಕಲಬುರ್ಗಿ (742) ಹಾಗೂ ಬೆಂಗಳೂರು ಗ್ರಾಮಾಂತರ (588) ಜಿಲ್ಲೆಗಳಲ್ಲಿ ಏರುಗತಿ ಪಡೆದುಕೊಂಡಿದೆ. ಬಳ್ಳಾರಿ (695), ಹಾಸನ (248), ಕೋಲಾರ (504) ಮತ್ತು ಮೈಸೂರಿನಲ್ಲಿ (645) ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಬೀದರ್ (416), ಚಿಕ್ಕಬಳ್ಳಾಪುರ (471), ದಕ್ಷಿಣ ಕನ್ನಡ (485), ಧಾರವಾಡ (472), ಮಂಡ್ಯ (519), ರಾಯಚೂರು (428) ಹಾಗೂ ವಿಜಯಪುರದಲ್ಲಿ (429) ಅಧಿಕ ಪ್ರಕರಣಗಳು ವರದಿಯಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 12.74 ಲಕ್ಷದ ಗಡಿ ದಾಟಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ ಒಟ್ಟು 124 ಮಂದಿ ಸಾವಿಗೀಡಾಗಿದ್ದಾರೆ. ಹಾಸನದಲ್ಲಿ 8, ಕಲಬುರ್ಗಿಯಲ್ಲಿ 7, ಬಳ್ಳಾರಿಯಲ್ಲಿ 6, ಧಾರವಾಡ, ಕೋಲಾರ ಹಾಗೂ ತುಮಕೂರಿನಲ್ಲಿ ತಲಾ ಐದು, ಬೆಂಗಳೂರು ಗ್ರಾಮಾಂತರ, ಹಾವೇರಿ, ಮಂಡ್ಯ, ಮೈಸೂರಿನಲ್ಲಿ ತಲಾ ನಾಲ್ವರು, ಬೆಳಗಾವಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ ಮತ್ತು ವಿಜಯಪುರದಲ್ಲಿ ತಲಾ ಇಬ್ಬರು, ಚಿಕ್ಕಮಗಳೂರು, ರಾಮನಗರ, ಶಿವಮೊಗ್ಗ ಮತ್ತು ಯಾದಗಿರಿಯಲ್ಲಿ ತಲಾ ಒಬ್ಬರು ಮೃತರಾಗಿದ್ದಾರೆ. ಕೋವಿಡ್ ರಾಜ್ಯಕ್ಕೆ ಕಾಲಿಟ್ಟ ದಿನದಿಂದ ಇದುವರೆಗೆ ಸತ್ತವರ ಸಂಖ್ಯೆ 14,075ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಎರಡು ಲಕ್ಷದ (2.14) ಗಡಿ ದಾಟಿದ್ದು, ಒಟ್ಟು 1,128 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರ ಪೈಕಿ 8,697 ಜನ ಚೇತರಿಸಿಕೊಂಡಿದ್ದಾರೆ. ಇದರೊಂದಿಗೆ ಗುಣಮುಖರ ಸಂಖ್ಯೆ 10,46 ಲಕ್ಷಕ್ಕೆ ಹೆಚ್ಚಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

6,15,581 ಒಟ್ಟು ಸೋಂಕಿತರು

4,60,382 ಗುಣಮುಖರಾದವರು | **1,149,624** ಸಕ್ರಿಯ ಪ್ರಕರಣ | **5,574** ಸಾವು

ಶುಕ್ರವಾರದ ಏರಿಕೆ

16,662 ದೃಢಪಟ್ಟ ಪ್ರಕರಣ

4,727 ಗುಣಮುಖ | **124** ಸಾವು

'ಮೃತದೇಹಗಳ ಹಸ್ತಾಂತರಕ್ಕೆ ವಿಳಂಬ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಅಥವಾ ಇತರ ಕಾರಣದಿಂದ ಯಾರೇ ಮೃತಪಟ್ಟರೂ ಕೂಡಲೇ ಮೃತದೇಹಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಬಿಬಿಎಂಪಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದಲ್ಲಿ ಕೋವಿಡ್ ನಿರ್ವಹಣೆ ಸಂಬಂಧ ಶುಕ್ರವಾರ ಸಭೆ ನಡೆಸಿದ ಡಿಸಿಎಂ, 'ಒಂದು ವೇಳೆ ಮೃತದೇಹಗಳನ್ನು ನೀಡುವುದು ತಡ ಮಾಡಿದರೆ ಅಂಥ ಆಸ್ಪತ್ರೆಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಸೂಚಿಸಿದರು.

'ಆಸ್ಪತ್ರೆಗಳಿಂದ ಮೃತದೇಹಗಳನ್ನು ಸಂಬಂಧಿಕರಿಗೆ ತಡವಾಗಿ ನೀಡುತ್ತಿರುವುದರಿಂದ ಚಿತಾಗಾರಗಳಲ್ಲಿ ಸಮಸ್ಯೆ ಹೆಚ್ಚಾಗುತ್ತಿದೆ. ಒಮ್ಮೆಗೇ ಮೃತದೇಹಗಳನ್ನು ತರುತ್ತಿರುವುದರಿಂದ ಅವುಗಳ ನಿರ್ವಹಣೆ ಕಷ್ಟ ಆಗುತ್ತಿದೆ. ಹೀಗಾಗಿ ತಕ್ಷಣವೇ ಕ್ರಮ ಕೈಗೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಸೂಚಿಸಿದರು.

ಮೃತರ ಸಂಬಂಧಿಕರು ಮೊದಲೇ ದುಃಖದಲ್ಲಿರುತ್ತಾರೆ. ಅವರ ನೋವನ್ನು ಮತ್ತಷ್ಟು ಹೆಚ್ಚಿಸುವ ಕೆಲಸ ಆಗಬಾರದು. ಕೂಡಲೇ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ಮೃತದೇಹವನ್ನು ಹಸ್ತಾಂತರ ಮಾಡಬೇಕು ಎಂದು ಅವರು ಹೇಳಿದರು.

ನಗರದ 12 ವಿದ್ಯುತ್ ಚಿತಾಗಾರಗಳಲ್ಲಿ ಅಂತ್ಯಕ್ರಿಯೆ ನಡೆಯುತ್ತಿದೆ. ಸಾವಿನ ಸಂಖ್ಯೆ ಹೆಚ್ಚಾಗಿರುವ ಕಾರಣ ಶವಸಂಸ್ಕಾರ ತಡ ಆಗುತ್ತಿದೆ. ಹೀಗಾಗಿ ಪ್ರಾಯೋಗಿಕವಾಗಿ ಸುಮನಹಳ್ಳಿ ಮತ್ತು ಗಿಡ್ಡಹಳ್ಳಿಯಲ್ಲಿ ಗ್ಯಾಸ್ ಚಿತಾಗಾರಗಳನ್ನು ತುರ್ತಾಗಿ ತೆರೆಯಲು ಉದ್ದೇಶಿಸಲಾಗಿದೆ. ಇದು ಯಶಸ್ವಿಯಾದರೆ ಇತರೆ ಕಡೆಯೂ ಆ ವ್ಯವಸ್ಥೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಪ್ರತಿ ಚಿತಾಗಾರಕ್ಕೂ 15 ಸ್ಟ್ರೆಚರ್‌ಗಳನ್ನು ಒದಗಿಸುವಂತೆ ಸೂಚನೆ ನೀಡಲಾಗಿದೆ. ಪ್ರತಿ ಚಿತಾಗಾರಕ್ಕೂ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ ಸಮಸ್ಯೆಗಳಿದ್ದರೆ ಬಗೆಹರಿಸಬೇಕು ಎಂದು ಹೇಳಿದರು.

ಪ್ರತಿ ಆರೋಗ್ಯ ಸೇವಾ ಕೇಂದ್ರಕ್ಕೂ ಅನುದಾನ: ನಗರದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೋಂಕಿತರಿಗೆ, ಅದರಲ್ಲೂ ಮನೆಯಲ್ಲೇ ಕ್ವಾರಂಟೈನ್ ಆಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಕೊಡಮಾಡುವ ಮೆಡಿಕಲ್ ಕಿಟ್ ಕೊರತೆ ಉಂಟಾಗಿದೆ. ಕೂಡಲೇ ಈ ಕಿಟ್‌ಗಳನ್ನು ಖರೀದಿ ಮಾಡಲು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ತಲಾ ₹2 ಲಕ್ಷ ನೀಡಲಾಗಿದೆ. ಇದು ಸಾಕಾಗುವುದಿಲ್ಲ. ಹೀಗಾಗಿ ವಿಧಾನಸಭಾ ಕ್ಷೇತ್ರವಾರು, ಬಿಬಿಎಂಪಿ ವಿಭಾಗವಾರು ಇನ್ನೂ ಹೆಚ್ಚಿನ ಅನುದಾನ ಅಗತ್ಯ ಇದೆ. ತಕ್ಷಣ ಒದಗಿಸಬೇಕು ಎಂದು ಗೌರವ್ ಗುಪ್ತ ಅವರಿಗೆ ಸೂಚಿಸಿದರು. ಹಣ ಒದಗಿಸುವ ಭರವಸೆಯನ್ನು ಗುಪ್ತ ನೀಡಿದರು.

ಕೋವಿಡ್ ಸಹಾಯವಾಣಿ 1912 ಸಂಖ್ಯೆಗೆ ಕರೆಗಳು ಹೆಚ್ಚಾಗಿವೆ. ಸಹಾಯವಾಣಿ ಕೇಂದ್ರದಲ್ಲಿ ಸದ್ಯಕ್ಕೆ ಕರೆ ಸ್ವೀಕರಿಸಲು 30 ಜನರಿದ್ದು, ಇನ್ನೂ 30 ಜನರನ್ನು ನಿಯೋಜಿಸುವಂತೆ ಸೂಚಿಸಿದ್ದೇನೆ. ಕರೆ ಮಾಡುವ ವ್ಯಕ್ತಿಗಳ ಸಮಸ್ಯೆಗಳನ್ನು ಆಲಿಸಿ ಕೂಡಲೇ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಗೆ ತಿಳಿಸಲಾಗುವುದು ಎಂದರು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್, ಔಷಧ ನಿಯಂತ್ರಣ ಇಲಾಖೆಯ ಉಪನಿರ್ದೇಶಕ ಸುರೇಶ್ ಇದ್ದರು.



ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ನಗರದ ಹೊರವಲಯದ ತಾವರೆಕೆರೆ ಸಮೀಪದ ಗಿಡ್ಡೇನಹಳ್ಳಿ ಬಳಿ ಸರ್ಕಾರ ವ್ಯವಸ್ಥೆ ಮಾಡಿದೆ –ಪ್ರಜಾವಾಣಿ ಚಿತ್ರ/ ಅನೂಪ್ ರಾಫ್ ಟಿ.


'ಆಯುರ್ವೇದ ಆಸ್ಪತ್ರೆಯಲ್ಲಿ ಕೋವಿಡ್ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೌಸಿಂಗ್ ಬೋರ್ಡ್ ಬಳಿ ಇರುವ ಯುನಾನಿ, ಆಯುರ್ವೇದ ಆಸ್ಪತ್ರೆಯನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಮಾರ್ಪಡಿಸಲಾಗುತ್ತಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ಮತ್ತು ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಅಧಿಕಾರಿಗಳು ಮತ್ತು ತಜ್ಞ ವೈದ್ಯರ ಜತೆ ಆಹಾರ ಸಚಿವ ಕೆ.ಗೋಪಾಲಯ್ಯ ಅವರ ಜತೆಗೂಡಿ ಅವರು ಸಭೆ ನಡೆಸಿದರು.

ರೋಗ ಲಕ್ಷಣ ಇಲ್ಲದಿದ್ದರೆ ಮನೆಗಳಿಗೆ ಔಷಧಿ, ಮಾತ್ರೆ ನೀಡಲಾಗುವುದು. ಮಾಸ್ಕ್ ಧರಿಸುವ ಮತ್ತು ಅಂತರ ಕಾಪಾಡುವ ನಿಯಮವನ್ನು ಎಲ್ಲರೂ ಪಾಲಿಸಬೇಕು ಎಂದು ತಿಳಿಸಿದರು. ಇಲ್ಲಿ 200 ಹಾಸಿಗೆಗಳಿದ್ದು, ಗೋವಿಂದರಾನಗರದ ಜನರಿಗೆ ಮೊದಲ ಆದ್ಯತೆ ನೀಡಲಾಗುವುದು. ಮಹಾಲಕ್ಷ್ಮಿ ಲೇಔಟ್ , ರಾಜಾಜಿನಗರ ವ್ಯಾಪ್ತಿಯ ರೋಗಿಗಳಿಗೂ ಚಿಕಿತ್ಸೆ ನೀಡಲಾಗುವುದು ಎಂದು ಹೇಳಿದರು.



ಗೋವಿಂದರಾನಗರ ಮತ್ತು ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಅಧಿಕಾರಿಗಳ ಸಭೆ ನಡೆಸಿದ ವಸತಿ ಸಚಿವ ವಿ. ಸೋಮಣ್ಣ. ಆಹಾರ ಸಚಿವ ಕೆ.ಗೋಪಾಲಯ್ಯ ಇದ್ದರು

ಶವ ಸಾಗಣೆಗೆ ಸಹಾಯವಾಣಿ

ಬೆಂಗಳೂರು: ಕೋವಿಡ್ ಸೋಂಕಿನಿಂದ ಮೃತಪಟ್ಟವರ ಶವವನ್ನು ಉಚಿತವಾಗಿ ಸಾಗಣೆಗೆ ಬಿಬಿಎಂಪಿ ಸಹಾಯವಾಣಿ ತೆರೆದಿದೆ.

ಸಹಾಯವಾಣಿ ಸಂಖ್ಯೆ 080–22493202, 080–22493203 ಮತ್ತು ವಾಟ್ಸ್‌ಆ್ಯಪ್ ಸಂಖ್ಯೆ (8792162736) ಸಂಪರ್ಕಿಸಿ ಸಹಾಯ ಪಡೆಯಬಹುದು. ಸಹಾಯವಾಣಿ ಬೆಳಿಗ್ಗೆ 7ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸಲಿದೆ ಎಂದು ಬಿಬಿಎಂಪಿ ತಿಳಿಸಿದೆ.



ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಅವರು ದಿಢೀರ್ ಭೇಟಿ ನೀಡಿ ಕುಂದುಕೊರತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ಆರೋಗ್ಯ ಕೇಂದ್ರಗಳಿಗೆ ಸಹಕಾರ ಸಚಿವರ ದಿಢೀರ್ ಭೇಟಿ

ಕೆಂಗೇರಿ: ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಬೋಳಾರೆ, ಕಗ್ಗಲಿಪುರ, ಕೆ.ಗೊಲ್ಲಹಳ್ಳಿ, ಕುಂಬಳಗೋಡು, ಚಂದ್ರಪ್ಪ ಸರ್ಕಲ್ ಹಾಗೂ ತಾವರೆಕೆರೆ, ಕನ್ನಳ್ಳಿ, ಸೂಲಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

'ಕೋವಿಡ್ 2 ನೇ ಅಲೆ ರಾಜ್ಯದೆಲ್ಲೆಡೆ ವ್ಯಾಪಕವಾಗಿ ಹರಡುತ್ತಿದೆ. ಇದರಿಂದ ರಾಜ್ಯ ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ನಿಯಮಗಳನ್ನು ಪಾಲಿಸುವ ಮೂಲಕ ಕೊರೊನಾ ತಡೆಗೆ ಸಹಕರಿಸಬೇಕು' ಎಂದು ಸಚಿವರು ತಿಳಿಸಿದರು.

ಸಿಬ್ಬಂದಿ ಕೊರತೆ ನೀಗಿಸಲು ಮನವಿ: ಇದೇ ವೇಳೆ ಸಿಬ್ಬಂದಿ ಕೊರತೆ ಬಗ್ಗೆ ಗಮನ ಸೆಳೆದ ತಾವರೆಕೆರೆ ವೈದ್ಯಾಧಿಕಾರಿ ಡಾ.ನಂದಿನಿ, ಲ್ಯಾಬ್ ಟೆಕ್ನಿಷಿಯನ್ ನಿಧನದಿಂದ ಖಾಲಿ ಇರುವ ಹುದ್ದೆಗೆ ಯಾರನ್ನೂ ಭರ್ತಿ ಮಾಡಿಲ್ಲ. ಶೀಘ್ರ ನೇಮಕ ಮಾಡಬೇಕು' ಎಂದು ಮನವಿ ಮಾಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಕುಮಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನಾಗವೇಣಿ, ತಹಶೀಲ್ದಾರ್ ರಾಮಲಕ್ಷ್ಮಣ ಇದ್ದರು.

'15,000 ರೆಮ್‌ಡಿಸಿವಿರ್ ಡೋಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಲಾನ್ ಕಂಪನಿಯು ರಾಜ್ಯಕ್ಕೆ ಶುಕ್ರವಾರ ಒಟ್ಟು 15,000 ರೆಮ್‌ಡಿಸಿವಿರ್ ಡೋಸ್‌ಗಳನ್ನು ಬಿಡುಗಡೆ ಮಾಡಿದೆ. ತನ್ನ ವಿವೇಚನಾಧಿಕಾರ ಕ್ಕೊಳಪಡುವ ಶೇ 30ರಷ್ಟು ಡೋಸ್‌ಗಳನ್ನು ಹೆಚ್ಚುವರಿಯಾಗಿ ಒದಗಿಸಲೂ ಒಪ್ಪಿಕೊಂಡಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ.ಸದಾನಂದಗೌಡ ಹೇಳಿದ್ದಾರೆ.

ನಗರದ ಜಿಗಣಿ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಯ ಔಷಧ ಉತ್ಪಾದನಾ ಘಟಕಕ್ಕೆ ಶುಕ್ರವಾರ ಭೇಟಿ ನೀಡಿದ್ದ ಅವರು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಬೊಮ್ಮ್ಯ ಹಾಗೂ ಇತರ ಅಧಿಕಾರಿಗಳ ಜೊತೆ ಚರ್ಚಿಸಿದರು.

'ಭಾರತದ ಕೆಲವು ಔಷಧ ತಯಾರಿಕಾ ಕಂಪನಿಗಳು ರೆಮ್‌ಡಿಸಿವಿರ್ ಚುಚ್ಚುಮದ್ದು ಉತ್ಪಾದನೆ ಸಂಬಂಧ ಅಮೆರಿಕದ ಗಿಲೀಡ್ ಸೈನ್ಸಸ್ ಕಂಪನಿಯಿಂದ ಪರವಾನಗಿ ಪಡೆದಿವೆ. ಹೆಚ್ಚುವರಿ ಚುಚ್ಚುಮದ್ದು ಪೂರೈಸುವ ಬಗ್ಗೆ ಆ ಕಂಪನಿಗಳ ಜೊತೆಯೂ ಮಾತುಕತೆ ನಡೆಸಲಾಗಿದೆ. ಹೀಗಾಗಿ ರಾಜ್ಯಕ್ಕೆ ಹೆಚ್ಚು ಚುಚ್ಚುಮದ್ದುಗಳು ದೊರೆಯಲಿವೆ. ಈಗಿರುವ ಆತಂಕದ ವಾತಾವರಣ ಶೀಘ್ರವೇ ದೂರವಾಗಲಿದೆ' ಎಂದರು.

'ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಸಂಸದ ಪಿ.ಸಿ. ಮೋಹನ್, ಶಾಸಕ ಕೃಷ್ಣಪ್ಪ, ವಿಧಾನಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ಇದ್ದರು.

ಲಸಿಕೆ: ಅಂಗವಿಕಲರಿಗೆ ಆದ್ಯತೆ ನೀಡಿ

ಬೆಂಗಳೂರು: ಮೇ 1ರಿಂದ ಮೂರನೇ ಹಂತದ ಕೋವಿಡ್ ಲಸಿಕೆ ನೀಡುವಾಗ ಅಂಗವಿಕಲರಿಗೆ ಆದ್ಯತೆ ನೀಡುವಂತೆ ಕೋರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಲು ಪೀಠ ಆದೇಶಿಸಿದೆ. ಕರ್ನಾಟಕ ರಾಜ್ಯ ಅಂಗವಿಕಲ ರಕ್ಷಣಾ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಸೆಕ್ಷನ್ 8ರ ಪ್ರಕಾರ ತುರ್ತು ಪರಿಸ್ಥಿತಿ, ವಿಕೋಪಗಳ ಸಂದರ್ಭದಲ್ಲಿ ಸಮಾನ ರಕ್ಷಣೆ ಮತ್ತು ಸುರಕ್ಷತೆ ಇರಬೇಕು. ಸೆಕ್ಷನ್ 25ರ ಪ್ರಕಾರ ಉಚಿತ ಆರೋಗ್ಯ ರಕ್ಷಣೆ, ತಡೆಮುಕ್ತ ಪ್ರವೇಶ, ಚಿಕಿತ್ಸೆಗೆ ಆದ್ಯತೆ ನೀಡಬೇಕು' ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು.

ಅಂಗವಿಕಲರಿಗೆ ಮತ್ತು ಅವರಿಗೆ ಆರೈಕೆ ಮಾಡುವವರಿಗೆ ಕಡ್ಡಾಯವಾಗಿ ಲಸಿಕೆ ನೀಡುವಂತೆ ಸೂಚನೆ ನೀಡಬೇಕು ಎಂದು ಅರ್ಜಿದಾರರು ಕೋರಿದರು.

'ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಅಂಗವಿಕಲರ ಬಗ್ಗೆ ಮಾಹಿತಿ ಇರುತ್ತದೆ. ವಿಶೇಷ ಶಿಬಿರಗಳನ್ನು ಆಯೋಜಿಸಿ ಮೇಲ್ವಿಚಾರಣೆ ನಡೆಸುವುದು ಸುಲಭ. ಮೂರನೇ ಹಂತದ ಲಸಿಕೆಗೆ ನೋಂದಣಿ ಇದೇ 28ರಿಂದ ಆರಂಭವಾಗಲಿರುವ ಕಾರಣ ತುರ್ತು ನಿರ್ದೇಶನದ ಅಗತ್ಯವಿದೆ' ಎಂದು ಹೇಳಿದರು. ಅಂಗವಿಕಲರ ಅಹವಾಲುಗಳಿಗೆ ಸ್ಪಂದಿಸುವಂತೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಏ.26ಕ್ಕೆ ಮುಂದೂಡಿತು.

ವಾರಾಂತ್ಯದಲ್ಲಿ ಮೆಟ್ರೊ ರೈಲು ಸಂಚಾರ ರದ್ದು

ಬೆಂಗಳೂರು: ನಗರದಲ್ಲಿ ಕರ್ಫ್ಯೂ ಜಾರಿಯಲ್ಲಿರುವುದರಿಂದ ಮೇ 4ರವರೆಗೆ ವಾರಾಂತ್ಯದಲ್ಲಿ ಅಂದರೆ ಶನಿವಾರ ಮತ್ತು ಭಾನುವಾರ ಮೆಟ್ರೊ ರೈಲು ಸಂಚಾರವನ್ನು ರದ್ದುಗೊಳಿಸಲಾಗಿದೆ.

ಅಲ್ಲದೆ, ವಾರದ ದಿನಗಳಲ್ಲಿ ಮೆಟ್ರೊ ರೈಲು ಸಂಚಾರ ಅವಧಿಯನ್ನೂ ಕಡಿತಗೊಳಿಸಲಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 7ರಿಂದ ರೈಲು ಸಂಚಾರ ಪ್ರಾರಂಭವಾಗುತ್ತದೆ. ಟರ್ಮಿನಲ್ ನಿಲ್ದಾಣಗಳಾದ ನಾಗಸಂದ್ರ, ರೇಷ್ಮೆ ಸಂಸ್ಥೆ, ಮೈಸೂರು ರಸ್ತೆ ಮತ್ತು ಬೈಯಪ್ಪನಹಳ್ಳಿ ನಿಲ್ದಾಣಗಳಿಂದ ಕೊನೆಯ ರೈಲು ಸಂಜೆ 7.30ಕ್ಕೆ ಹೊರಡುತ್ತದೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ. ಸೋಮವಾರದಿಂದ ರಾತ್ರಿ 7.30ಕ್ಕೆ ಕೊನೆಯ ರೈಲು ಈ ನಾಲ್ಕೂ ನಿಲ್ದಾಣಗಳಿಂದ ಹೊರಡಲಿದೆ ಎಂದು ನಿಗಮ ಹೇಳಿದೆ.

'ವೇಷ ಮರೆಸಿಕೊಂಡು ಓಡಾಡಿದರೆ ಬಂಧನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಶುಕ್ರವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆವರೆಗೆ ಕರ್ಫ್ಯೂ ಜಾರಿ ಮಾಡಲಾಗಿದ್ದು, ನಿಯಮ ಉಲ್ಲಂಘಿಸುವವರ ಮೇಲೆ ಪೊಲೀಸರು ಕಣ್ಣಿಟ್ಟಿದ್ದಾರೆ.

ಬೆಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಎಲ್ಲ ರಸ್ತೆಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ರಾಜ್ಯ ಮೀಸಲು ಪಡೆಯ ಪೊಲೀಸರನ್ನು ಹಾಗೂ ಸ್ವಯಂಸೇವಕರನ್ನೂ ಭದ್ರತೆಗಾಗಿ ಬಳಸಿಕೊಳ್ಳಲಾಗುತ್ತಿದೆ.

ಆಯಾ ವಿಭಾಗಗಳ ಭದ್ರತೆ ಹಾಗೂ ಇತರೆ ಕ್ರಮಗಳ ಜವಾಬ್ದಾರಿಯನ್ನು ಡಿಸಿಪಿಗಳಿಗೆ ವಹಿಸಲಾಗಿದೆ. ಎಸಿಪಿ ಹಾಗೂ ಇನ್‌ಸ್ಪೆಕ್ಟರ್‌ಗಳ ಸಭೆ ನಡೆಸಿರುವ ಡಿಸಿಪಿಗಳು, ಪ್ರತಿ ಠಾಣೆ ವ್ಯಾಪ್ತಿಯಲ್ಲೂ ಕರ್ಫ್ಯೂ ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳಲು ಸೂಚನೆ ನೀಡಿದ್ದಾರೆ. ಠಾಣೆ ವ್ಯಾಪ್ತಿಯಲ್ಲಿ ಗಸ್ತು ತಿರುಗಲಿರುವ ಪೊಲೀಸರು, ನಿಯಮ ಉಲ್ಲಂಘಿಸುವವರನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಿಕೊಳ್ಳಲಿದ್ದಾರೆ.

ಕರ್ಫ್ಯೂ ಬಗ್ಗೆ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, 'ಕೆಲ ಸೇವೆಗಳಿಗೆ ಕರ್ಫ್ಯೂನಿಂದ ವಿನಾಯಿತಿ ನೀಡಲಾಗಿದೆ. ಅಂಥವರ ಹೆಸರಿನಲ್ಲಿ ಯಾರಾದರೂ ವೇಷ ಮರೆಸಿಕೊಂಡು ಅನಗತ್ಯವಾಗಿ ಓಡಾಡಿದರೆ ಬಂಧಿಸಲಾಗುವುದು' ಎಂದು ಎಚ್ಚರಿಸಿದರು.

'ಕಳೆದ ಬಾರಿ ಲಾಕ್‌ಡೌನ್ ವೇಳೆ ಆಹಾರ ಪೂರೈಕೆ ಮಾಡುವ ಕಂಪನಿಗಳ ಸಿಬ್ಬಂದಿ ಓಡಾಟಕ್ಕೆ ಅವಕಾಶ ನೀಡಲಾಗಿತ್ತು. ಆದರೆ, ಕಂಪನಿಗೆ ಸಂಬಂಧವೇ ಇಲ್ಲದವರು ಟಿ-ಶರ್ಟ್ ಹಾಕಿಕೊಂಡು ಓಡಾಡಿದ್ದರು. ಪೊಲೀಸರ ದಿಕ್ಕು ತಪ್ಪಿಸಿದ್ದಾರೆ. ಈ ಬಾರಿ ಆ ರೀತಿಯಾಗಲು ಬಿಡುವುದಿಲ್ಲ. ಅನಗತ್ಯವಾಗಿ ರಸ್ತೆಯಲ್ಲಿ ಓಡಾಡಿದರೆ ಕಠಿಣ ಕ್ರಮ ನಿಶ್ಚಿತ' ಎಂದರು.

'ದಿನದಿಂದ ದಿನಕ್ಕೆ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ಪೊಲೀಸರು, ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆಯವರು ಶ್ರಮ ವಹಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಯಾರಾದರೂ ಚೇಷ್ಟೆ ಮಾಡಲು ರಸ್ತೆಗೆ ಬಂದರೆ ದಂಡ ವಿಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು. ವಾಹನಗಳನ್ನೂ ಜಪ್ತಿ ಮಾಡಲಾಗುವುದು' ಎಂದರು.

'ಕೊರೊನಾ ಸೋಂಕು ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ. ಶನಿವಾರ ಹಾಗೂ ಭಾನುವಾರ ಸಾರ್ವಜನಿಕರು ಮನೆಯಲ್ಲೇ ಇದ್ದು ಸಹಕಾರ ನೀಡಬೇಕು. ಸರ್ಕಾರದ ಮುಖ್ಯ ಕಾರ್ಯದರ್ಶಿ ಹೊರಡಿಸಿರುವ ಆದೇಶ ಹಾಗೂ ಸರ್ಕಾರ ನಿಯಮಗಳನ್ನು ಪಾಲಿಸುವ ಮೂಲಕ ನಾವೆಲ್ಲರೂ ಕೊರೊನಾ ವಿರುದ್ಧ ಹೋರಾಡೋಣ' ಎಂದೂ ಹೇಳಿದರು.

ಮೇಲ್ಸೇತುವೆ, ಪ್ರಮುಖ ರಸ್ತೆಗಳು ಬಂದ್

'ತುರ್ತು ಹಾಗೂ ಅಗತ್ಯ ಸೇವೆಗಳ ವಾಹನಗಳ ಓಡಾಟಕ್ಕೆ ಮಾತ್ರ ನಗರದಲ್ಲಿ ಅವಕಾಶವಿದೆ. ಉಳಿದಂತೆ ಎಲ್ಲ ಬಗೆಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಶುಕ್ರವಾರ ರಾತ್ರಿಯಿಂದಲೇ ನಗರದ ಮೇಲ್ಸೇತುವೆ ಹಾಗೂ ಪ್ರಮುಖ ರಸ್ತೆಗಳನ್ನು ಬ್ಯಾರಿಕೇಡ್ ನಿಲ್ಲಿಸಿ ಬಂದ್ ಮಾಡಲಾಗುವುದು' ಎಂದು ಪೊಲೀಸರು ಹೇಳಿದರು.

'ಕಾರಣವಿಲ್ಲದೇ ಯಾರೊಬ್ಬರೂ ಮನೆ ಬಿಟ್ಟು ಹೊರಗೆ ಬರಬಾರದು. ರಸ್ತೆಯಲ್ಲಿ ಅನಗತ್ಯವಾಗಿ ವಾಹನಗಳಲ್ಲಿ ಸಂಚರಿಸಬಾರದು' ಎಂದರು.

'ವೈದ್ಯಕೀಯ ಸೇರಿದಂತೆ ತುರ್ತಾಗಿ ಯಾವುದೇ ರೀತಿಯ ಸಹಾಯ ಬೇಕಾದರೆ ನಮ್ಮ ಬೆಂಗಳೂರು–100ಕ್ಕೆ ಕರೆ ಮಾಡಬಹುದು. ಹೊಯ್ಸಳ ವಾಹನದ ಸಿಬ್ಬಂದಿ ನೆರವು ನೀಡಲು ಸಿದ್ಧರಿದ್ದಾರೆ' ಎಂದೂ ತಿಳಿಸಿದರು.

ನಗರದಲ್ಲಿ ಕೋವಿಡ್ ರೋಗಿಗಳ ಪರದಾಟ: ಸೋಂಕಿತರು ಮನೆಯಲ್ಲಿಯೇ ಇರುವ ಅನಿವಾರ್ಯತೆ

ಕಾಣಿಸುತ್ತಿವೆ 'ಹಾಸಿಗೆ ಇಲ್ಲ' ಫಲಕಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ರೋಗಿಗಳ ಪರದಾಟ ಮುಂದುವರಿದಿದೆ. ಸೋಂಕಿತರು ಮಾತ್ರವಲ್ಲದೆ, ಇತರ ಕಾಯಿಲೆಯಿಂದ ಬಳಲುತ್ತಿರುವವರಿಗೂ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗುತ್ತಿಲ್ಲ. 'ಹಾಸಿಗೆ ಇಲ್ಲ' ಎಂಬ ಫಲಕಗಳು ಆಸ್ಪತ್ರೆ ಮುಂದೆ ಕಾಣುತ್ತಿವೆ.

ಶಿವಾಜಿ ನಗರದ ಚರಕ ಆಸ್ಪತ್ರೆಯಲ್ಲಿ ಕೆಲ ದಿನಗಳ ಹಿಂದಷ್ಟೇ ಕೋವಿಡ್ ರೋಗಿಗಳಿಗೆ 150 ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಆದರೆ, ಈಗಾಗಲೇ ಎಲ್ಲ ಹಾಸಿಗೆಗಳು ಭರ್ತಿ ಆಗಿದ್ದು, ಪ್ರವೇಶ ದ್ವಾರದ ಎದುರು 'ನೋ ಬೆಡ್' ಫಲಕ ಹಾಕಲಾಗಿದೆ.

'ಹಲವು ಆಸ್ಪತ್ರೆಗಳಲ್ಲಿ ತಿರುಗಿದರೂ ಇದೇ ಸಮಸ್ಯೆ ಇದೆ. ಅಂಬುಲೆನ್ಸ್ ಕೂಡ ಒಳಗೆ ಬಿಟ್ಟುಕೊಳ್ಳುತ್ತಿಲ್ಲ. ಹಾಸಿಗೆ ಇಲ್ಲವೆಂದು ಹೊರಗಡೆಯೇ ಹೇಳಿ ಕಳುಹಿಸುತ್ತಿದ್ದಾರೆ' ಎಂದು ಸೋಂಕಿತರೊಬ್ಬರ ಸಂಬಂಧಿ 'ಪ್ರಜಾವಾಣಿ'ಗೆ ಹೇಳಿದರು.



ಶಿವಾಜಿನಗರದ ಚರಕ ಆಸ್ಪತ್ರೆ ಎದುರು 'ಹಾಸಿಗೆ ಇಲ್ಲ' ಫಲಕ ಹಾಕಿರುವುದು

'ಉಸಿರಾಟದ ಸಮಸ್ಯೆ ಇದ್ದರೂ ಆಸ್ಪತ್ರೆಯ ಒಳಗೆ ಬಿಟ್ಟುಕೊಳ್ಳುತ್ತಿಲ್ಲ. ವೈದ್ಯಕೀಯ ಆಮ್ಲಜನಕ ವಾದರೂ ಪೂರೈಸಿ ಎಂದು ಮನವಿ ಮಾಡಿಕೊಂಡರೆ, ಈಗಾಗಲೇ ದಾಖಲಾಗಿರುವ ರೋಗಿಗಳಿಗೇ ಆಮ್ಲಜನಕ ಪೂರೈಸಲು ಕಷ್ಟವಾಗುತ್ತಿದೆ. ಬೇರೆಯವರಿಗೆ ನೀಡಲು ಸಾಧ್ಯವಿಲ್ಲ ಎಂದು ಆಸ್ಪತ್ರೆಯವರು ಹೇಳುತ್ತಿದ್ದಾರೆ' ಎಂದು ಅವರು ದೂರಿದರು.

ನಗರದ ಹಲವು ಆಸ್ಪತ್ರೆಗಳ ಎದುರು ಈ ರೀತಿ ಚೀಟಿ ಅಂಟಿಸಲಾಗಿದೆ. ಅನಿವಾರ್ಯವಾಗಿ ಸೋಂಕಿತರು ಮನೆಯಲ್ಲಿಯೇ ಇರುವಂತಾಗಿದೆ.

ಪರೀಕ್ಷಾ ಕಿಟ್ 'ನೋ ಸ್ಟಾಕ್'!

ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡುವ ಕಿಟ್‌ಗಳು ಕೂಡ ಖಾಲಿ ಆಗಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಂದೆ 'ನೋ ಸ್ಟಾಕ್' ಫಲಕಗಳು ಕಾಣುತ್ತಿವೆ.

ನಗರದ ಕೆ. ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ಎದುರು ಶುಕ್ರವಾರ 'ಆರ್‌ಟಿ ಪಿಸಿಆರ್ ಪರೀಕ್ಷೆ ಕಿಟ್ ಖಾಲಿ ಆಗಿರುವುದರಿಂದ ಇಂದು ಪರೀಕ್ಷೆ ಮಾಡಲಾಗುವುದಿಲ್ಲ' ಎಂದು ಬರೆಯಲಾಗಿತ್ತು.

'ಕೆಮ್ಮು, ಜ್ವರದಂತಹ ಸಮಸ್ಯೆ ಕಾಣಿಸಿಕೊಳ್ಳುತ್ತಿತ್ತು. ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳೋಣ ಎಂದು ಬಂದರೆ ಸ್ಟಾಕ್ ಇಲ್ಲ ನಾಳೆ ಬನ್ನಿ ಎಂದು ಹೇಳಿದರು' ಎಂದು ಸಮೀರ್ ತಿಳಿಸಿದರು.

'ಯಾವುದೇ ಕೇಂದ್ರಗಳಲ್ಲೂ ಪರೀಕ್ಷಾ ಕಿಟ್‌ಗಳ ಕೊರತೆ ಇಲ್ಲ. ಹಾಗೊಂದು ವೇಳೆ, ಸ್ಟಾಕ್ ಇಲ್ಲ ಎಂದು ಹೇಳಿದ್ದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ. ವಿಜಯೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಕೆ. ನಾರಾಯಣಪುರ ಪಿಎಚ್‌ಸಿಯ ವೈದ್ಯಾಧಿಕಾರಿಯವರಿಗೆ ಕರೆ ಮಾಡಲಾಯಿತು. ಅವರು ಸಂಪರ್ಕಕ್ಕೆ ಸಿಗಲಿಲ್ಲ.

ವಿದ್ಯುತ್ ವ್ಯತ್ಯಯ: ಆಕ್ಸಿಜನ್ ಉತ್ಪಾದನೆ ಸ್ಥಗಿತ

ನಗರದ ಹೊರವಲಯದ ವಿದ್ಯುತ್ ಕೇಂದ್ರದಲ್ಲಿ ಶುಕ್ರವಾರ ಸಂಜೆ ಟ್ರಾನ್ಸ್‌ಫಾರ್ಮರ್‌ಗೆ ಹಾನಿಯಾಗಿದ್ದರಿಂದ ತಕ್ಷಣ 'ಭುರುಕ ಗ್ಯಾಸಸ್' ವೈದ್ಯಕೀಯ ಆಮ್ಲಜನಕ ಉತ್ಪಾದನಾ ಕೇಂದ್ರದಲ್ಲಿ ಉತ್ಪಾದನೆ ಸ್ಥಗಿತಗೊಂಡಿತ್ತು.

'ಕೆಪಿಟಿಸಿಎಲ್ ತಪ್ಪಿನಿಂದ ಟ್ರಾನ್ಸ್‌ಫಾರ್ಮರ್‌ಗೆ ಹಾನಿಯಾಗಿದೆ. ವಿದ್ಯುತ್ ಇಲ್ಲದೆ ಆಕ್ಸಿಜನ್ ಉತ್ಪಾದನೆ ಸ್ಥಗಿತಗೊಂಡಿದೆ. ನಮ್ಮ ಘಟಕದಲ್ಲಿ ದಿನಕ್ಕೆ 65 ಟನ್ ಆಕ್ಸಿಜನ್ ಉತ್ಪಾದಿಸಲಾಗುತ್ತಿತ್ತು. ವಿದ್ಯುತ್ ಸರಬರಾಜು ಪ್ರಾರಂಭವಾಗುತ್ತಿದ್ದಂತೆ ಉತ್ಪಾದನೆ ಶುರು ಮಾಡಲಾಗುವುದು' ಎಂದು ಕಂಪನಿಯ ನಿರ್ದೇಶಕ ಸತೀಶ್ ಕೇಸರಿ ಹೇಳಿದರು.

ನಗರದಲ್ಲಿ ಕೇವಲ ಎರಡು ಆಕ್ಸಿಜನ್ ಉತ್ಪಾದಕ ಘಟಕಗಳಿವೆ.



ವಹಿವಾಟು ಸ್ತಬ್ಧ

ಕೋವಿಡ್ ಎರಡನೇ ಅಲೆಗೆ ಕಡಿವಾಣ ಹಾಕುವ ಸಲುವಾಗಿ ಸರ್ಕಾರವು ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ನೀಡಿರುವ ಕಾರಣ ಬೆಂಗಳೂರಿನ ಬ್ರಿಗೇಡ್ ರಸ್ತೆಯ ವಾಣಿಜ್ಯ ಮಳಿಗೆಗಳು ಶುಕ್ರವಾರ ಮುಚ್ಚಿದ್ದವು –ಪ್ರಜಾವಾಣಿ ಚಿತ್ರ

ಐಸಿಯು ಹಾಸಿಗೆಗಳೇ ಇಲ್ಲ: ಕೋರ್ಟ್‌ಗೆ ಬಿಬಿಎಂಪಿ ಮಾಹಿತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡಲು ಹೆಚ್ಚುವರಿ ಹಾಸಿಗೆ ವ್ಯವಸ್ಥೆಯನ್ನು ತಕ್ಷಣವೇ ಮಾಡುವಂತೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಶುಕ್ರವಾರ ಸಂಜೆ 5 ಗಂಟೆಯ ವೇಳೆಗೆ ಐಸಿಯುಗಳಲ್ಲಿ ಒಂದೇ ಒಂದು ಹಾಸಿಗೆಯೂ ಲಭ್ಯ ಇಲ್ಲ ಎಂಬ ಮಾಹಿತಿ ಪಡೆದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಪರಿಸ್ಥಿತಿ ಭಯಾನಕವಾಗಿದೆ' ಎಂದು ಆತಂಕ ವ್ಯಕ್ತಪಡಿಸಿತು.

'ಶುಕ್ರವಾರ ಸಂಜೆ ವೇಳೆಗೆ 32 ಎಸ್‌ಡಿಯು (ಸ್ಟೆಪ್ ಡೌನ್ ಯುನಿಟ್) ಹಾಸಿಗೆಗಳು, ಐಸಿಯು ಮತ್ತು ವೆಂಟಿಲೇಟರ್ ಹೊಂದಿರುವ 11 ಹಾಸಿಗೆಗಳು ಲಭ್ಯ ಇವೆ. ಆದರೆ, ಐಸಿಯುನಲ್ಲಿ ಒಂದೇ ಒಂದು ಹಾಸಿಗೆಯೂ ಲಭ್ಯವಿಲ್ಲ' ಎಂದು ಬಿಬಿಎಂಪಿ ಪರ ಹಾಜರಿದ್ದ ಮುಖ್ಯ ಆರೋಗ್ಯಾಧಿಕಾರಿ ಮತ್ತು ವಕೀಲರು ಮಾಹಿತಿ ನೀಡಿದರು. 'ಹೆಚ್ಚುವರಿ ಹಾಸಿಗೆಗಳ ವ್ಯವಸ್ಥೆ ಮಾಡಿದ ವಿವರವನ್ನು ಮುಂದಿನ ವಿಚಾರಣೆ (ಮಂಗಳವಾರ) ವೇಳೆಗೆ ಸಲ್ಲಿಸಬೇಕು' ಎಂದು ಪೀಠ ತಿಳಿಸಿತು.

'ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲು ಸಾಧ್ಯ ಇದೆಯೇ ಎಂಬುದನ್ನು ತಕ್ಷಣವೇ ಪರಿಶೀಲಿಸಬೇಕು. ರಾಜಧಾನಿ ಸಮೀಪದ ಜಿಲ್ಲೆಗಳಲ್ಲಿ ಮೂರು ವರ್ಗದ ಹಾಸಿಗೆಗಳು ಲಭ್ಯತೆ ಇದೆಯೇ ಎಂಬುದನ್ನು ಗುರುತಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು.

'ಕೋವಿಡ್ ಆಸ್ಪತ್ರೆಗಳ ಹೊರಗೆ ಸಹಾಯ ಕೇಂದ್ರಗಳನ್ನು ಸ್ಥಾಪಿಸಬೇಕು. ಆಮ್ಲಜನಕ ಲಭ್ಯತೆ ಬಗ್ಗೆ ಅಂಕಿ–ಅಂಶ ಸಹಿತ ಮಾಹಿತಿ ನೀಡಬೇಕು. ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ತಯಾರಿಕರಿಂದ ನೇರವಾಗಿ ಖರೀದಿಸುವ ಬಗ್ಗೆ ಪ್ರತಿಕ್ರಿಯೆ ಸಲ್ಲಿಸಬೇಕು' ಎಂದು ಪೀಠ ತಿಳಿಸಿತು.

ಕೊರೊನಾ ಸ್ಪಂದನ

ನಿಮ್ಮ ನೋವಿಗೆ ನಮ್ಮ ಧ್ವನಿ

ಕೊರೊನಾ ಕಾಲದಲ್ಲಿ ನೀವು ಅನುಭವಿಸುತ್ತಿರುವ ಸಂಕಷ್ಟ, ನೋವುಗಳಿಗೆ ನಿಮ್ಮೆಲ್ಲರ 'ಪ್ರಜಾವಾಣಿ' ಧ್ವನಿಯಾಗಲಿದೆ.

ಕೋವಿಡ್ ಕಾಲದಲ್ಲಿ ನೀವು ಅಥವಾ ನಿಮ್ಮ ಸಂಬಂಧಿಗಳು, ಸ್ನೇಹಿತರು ಹಾಸಿಗೆ ಸಿಗದೇ, ಆಕ್ಸಿಜನ್ ಸಿಗದೇ ಪರದಾಡಿದ್ದರೆ, ಆಂಬುಲೆನ್ಸ್‌ಗಾಗಿ ಗೋಳಾಡಿದ್ದರೆ, ಆಸ್ಪತ್ರೆಗೆ ದಾಖಲಾಗಿಯೂ ಚಿಕಿತ್ಸೆ, ಊಟ–ನೀರು ಸಿಗದೇ ಇದ್ದರೆ ನೋವಿನ ಕಥನವನ್ನು ನಮಗೆ ಬರೆದು ಕಳುಹಿಸಿ. ನೀವು ಉಂಡ ನೋವನ್ನು ಕಂಡಾದರೂ ಸರ್ಕಾರ ಉಳಿದವರಿಗೆ ಸೂಕ್ತ ವ್ಯವಸ್ಥೆ ಮಾಡಬಹುದು. ಆಸ್ಪತ್ರೆಗಳು ತಮ್ಮ ಕಾಯಕವೇ ಆಗಿರುವ ಕರುಣೆ–ಅನುಕಂಪ, ಚಿಕಿತ್ಸಕ ಸೇವೆಯನ್ನು ಒದಗಿಸಬಹುದು ಎಂಬ ವಿಶ್ವಾಸ ನಮ್ಮದು.

ನೀವು ಮಾಡಬೇಕಾಗಿರುವುದು ಇಷ್ಟೇ

ನಿಮ್ಮ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ನಿಮ್ಮದೊಂದು ಭಾವಚಿತ್ರವನ್ನು ಕಳುಹಿಸಿ. ನಿಮ್ಮ ಬರಹ ಸ್ಪಷ್ಟ, ನಿಖರವಾಗಿ ಇರಲಿ. ಗರಿಷ್ಠ ಮಿತಿ 150 ಪದಗಳು. ದುರುದ್ದೇಶ ಅಥವಾ ಕಲ್ಪಿತ–ಕೇಳಿಸಿಕೊಂಡ ಆರೋಪಗಳು ಬೇಡ. ನಿಮ್ಮದೇ ಸ್ವಂತ ಅನುಭವ ಆಗಿದ್ದರೆ ಮಾತ್ರ ಬರೆದು ಕಳಿಸಿ.

ವಾಟ್ಸ್ ಆ್ಯಪ್ ಸಂಖ್ಯೆ: 9606038256

'ಅಮೆರಿಕ ನಡೆ ನೋಡಿ ನಾವು ಕಲಿಯಬೇಕಿದೆ'



'ಈಗ ಎಲ್ಲ ಕಡೆ ಪ್ರತಿಧ್ವನಿಸುತ್ತಿರುವ ಒಂದು ಪದ ಕೋವಿಡ್. ಇದಕ್ಕೆ ನಮ್ಮ ನೆರೆಮನೆಯೂ ಹೊರತಾಗಲಿಲ್ಲ. ಕೋವಿಡ್‌ನಿಂದ ನಿಧನರಾದ ರೋಗಿಯ ಮೃತದೇಹವನ್ನು ಆಸ್ಪತ್ರೆಯವರು ನೀಡುತ್ತಿಲ್ಲ ಎಂದು ಮೃತರ ಸಂಬಂಧಿಯೊಬ್ಬರು ದೂರುತ್ತಿದ್ದರು. ಬಿಲ್ ಪಾವತಿಸಿ ಎಂದು ಆಸ್ಪತ್ರೆಯವರು ಹಿಡಿದಿದ್ದ ಪಟ್ಟು ಇವರನ್ನು ಬಹಳ ಕಾಡಿತ್ತು. 'ಮೊದಲು ಬಿಲ್ ಪಾವತಿಸಿ, ಆಮೇಲೆ ಮೃತದೇಹ ಮಾತು' ಎಂಬ ಆಸ್ಪತ್ರೆಯವರ ಹಕ್ಕೊತ್ತಾಯದಿಂದ ಮೃತರ ಕುಟುಂಬ ದಿಕ್ಕು ತೋಚದ ಸ್ಥಿತಿಯಲ್ಲಿತ್ತು. ಇದು, ಭಾರತದ ಸ್ಥಿತಿ.

'ಕೆಲವು ದಿನಗಳ ಹಿಂದೆ ನಾನು ಚಿಕಿತ್ಸೆಗೆಂದು ಅಮೆರಿಕದ ಆಸ್ಪತ್ರೆಗೆ ದಾಖಲಾಗಿದ್ದೆ. ಒಂದು ಬಿಡಿಗಾಸೂ ಪಡೆಯದೆ ನನ್ನನ್ನು ಒಳರೋಗಿಯಾಗಿಸಿದ್ದರು. ಒಂದೇ ದಿನದಲ್ಲಿ ಗುಣಪಡಿಸಿ, ಅಲ್ಲಿಂದ ನನ್ನನ್ನು ಬಿಡುಗಡೆಗೊಳಿಸಿದರು. ಆಸ್ಪತ್ರೆಯಿಂದ ಹೊರಬರುವಾಗ 'ಬಿಲ್ ಎಷ್ಟಾಯಿತು?' ಎಂದು ಮಗನನ್ನು ವಿಚಾರಿಸಿದ್ದೆ. ಇಲ್ಲಿ ತಕ್ಷಣ ಬಿಲ್ ಕೊಡಲ್ಲ, ಆಮೇಲೆ ಕಳುಹಿಸುತ್ತಾರೆ ಎಂದಿದ್ದ ಮಗ. ಅದಾಗಿ ಒಂದು ತಿಂಗಳೇ ಕಳೆದಿದೆ. ಅಮೆರಿಕ ಬಿಟ್ಟು ತಾಯ್ನಾಡು ಸೇರಿಕೊಂಡಿದ್ದೇನೆ. ಇಂದಿಗೂ ಬಿಲ್ ಬಂದಿಲ್ಲ. ವಿದೇಶದಲ್ಲಿ ವೈದ್ಯಕೀಯ ವೆಚ್ಚ ವಿಪರೀತ ಎನ್ನುವ ಸ್ನೇಹಿತರಿಗೆ ಉತ್ತರಿಸಲು ಮಗನನ್ನು ಆಗಾಗ ಬಿಲ್ ಬಗ್ಗೆ ವಿಚಾರಿಸುತ್ತೇನೆ. ಆಸ್ಪತ್ರೆಯ ಸಾಲ ತೀರಿಸದೆ, ನನಗೂ ನೆಮ್ಮದಿಯ ನಿದ್ರೆ ಇಲ್ಲ.

'ವ್ಯಾಪಾರಕ್ಕಾಗಿ ಏನೆಲ್ಲ ಮಾಡುತ್ತಾರೆ?', 'ಯಾರನ್ನೂ ನಂಬಲ್ಲ' ಎನ್ನುವ ಬಂಡವಾಳಶಾಹಿ ನಾಡು ಅವರದ್ದು. ಆದರೆ, ಬುದ್ಧ, ಬಸವ, ಸತ್ಯ ಹರಿಶ್ಚಂದ್ರ ಹಾಗೂ ಮಹಾತ್ಮ ಗಾಂಧಿ ಹುಟ್ಟಿದ ಸತ್ಯವಂತರ ನಾಡು ನಮ್ಮದು. ಅಲ್ಲಿ ಪಡೆದ ಚಿಕಿತ್ಸೆಯ ಬಿಲ್‌ಗಿಂತ ವ್ಯಕ್ತಿಯ ಜೀವ ಮಹತ್ವದ್ದಾದರೆ, ಇಲ್ಲಿ ಜೀವವಿಲ್ಲದ ದೇಹಕ್ಕೆ ಬಿಲ್ ಮಹತ್ವ ಪಡೆದುಕೊಂಡಿದೆ. ಈಗ 'ಮೇರಾ ಭಾರತ್ ಮಹಾನ್' ಎಂದು ಹೇಳಲಾ?

ಜಿ.ಬಿ.ಪಾಟೀಲ
ಯಲಹಂಕ ಉಪನಗರ

ಸಂಕ್ಷಿಪ್ತ ಸುದ್ದಿ

ಅಂಚೆ ಕಚೇರಿ ಶನಿವಾರ ರಜೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿರುವುದರಿಂದ ಶನಿವಾರಗಳಂದು ಎಲ್ಲ ಅಂಚೆ ಕಚೇರಿಗಳಿಗೆ ರಜೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಂಚೆ ಇಲಾಖೆ ನೌಕರರಲ್ಲೂ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣದಿಂದ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿರುವವರೆಗೆ ಎಲ್ಲ ಶನಿವಾರ ಅಂಚೆ ಕಚೇರಿಗಳನ್ನು ಮುಚ್ಚಲು ನಿರ್ಧರಿಸಲಾಗಿದೆ. ದಯವಿಟ್ಟು ಸಾರ್ವಜನಿಕರು ಸಹಕರಿಸಬೇಕು ಎಂದು ಇಲಾಖೆ ಮನವಿ ಮಾಡಿದೆ.

'ವಸತಿ ನಿಲಯ ಮುಚ್ಚಬೇಡಿ'

ಬೆಂಗಳೂರು: 'ವಿದ್ಯಾರ್ಥಿ ನಿಲಯಗಳನ್ನು ಮುಚ್ಚಬಾರದು. ಹಾಸ್ಟೆಲ್‌ನಲ್ಲಿದ್ದುಕೊಂಡು ಪರೀಕ್ಷೆಗೆ ಸಿದ್ಧತೆ ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಶಾಲಾ-ಕಾಲೇಜುಗಳನ್ನು ಮುಚ್ಚಲಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನರು ಬಹುತೇಕ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಆಶ್ರಯ ಪಡೆದಿದ್ದಾರೆ. ವಿದ್ಯಾರ್ಥಿಗಳು, ಪಾಲಕರು ನಮ್ಮ ಇಲಾಖೆ ಅಧಿಕಾರಿಗಳ ಬಳಿ ಹಾಸ್ಟೆಲ್ ಮುಚ್ಚದಂತೆ ಮನವಿ ಮಾಡುತ್ತಿದ್ದಾರೆ' ಎಂದೂ ಹೇಳಿದ್ದಾರೆ.

ಹಾಸ್ಟೆಲ್ ಮುಚ್ಚದಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಇಲಾಖೆಯ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಸುರೇಶ್‌ಕುಮಾರ್ ಮನವಿ ಮಾಡಿದ್ದಾರೆ.

ಹಣ ಪಡೆದು ಲಸಿಕೆ; ಪುಷ್ಪಾ ಕಿಡಿ



ಮೈಸೂರು: 'ಸಾರ್ವಜನಿಕರಿಂದ ಹಣ ಪಡೆದು ಕೋವಿಡ್ ಲಸಿಕೆ ಹಾಕುವ ಮೂಲಕ ಸರ್ಕಾರ ಹಗಲು ದರೋಡೆಗೆ ಇಳಿದಿದೆ' ಎಂದು ಕೆಪಿಸಿಸಿ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಕಿಡಿಕಾರಿದರು.

'ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಬೇಕಿತ್ತು. ಇದರಲ್ಲೂ 'ಕಿಕ್‌ಬ್ಯಾಗ್' ನಡೆದಿರಬಹುದೇನೋ ಎಂಬ ಸಂದೇಹ ಬರುತ್ತಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅನುಮಾನ ವ್ಯಕ್ತಪಡಿಸಿದರು.

'ಈಗ ಸರ್ಕಾರ ಕೈಗೊಂಡಿರುವ ಕ್ರಮವು ಕೊರೊನಾದಿಂದ ಜನರು ಸಾಯುವುದರ ಜತೆಗೆ ಹಸಿವಿನಿಂದಲೂ ಬಳಲುವಂತೆ ಮಾಡಿದೆ' ಎಂದು ಹರಿಹಾಯ್ದರು.

ಬಾಷ್‌ನಿಂದ ಕೋವಿಡ್ ಕೇಂದ್ರ ಹಸ್ತಾಂತರ

ಪ್ರಜಾವಾಣಿ ವಾರ್ತೆ


ಬಾಷ್ ಸಂಸ್ಥೆಯ ಪರಿವರ್ತಿತ ಕೋವಿಡ್ ಕೇಂದ್ರವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ವೀಕ್ಷಿಸಿದರು. ಬಾಷ್ ಸಂಸ್ಥೆಯ ಸೌಮಿತ್ರ ಭಟ್ಟಾಚಾರ್ಯ ಹಾಗೂ ಇತರರು ಇದ್ದರು

ಬೆಂಗಳೂರು: ಕೋವಿಡ್ ರೋಗಿಗಳಿಗೆ ಹಾಸಿಗೆಗಳ ಕೊರತೆ ನೀಗಿಸುವ ಹಾಗೂ ಚಿಕಿತ್ಸೆಗೆ ನೆರವಾಗುವ ಉದ್ದೇಶದಿಂದ ಬಾಷ್ ಲಿಮಿಟೆಡ್ ಸಂಸ್ಥೆಯು ಆಡುಗೋಡಿ ಕ್ಯಾಂಪಸ್‌ನಲ್ಲಿರುವ ತನ್ನ ಕ್ರೀಡಾ ಸಂಕೀರ್ಣವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಿದೆ.

ಕೊರೊನಾ ಎರಡನೇ ಅಲೆ ಉಲ್ಬಣಗೊಂಡಿರುವುದರಿಂದ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಹಾಸಿಗೆ ಸಮಸ್ಯೆ ಹಾಗೂ ಚಿಕಿತ್ಸೆಗೆ ಸಮಸ್ಯೆಯಾಗಿರುವುದರಿಂದ ಬಾಷ್ ಸಂಸ್ಥೆಯು ತನ್ನ ಜಾಗವನ್ನು ಕೋವಿಡ್ ಚಿಕಿತ್ಸೆಗೆ ಬಿಟ್ಟುಕೊಡಲು ನಿರ್ಧರಿಸಿದ್ದು, ಪರಿವರ್ತಿಸಿರುವ ಕೋವಿಡ್ ಚಿಕಿತ್ಸಾ ಕೇಂದ್ರವನ್ನು ಬಿಬಿಎಂಪಿಗೆ ಹಸ್ತಾಂತರಿಸಿದೆ.

ಈ ಕೋವಿಡ್ ಕೇಂದ್ರದಲ್ಲಿ 70 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಚಿಕಿತ್ಸೆ ನೀಡಲು ನುರಿತ ವೈದ್ಯರ ತಂಡ ಕಾರ್ಯನಿರ್ವಹಿಸಲಿದ್ದು, ದಿನದ 24 ಗಂಟೆಯೂ ಸೋಂಕಿತರಿಗೆ ವೈದ್ಯಕೀಯ ಸೇವೆ, ಆಹಾರ, ಹಾಸಿಗೆ ಹಾಗೂ ಇಂಟರ್‌ನೆಟ್ ವ್ಯವಸ್ಥೆಯೂ ಇರಲಿದೆ. ಈ ಸೇವೆ ಸಾರ್ವಜನಿಕರಿಗೆ ಹಾಗೂ ಬಾಷ್ ಸಿಬ್ಬಂದಿ ಮತ್ತು ಅವರ ಸಂಬಂಧಿಕರಿಗೂ ಲಭ್ಯ ಎಂದು ಸಂಸ್ಥೆ ತಿಳಿಸಿದೆ.

ಕೋವಿಡ್ ಕೇಂದ್ರಕ್ಕೆ ಭೇಟಿ ನೀಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ,'ಬಾಷ್ ಸಂಸ್ಥೆಯು ತನ್ನ ಕ್ರೀಡಾ ಸಂಕೀರ್ಣವನ್ನು ಕೋವಿಡ್ ಕೇಂದ್ರವನ್ನಾಗಿ ಹಸ್ತಾಂತರಿಸಿ, ಸಾಮಾಜಿಕ ಕಳಕಳಿ ಮೆರೆದಿದೆ. ಕೋವಿಡ್ ವಿರುದ್ಧ ಸರ್ಕಾರ ನಡೆಸುತ್ತಿರುವ ಹೋರಾಟದಲ್ಲಿ ಕೈಜೋಡಿಸುವ ಮೂಲಕ ಇತರರಿಗೆ ಮಾದರಿಯಾಗಿದೆ. ನಾಗರಿಕರು ಈ ಕೇಂದ್ರದಲ್ಲಿರುವ ಸೇವೆ ಪಡೆದುಕೊಳ್ಳಬಹುದು' ಎಂದರು.

ಬಾಷ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಬಾಷ್ ಗ್ರೂಪ್‌ನ ಅಧ್ಯಕ್ಷ ಸೌಮಿತ್ರ ಭಟ್ಟಾಚಾರ್ಯ,'ಸಂಸ್ಥೆಯ ಸಿಬ್ಬಂದಿ ಆರೋಗ್ಯ ಮತ್ತು ಸುರಕ್ಷತೆಗೆ ಮೊದಲ ಆದ್ಯತೆ ನೀಡುತ್ತಿದ್ದೇವೆ. ಈವರೆಗೆ ನಾಲ್ಕು ಮಿಲಿಯನ್‌ಗೂ ಹೆಚ್ಚು ಮಾಸ್ಕ್ ವಿತರಿಸಿದ್ದೇವೆ' ಎಂದರು.

ನಂದಿನಿ ಲೇಔಟ್‌ನಲ್ಲಿ ಆರೈಕೆ ಕೇಂದ್ರ

ಮಹಾಲಕ್ಷ್ಮೀ ಲೇಔಟ್ ಕ್ಷೇತ್ರ ವ್ಯಾಪ್ತಿಯ ನಂದಿನಿ ಲೇಔಟ್‌ನಲ್ಲಿರುವ ಕೆಂಪೇಗೌಡ ಸಮುದಾಯ ಭವನವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಮಾರ್ಪಡಿಸಲಾಗಿದೆ.

ಈ ಕೇಂದ್ರದಲ್ಲಿ 70 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದ್ದು, ವೈದ್ಯರು ಹಾಗೂ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಲಾಗಿದೆ. ಇವರು ಮೂರು ಪಾಳಿಗಳಲ್ಲಿ ಕೆಲಸ ಮಾಡಲಿದ್ದಾರೆ. ಸೋಂಕಿಗೊಳಗಾದವರ ಪೈಕಿ ಮನೆಯಲ್ಲೇ ಪ್ರತ್ಯೇಕವಾಗಿ ಇರಲು ಸಾಧ್ಯವಿಲ್ಲದಿರುವವರನ್ನು ಈ ಕೇಂದ್ರಕ್ಕೆ ದಾಖಲು ಮಾಡಲು ನಿರ್ಧರಿಸಲಾಗಿದೆ. 'ಈ ಕೇಂದ್ರಕ್ಕೆ ದಾಖಲಾಗುವವರಿಗೆ ಪ್ರತಿನಿತ್ಯ ಹಾಲು, ಮೊಟ್ಟೆ, ಹಣ್ಣು ಸೇರಿದಂತೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲಾಗುತ್ತದೆ. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಶ್ವಾಸಕೋಶ ತಜ್ಞರು ಕೇಂದ್ರಕ್ಕೆ ಭೇಟಿ ನೀಡಿ ರೋಗಿಗಳ ತಪಾಸಣೆ ನಡೆಸಲಿದ್ದಾರೆ. ಉಸಿರಾಟದ ಸಮಸ್ಯೆ ಇದ್ದವರನ್ನು ಬೇರೆ ಆಸ್ಪತ್ರೆಗೆ ದಾಖಲಿಸುವ ವ್ಯವಸ್ಥೆಯನ್ನೂ ಮಾಡಿದ್ದೇವೆ' ಎಂದು ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

'ಹೋದ ವರ್ಷದಂತೆ ಈ ಬಾರಿಯೂ 1,500 ವೈದ್ಯಕೀಯ ಕಿಟ್‌ಗಳನ್ನು ತರಿಸಲಾಗಿದೆ. ಮನೆಯಲ್ಲಿ ಪ್ರತ್ಯೇಕವಾಸದಲ್ಲಿರುವವರಿಗೆ ಇವುಗಳನ್ನು ವಿತರಿಸಲಾಗುತ್ತದೆ. ಅಗತ್ಯವುಳ್ಳವರಿಗೆ ಪೌಷ್ಟಿಕ ಆಹಾರವನ್ನೂ ಪೂರೈಸಲಾಗುತ್ತದೆ. ಇದಕ್ಕಾಗಿ ಆಶಾ ಕಾರ್ಯಕರ್ತೆಯರ ತಂಡವನ್ನು ನಿಯೋಜಿಸಲಾಗಿದೆ' ಎಂದರು.

'ಲಸಿಕೆ' ಹೆಸರಿನಲ್ಲಿ ಕರೆ ಮಾಡಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ತಡೆಯುವ ಲಸಿಕೆ ಹೆಸರಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡುತ್ತಿರುವ ಸೈಬರ್ ವಂಚಕರು, ಮೊಬೈಲ್ ಹಾಗೂ ವೈಯಕ್ತಿಕ ಮಾಹಿತಿ ಪಡೆದು ವಂಚಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ.

'ನೀವು ಲಸಿಕೆ ಪಡೆದುಕೊಂಡಿದ್ದೀರಾ?', 'ನೀವು ಲಸಿಕೆ ಹಾಕಿಸಿಕೊಳ್ಳಲು ನೋಂದಣಿ ಮಾಡಿಕೊಳ್ಳಬೇಕೇ?' ಸೇರಿದಂತೆ ಹಲವು ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಸಾರ್ವಜನಿಕರಿಗೆ ವಂಚಕರು ಕರೆ ಮಾಡುತ್ತಿದ್ದಾರೆ. ಕೆಲವರಿಗೆ ಮೊಬೈಲ್ ಸಂದೇಶ ಕಳುಹಿಸುತ್ತಿದ್ದಾರೆ.

ಇಂಥ ಮೊಬೈಲ್ ಕರೆ, ಸಂದೇಶ ನಂಬಿ ಸಾರ್ವಜನಿಕರು ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಅದೇ ಮಾಹಿತಿ ಬಳಸಿ ವಂಚಕರು, ಮೊಬೈಲ್ ಹ್ಯಾಕ್ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ.

'9122500***7 ಸಂಖ್ಯೆಯಿಂದ ನನ್ನ ಮೊಬೈಲ್‌ಗೆ ಕರೆ ಬಂದಿತ್ತು. ಅದನ್ನು ಸ್ವೀಕರಿಸಿದ್ದೆ. ನೀವು ಲಸಿಕೆ ಪಡೆದಿದ್ದೀರಾ? ಎಂಬುದಾದರೆ, 1 ಸಂಖ್ಯೆ ಒತ್ತಿ ಎಂದಿದ್ದರು. ಅದನ್ನು ನಂಬಿ, 1 ಸಂಖ್ಯೆ ಒತ್ತಿದಾಗ ಮೊಬೈಲ್ ಹ್ಯಾಕ್ ಆಯಿತು' ಎಂದು ನಗರದ ನಿವಾಸಿಯೊಬ್ಬರು ತಿಳಿಸಿದರು.

'ಮೊಬೈಲ್ ಸ್ವಿಚ್ ಆಫ್ ಮಾಡಿ ಆನ್ ಮಾಡಿದೆ. ಪುನಃ ಕರೆ ಬಂತು. ಆದರೆ, ನಾನು ಸ್ವೀಕರಿಸಿಲ್ಲ. ಇದೇ ರೀತಿಯಲ್ಲೇ ಹಲವರಿಗೆ ಕರೆಗಳು ಬರುತ್ತಿದ್ದು, ಜನರು ಎಚ್ಚರಿಕೆ ವಹಿಸಬೇಕು' ಎಂದು ಹೇಳಿದರು.

ಈ ಬಗ್ಗೆ ಮಾತನಾಡಿದ ನಗರದ ಸೈಬರ್ ಕ್ರೈಂ ಠಾಣೆಯೊಂದರ ಪೊಲೀಸ್ ಅಧಿಕಾರಿ, 'ಲಸಿಕೆ ಹೆಸರಿನಲ್ಲಿ ಕರೆ ಮಾಡಿ ವಂಚಿಸುತ್ತಿರುವ ಬಗ್ಗೆ ಸದ್ಯಕ್ಕೆ ದೂರುಗಳು ಬಂದಿಲ್ಲ. ಯಾರಿಗಾದರೂ ವಂಚನೆ ಆಗಿದ್ದರೆ ಠಾಣೆಗೆ ಬಂದು ದೂರು ನೀಡಬಹುದು' ಎಂದರು.

ಮಾಸ್ಕ್ ಧರಿಸದೇ ಪೊಲೀಸರೊಂದಿಗೆ ವಾಗ್ವಾದ

ಪುಲಿಕೇಶಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು ಮಾಲೀಕರೊಬ್ಬರು ಮಾಸ್ಕ್ ಧರಿಸದೇ ಪೊಲೀಸರ ಜೊತೆ ವಾಗ್ವಾದ ನಡೆಸಿದ್ದು, ನೋಂದಣಿ ಸಂಖ್ಯೆ ಆಧರಿಸಿ ಮಾಲೀಕನ ವಿರುದ್ಧ ದೂರು ನೀಡಲಾಗಿದೆ.

ಠಾಣೆಯ ಎಎಸ್‌ಐ ನೇತೃತ್ವದ ತಂಡ, ವಾಹನಗಳನ್ನು ಪರಿಶೀಲನೆ ನಡೆಸುತ್ತಿತ್ತು. ಸ್ಥಳಕ್ಕೆ ಬಂದಿದ್ದ ಕಾರಿನಲ್ಲಿದ್ದ ಮಾಲೀಕ, ಮಾಸ್ಕ್ ಹಾಕಿರಲಿಲ್ಲ. ಅದನ್ನು ಪ್ರಶ್ನಿಸಿದ್ದ ಎಎಸ್‌ಐ, ದಂಡ ಕಟ್ಟುವಂತೆ ಹೇಳಿದ್ದರು.

ಅದಕ್ಕೆ ಒಪ್ಪದ ಮಾಲೀಕ, ರಸ್ತೆಯಲ್ಲೇ ಕಾರು ನಿಲ್ಲಿಸಿ ಲಾಕ್ ಮಾಡಿಕೊಂಡು ಓಡಾಡಿದ್ದರು. ಅದರಿಂದ ಸಾರ್ವಜನಿಕರ ವಾಹನಗಳ ಓಡಾಟಕ್ಕೂ ತೊಂದರೆಯಾಗಿ, ದಟ್ಟಣೆ ಉಂಟಾಯಿತು.

'ನಾನು ಮಾಸ್ಕ್ ಹಾಕುವುದಿಲ್ಲ. ದಂಡವನ್ನೂ ಕಟ್ಟುವುದಿಲ್ಲ. ಏನಾದರೂ ಮಾಡಿಕೊ. ನಿನ್ನ ಬೆದರಿಕೆಗೂ ಹೆದರುವುದಿಲ್ಲ' ಎಂದು ಮಾಲೀಕ, ಎಎಸ್‌ಐ ಅವರಿಗೆ ಅವಾಜ್ ಹಾಕಿ ಹೊರಟು ಹೋಗಿದ್ದಾನೆ, ಈ ಘಟನೆಯನ್ನು ಸ್ಥಳೀಯರೊಬ್ಬರು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.

'ಕರ್ತವ್ಯಕ್ಕೆ ಕಾರಿನ ಮಾಲೀಕ ಅಡ್ಡಿಪಡಿಸಿದ್ದಾನೆ. ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಮಾಲೀಕನ ವಿರುದ್ಧ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಠಾಣೆಗೆ ದೂರು ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಸಲಹೆ ನೀಡಲಿ: ಜಗದೀಶ ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೊರೊನಾ ಉಲ್ಬಣಿಸುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ ಸರ್ಕಾರ ನಡೆಸುವಾಗ ಸಾಕಷ್ಟು ಒತ್ತಡಗಳಿರುತ್ತವೆ. ಈ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ ಇರುವ ಸಿದ್ದರಾಮಯ್ಯ ಸಲಹೆ ಸೂಚನೆಗಳನ್ನು ನೀಡಬೇಕೇ ಹೊರತು, ಟೀಕಿಸುವುದು ಸರಿಯಲ್ಲ' ಎಂದು ಸಚಿವ ಜಗದೀಶ ಶೆಟ್ಟರ್ ಶುಕ್ರವಾರ ಹೇಳಿದರು.

ಕೋವಿಡ್ ನಿಯಂತ್ರಣ ಕುರಿತ ದಿಢೀರ್ ಕ್ರಮ ಉಲ್ಲೇಖಿಸಿ ಸಿದ್ದರಾಮಯ್ಯ 'ಚುನಾಯಿತ ಸರ್ಕಾರವೋ, ಹುಚ್ಚರ ಸಂತೆಯೋ' ಎಂದು ಟ್ವೀಟ್ ಮಾಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಶೆಟ್ಟರ್, 'ಇದು ಟೀಕಿಸುವ ಸಮಯವಲ್ಲ. ಟೀಕಿಸಿ, ರಾಜಕೀಯ ಮಾಡುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.


ಕೋವಿಡ್ ನಿಯಂತ್ರಣಕ್ಕಾಗಿ ಹೇರಲಾಗಿರುವ ಕರ್ಫ್ಯೂದಿಂದ ಹೋಟೆಲ್‌ಗಳು ಮುಚ್ಚಿದ್ದ ಕಾರಣ ಕಬ್ಬನ್‌ಪೇಟೆಯ ನಾಗಣ್ಣ ರಸ್ತೆಯಲ್ಲಿ ಜನರಿಗೆ ಶುಕ್ರವಾರ ಆಹಾರ ವಿತರಿಸಲಾಯಿತು –ಪ್ರಜಾವಾಣಿ ಚಿತ್ರ

ಕೆ.ಆರ್.ಪುರ: ಲಸಿಕೆ ಅಭಿಯಾನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೊರೊನಾ ಎರಡನೇ ಅಲೆಯಿಂದಾಗಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸಾರ್ವಜನಿಕರು ತಮ್ಮ ಆರೋಗ್ಯ ರಕ್ಷಿಸಿಕೊಳ್ಳಬೇಕಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರ ಸಮೀಪದ ಬಾಬುಸಪಾಳ್ಯದಲ್ಲಿ ಬಿಬಿಎಂಪಿ ವತಿಯಿಂದ ಹಮ್ಮಿಕೊಂಡಿದ್ದ ಕೊರೊನಾ ಲಸಿಕೆ ಅಭಿಯಾನದಲ್ಲಿ ಮಾತನಾಡಿದರು.

ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಹಾಗೂ ಸ್ಯಾನಿಟೈಸರ್ ಬಳಕೆ ನಿಯಮಿತವಾಗಿ ಮಾಡಿದರೆ ಕೊರೊನಾ ದೂರ ಮಾಡಬಹುದು. ಕೊರೊನಾ ವಿರುದ್ಧ ಹೋರಾಡಲು ಸಾರ್ವಜನಿಕರ ಪಾತ್ರ ಬಹಳ ದೊಡ್ಡದಿದೆ. ಸರ್ಕಾರ ಕೊರೊನಾ ತಡೆಗಟ್ಟಲು ಆಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು.

ಅಭಿಯಾನದಲ್ಲಿ ಮುನ್ನೂರಕ್ಕೂ ಹೆಚ್ಚು ಜನರು ಲಸಿಕೆ ಪಡೆದರು.


ಸಚಿವ ಬೈರತಿ ಬಸವರಾಜ ಸಾರ್ವಜನಿಕರಿಗೆ ಮಾಸ್ಕ್ ವಿತರಿಸಿದರು. ಮಾಜಿ ಭೂನ್ಯಾಯ ಮಂಡಳಿ ಸದಸ್ಯ ನರಸಿಂಹಮೂರ್ತಿ, ಬಿಬಿಎಂಪಿ ಕಿರಿಯ ಎಂಜಿನಿಯರ್ ಹಾಗೂ ಕೋವಿಡ್ ಅಧಿಕಾರಿ ರಮೇಶ್, ಮುಖಂಡ ಬಚ್ಚೇಗೌಡ, ಆನಂದ್, ಕೇಶವ್ ಇದ್ದರು.

ಕೋವಿಡ್ ಸಹಾಯವಾಣಿ

ಆಪ್ತಮಿತ್ರ	14410
ಬಿಬಿಎಂಪಿ	1912
ಪೂರ್ವ ವಲಯ	7411038024
ಪಶ್ಚಿಮ ವಲಯ	080-68248454
ದಕ್ಷಿಣ ವಲಯ	8431816718
ಯಲಹಂಕ ವಲಯ	9480685948, 9480685964
ಆರ್.ಆರ್.ನಗರ ವಲಯ	080-28601050
ಮಹದೇವಪುರ ವಲಯ	080-23010101, 080-23010102
ಬೊಮ್ಮನಹಳ್ಳಿ ವಲಯ	8884666670
ದಾಸರಹಳ್ಳಿ ವಲಯ	080-28394909, 080-28393688
ಆನೇಕಲ್ ತಾಲ್ಲೂಕು	8867474146, 8792140655

ವೈದ್ಯಕೀಯ ಆಮ್ಲಜನಕ ಸಹಾಯವಾಣಿ

ವಾರ್ ರೂಂ	9448478874, 080-22262846, 8951755722
ಮರ್ಸಿ ಮಿಷನ್	9739444957, 9986089195, 9686524247
ಯಶಸ್ವಿನಿ ವೈದ್ಯಕೀಯ ಸೇವೆ	9845083398

ಕೋವಿಡ್ ಪರೀಕ್ಷೆ ನಡೆಸುವ ಖಾಸಗಿ ಲ್ಯಾಬ್‌ಗಳು

ಆರ್‌ಜಿ ಲ್ಯಾಬ್ಸ್	08041119248
ಮೈಕ್ರೋಜೆನ್	9342871332
ಆರೆಂಜ್ ಹೆಲ್ತ್	9008111144
ಎಸ್‌ಆರ್‌ಎಲ್	1800222000
ಸೆಂಟ್ರಲ್ ಲ್ಯಾಬ್	9886397972
ಎನರ್ಜನ್ ಹೆಲ್ತ್	6361290329
ಆಸ್ಟರ್ ಸಿಎಂಐ, ಹೆಬ್ಬಾಳ	080-43420100
ಡಾ.ಲಾಲ್‌ಪತ್‌ಲ್ಯಾಬ್ಸ್ ಲಿಮಿಟೆಡ್	9945050937

ಪ್ಲಾಸ್ಮಾ ಸಹಾಯವಾಣಿ

ಬೆಂಗಳೂರು ಮೆಡಿಕಲ್ ಸರ್ವಿಸಸ್ ಟ್ರಸ್ಟ್	8526723404
ಎಚ್‌ಸಿಎಲ್ ಪ್ಲಾಸ್ಮಾ ಸಹಾಯವಾಣಿ	7447118949
ಶಿಪ್ರಾ ಗಾಂಧಿ	7995204721
ಬೆಂಗಳೂರು ಪ್ಲಾಸ್ಮಾ ಬ್ಯಾಂಕ್	080-47190606

ರೆಮ್‌ಡಿಸಿವಿರ್ ಸಹಾಯವಾಣಿ

ಶ್ರೀನಿವಾಸ ಮೆಡಿಸೇಲ್ಸ್ ಲಿಮಿಟೆಡ್	8041363333
ಮೆಡಿಹಾಕ್ಸ್ ಹೆಲ್ತ್‌ಕೇರ್ ಲಿಮಿಟೆಡ್	080-40007979, 080-23371854
ಭಾರತ್ ಮೆಡಿಕಲ್ ಆ್ಯಂಡ್ ಜನರಲ್ ಏಜೆನ್ಸಿ	9845340065/ 26719300
ಮೈತ್ರಿ ಫಾರ್ಮಾಸುಟಿಕಲ್ಸ್	080-22211833
ವರ್ಧಮಾನ್ ಹೆಲ್ತ್ ಸ್ಪೆಷಾಲಿಟಿಸ್	080-40836666
ಬೆಂಗಳೂರು ಸರ್ಜಿಕಲ್ಸ್	080-22282444, 080-222822245
ಕೆಂಪಯ್ಯ ಸುರೇಶ್	7019861430, 9035796385
ಶಕೀಬ್	9148950554, 9742944444
ದಿವಿಶಾ ಅರ್ಥರಿಟಿಸ್	9916770444
ವಾಮನ್ ಫಾರ್ಮಾ ಲಿಮಿಟೆಡ್	9342528866, 8971324288
ಆರೋಗ್ಯ ಇಲಾಖೆಯ ಕಾಲ್ ಸೆಂಟರ್ (ರೆಮ್‌ಡಿಸಿವಿರ್ ಮತ್ತು ಆಮ್ಲಜನಕದ ದಾಸ್ತಾನು)	8951755722

'ಕೋವಿಡ್ ಪೀಡಿತರ ಸಾವಿನ ವಿರುದ್ಧ ಪಿಐಎಲ್'– ಬಡಗಲಪುರ ನಾಗೇಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್ ಪೀಡಿತರ ಸಾವಿನ ವಿರುದ್ಧ ಪ್ರಧಾನಿ, ಮುಖ್ಯಮಂತ್ರಿ ಹಾಗೂ ಅಧಿಕಾರಿಗಳನ್ನು ಪಾರ್ಟಿ ಮಾಡಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುವುದು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಶುಕ್ರವಾರ ತಿಳಿಸಿದರು.

'ಕೋವಿಡ್‌ನಿಂದ ಸಾಯುವವರನ್ನು ನೋಡಿದರೆ ದೇಶದಲ್ಲಿ ಆಡಳಿತವಿದೆಯೇ? ಇದ್ದರೆ ಅದನ್ನು ಮನುಷ್ಯರು ನಡೆಸುತ್ತಿದ್ದಾರೆಯೇ ಎಂಬ ಅನುಮಾನ ಮೂಡಲಿದೆ. ಸರ್ಕಾರಗಳಿಗೆ ಸೋಂಕಿತರ ಉಳಿಸಲು ಆಗಲಿಲ್ಲ. ಕನಿಷ್ಠ ಅವರ ಅಂತ್ಯಕ್ರಿಯೆಯನ್ನಾದರೂ ಗೌರವಯುತವಾಗಿ ನಡೆಸಲು ಅವಕಾಶ ಕಲ್ಪಿಸಲಿ' ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಟಿಟಿಡಿ ವಾದದ ಹಿಂದೆ ವಾಣಿಜ್ಯ ಹಿತಾಸಕ್ತಿ...?

ತಜ್ಞರ, ಇತಿಹಾಸಕಾರರ ಆಕ್ರೋಶ: ಸದ್ಯದಲ್ಲಿಯೇ ಹೆಚ್ಚಿನ ದಾಖಲೆ ಬಿಡುಗಡೆ

• ಸಿದ್ದನಗೌಡ ಪಾಟೀಲ

ಕೊಪ್ಪಳ: ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸಮೀಪದ ಕಿಷ್ಕಿಂಧಾ ಪ್ರದೇಶದ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ ಎಂಬುದು ಇಲ್ಲಿಯವರೆಗೆ ದೇಶದ ಆಸ್ತಿಕರು ನಂಬಿಕೊಂಡು ಬಂದಿರುವ ಐತಿಹ್ಯ.

‘ಈಗ ಜನ್ಮಸ್ಥಳದ ಕುರಿತು ಟಿಟಿಡಿ ಎಬ್ಬಿಸಿರುವ ವಿವಾದದ ಹಿಂದೆ ಲಾಭಕೋರತನ ಮತ್ತು ವಾಣಿಜ್ಯ ಹಿತಾಸಕ್ತಿ ಅಡಗಿರಬಹುದು’ ಎಂದು ಇಲ್ಲಿನ ಇತಿಹಾಸಕಾರರು, ಸಂಶೋಧಕರು ಶಂಕೆ ವ್ಯಕ್ತಪಡಿಸುತ್ತಿದ್ದಾರೆ. ಇನ್ನೂ ಹೆಚ್ಚಿನ ದಾಖಲೆಗಳನ್ನು ಸಂಗ್ರಹಿಸಿ ಬೆಂಗಳೂರಿನಲ್ಲಿ ಅವುಗಳನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸಿದ್ದಾರೆ.

ಅಂಜನಾದ್ರಿ ಪರ್ವತಕ್ಕೆ ನಿತ್ಯ ಸಹಸ್ರಾರು ಭಕ್ತರು ಭೇಟಿ ನೀಡುತ್ತಾರೆ. ಹನುಮಮಾಲೆ ಧಾರಣೆ ಎಲ್ಲೆಡೆ ಜನಪ್ರಿಯವಾಗುತ್ತಿದೆ. ಹನುಮಮಾಲೆ ವಿಸರ್ಜನೆಗೆ ಪ್ರತಿವರ್ಷ 1 ಲಕ್ಷಕ್ಕೂ ಹೆಚ್ಚು ಜನ ಬರುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ರೂಪವೇ ಸೇರಿದಂತೆ ಈ ಪ್ರದೇಶದ ಅಭಿವೃದ್ಧಿಗೆ ಈಗಾಗಲೇ ₹200 ಕೋಟಿ ಮೊತ್ತದ ಯೋಜನೆ ರೂಪಿಸಿವೆ.

ಸರ್ಕಾರದ ಸುಪರ್ದಿಗೆ ಬಂದ ನಂತರ ಈ ಕ್ಷೇತ್ರದಿಂದ ಮಾಸಿಕ ₹15 ಲಕ್ಷಕ್ಕೂ ಹೆಚ್ಚು ಆದಾಯ ಬರುತ್ತಿದೆ.

ಪೌರಾಣಿಕ ಹಿನ್ನೆಲೆ: ವೇದಗಳ ಕಾಲದಿಂದಲೂ ಈ ಕ್ಷೇತ್ರ ಪ್ರಸಿದ್ಧಿ ಪಡೆದಿದೆ. ಸ್ಕಂದ ಪುರಾಣದಲ್ಲಿ ಕಿಷ್ಕಿಂಧಾದ ಉಲ್ಲೇಖ, ಶಿವನು ಪಂಪಾಸರೋವರದಲ್ಲಿ ತಪಸ್ಸು ಮಾಡಿದ್ದು, ನಂತರದ ತೇತ್ರಾಯುಗದಲ್ಲಿ ವಾಲ್ಮೀಕಿ ರಚಿಸಿದ ರಾಮಾಯಣ ಮಹಾಕಾವ್ಯ, ದ್ವಾಪರಯುಗದಲ್ಲಿ ರಚನೆಗೊಂಡ ಮಹಾಭಾರತದ ಅರ್ಜುನನಿಗೆ ಇಂದ್ರಧನಸ್ಸು ನೀಡಿದ ಇಂದ್ರಕೀಲ ಪರ್ವತ ಇಲ್ಲಿಯೇ ಇದೆ.

ಐತಿಹಾಸಿಕ ಹಿನ್ನೆಲೆ: 10ನೇ ಶತಮಾನದ ಹುಲಿಗಿ, ಪುರ ದಾನ ಶಾಸನ, ನಂತರ 9 ಯತಿಶ್ರೇಷ್ಠರು ಕ್ಷೇತ್ರದ ಮಹಿಮೆ ಅರಿತು ಇಲ್ಲಿಯೇ ಸಮಾಧಿಸ್ಥರಾಗಿರುವುದು. ಭಾರತದಾದ್ಯಂತ ಪ್ರಾಣದೇವರ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದು, ವಿಜಯನಗರ ಆಳರಸರ ಕಾಲದ ಸಾಹಿತ್ಯ, ಆಧುನಿಕ ಕಾಲದಲ್ಲಿ ಇತಿಹಾಸ ತಜ್ಞ ಅ.ಸುಂದರ ಸೇರಿದಂತೆ ಈ ಭಾಗದ ಇತಿಹಾಸಕಾರರ ಸಂಶೋಧನೆ. ಅಂತರರಾಷ್ಟ್ರೀಯ ಖ್ಯಾತಿಯ ಅಮೆರಿಕಾದ ಶಾಸನ ತಜ್ಞ ಫಿಲಿಫ್ ಲುಟೆನ್‌ಡಾರ್ಫ್ ಹನುಮಂತ ಜನಿಸಿದ್ದು ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಎಂದು ತಮ್ಮ 'ಹನುಮಾನ್ಸ್ ಟೇಲ್' ಎಂಬ ಕೃತಿಯಲ್ಲಿ ನಿರೂಪಿಸಿದ್ದಾರೆ.

‘ಇಷ್ಟೊಂದು ಐತಿಹಾಸಿಕ ದಾಖಲೆಗಳು ಇದ್ದರೂ, ಪುರಾಣ ಕಥೆಯ 'ಶ್ರೇಷ್ಠತೆ' ವ್ಯಸನದಿಂದ ತಪ್ಪಾಗಿ ತಿರುಪತಿಯ ಪಕ್ಕದ ಅಂಜನಾದ್ರಿಯೇ ಹನುಮಂತ ಜನ್ಮಸ್ಥಾನ ಎಂದು ಹೇಳಿ ಅನಗತ್ಯ ವಿವಾದ ಎಬ್ಬಿಸಿರುವುದು ದುರಂತ’ ಎಂದು ಹಿರಿಯ ಸಾಹಿತಿ ಎಚ್‌.ಎಸ್‌. ಪಾಟೀಲ ಹೇಳುತ್ತಾರೆ.

ಇಂಟರ್ ನ್ಯಾಷನಲ್ ಕಾಮರ್ಸ್ ಫೋರಂ ವತಿಯಿಂದ, ಸಂಸದ ಸಂಗಣ್ಣ ಕರಡಿ ಅವರ ಪುತ್ರ ಅಮರೇಶ ಕರಡಿ ಮತ್ತು ದೇವಸ್ಥಾನದ ಮುಖ್ಯ ಅರ್ಚಕ ವಿದ್ಯಾದಾಸ ಬಾಬಾ ನೇತೃತ್ವದಲ್ಲಿ ಈ ಎಲ್ಲ ದಾಖಲೆ ಬಿಡುಗಡೆ ಮಾಡಿ, ನಂತರ ರಾಜ್ಯಪಾಲರಿಗೆ ದಾಖಲೆ ಸಲ್ಲಿಸಲಿದ್ದಾರೆ ಎಂದು ತಿಳಿದು ಬಂದಿದೆ.



ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸಮೀಪದ ಕಿಷ್ಕಿಂಧಾ ಪ್ರದೇಶದಲ್ಲಿ ಬರುವ ಅಂಜನಾದ್ರಿ ಪರ್ವತ

ಮುಖ್ಯಾಂಶಗಳು

- ಮಹಾಕಾವ್ಯಗಳ ವಿಮರ್ಶೆಕನ್ನಡದಲ್ಲಿಯೇ ಹೆಚ್ಚು ಸಾಹಿತ್ಯ
- ದಾಸವರೇಣ್ಯರ ಕೀರ್ತನೆಗಳಲ್ಲಿ ಕಿಷ್ಕಿಂಧೆಯ ವರ್ಣನೆ
- ವಾಲ್ಮೀಕಿಯಿಂದ ಆಧುನಿಕ ಇತಿಹಾಸಕಾರರವರೆಗೆ ಅಂಜನಾದ್ರಿ ಉಲ್ಲೇಖ

ಪ್ರಜಾವಾಣಿ ವಿಶೇಷ

ಅಂಜನಾದ್ರಿ ಗುಡ್ಡದ ಕೆಳಗೆ ಇರುವ ಹನುನಮನಹಳ್ಳಿ, ಅಂಜನಹಳ್ಳಿ ಗ್ರಾಮಗಳೇ ಐತಿಹಾಸಿಕ ದಾಖಲೆ. ದಾನ ಶಾಸನಗಳಲ್ಲಿಯೂ ಅಂಜನಾದ್ರಿಯ ಉಲ್ಲೇಖವಿದೆ

ಪ್ರೊ.ಸಿದ್ಧಲಿಂಗಪ್ಪ ಕೊಟ್ನೆಕಲ್
ಪ್ರಾಧ್ಯಾಪಕ

ಟಿಟಿಡಿ ಸ್ಥಳ ಪುರಾಣದ ಆಧಾರದ ಮೇಲೆ ಅಂಜನಾದ್ರಿ ವಿವಾದವನ್ನು ಹುಟ್ಟುಹಾಕಿದೆ. ಈ ಕುರಿತು ತಜ್ಞರ ಕಮಿಟಿ ರಚನೆ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದ್ದೇವೆ

ಡಾ.ಶರಣಬಸಪ್ಪ ಕೋಲ್ಕಾರ್,
ಇತಿಹಾಸ ಪ್ರಾಧ್ಯಾಪಕ, ಗಂಗಾವತಿ

ಪರೀಕ್ಷೆ ಇದ್ದವರಿಗೆ ಹಾಸ್ಟೆಲ್‌ನಲ್ಲಿ ವ್ಯವಸ್ಥೆ

ಬೆಂಗಳೂರು: ಆಫ್‌ಲೈನ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಮುಂದುವರಿಸುವಂತೆ ಸರ್ಕಾರ ಸೂಚಿಸಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯಾದ್ಯಂತ ನಡೆಯುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಮೇ 4 ರವರೆಗೆ ಸ್ಥಗಿತಗೊಳಿಸಲು ನಿರ್ಧರಿಸಲಾಗಿತ್ತು.

ಮೆಟ್ರಿಕ್ ನಂತರದ ವಿದ್ಯಾರ್ಥಿಗಳನ್ನು ತೆರವುಗೊಳಿಸದೇ ಅವರ ಪರೀಕ್ಷೆ ಮುಗಿಯುವವರೆಗೆ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ತೀರ್ಮಾನಿಸಿದೆ.

71 ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರ ಸ್ಥಗಿತ

ಬೆಂಗಳೂರು: ಕೇಂದ್ರ ಪುರಸ್ಕೃತ ‘ಸಖಿ’ (ಒನ್ ಸ್ಟಾಪ್ ಸೆಂಟರ್) ಮತ್ತು ಅದೇ ರೀತಿಯ ಯೋಜನೆಗಳಿರುವ ತಾಲ್ಲೂಕುಗಳಲ್ಲಿ ‘ಸಾಂತ್ವನ’ ಕೇಂದ್ರಗಳನ್ನು ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಸಖಿ’ ಸೇರಿದಂತೆ ಅದೇ ರೀತಿಯ ಯೋಜನೆಗಳು ಇಲ್ಲದ 123 ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರಗಳನ್ನು ಮುಂದುವರಿಸಲಾಗುವುದು. ಒಟ್ಟು 71 ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಮಹಿಳೆಯರ ಮೇಲೆ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಅತ್ಯಾಚಾರ,ಲೈಂಗಿಕ ಕಿರುಕುಳ ಇನ್ನಿತರ ಮಾನಸಿಕ ಮತ್ತು ದೌಹಿಕ ದೌರ್ಜನ್ಯಕ್ಕೆ ಒಳಗಾದವರಿಗೆ ಸಾಂತ್ವನ ನೀಡಲು ಈ ಕೇಂದ್ರಗಳನ್ನು 2001 ರಲ್ಲಿ ಆರಂಭಿಸಲಾಗಿತ್ತು. 71 ತಾಲ್ಲೂಕು ಕೇಂದ್ರಗಳಲ್ಲಿ ಸಖಿ, ಸ್ವಾಧಾರ ಗೃಹ, ಸ್ವೀಕಾರ ಕೇಂದ್ರ, ರಾಜ್ಯ ಮಹಿಳಾ ನಿಲಯ, ಸಮಾಜ ಕಲ್ಯಾಣ ಸಲಹಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದ್ದರಿಂದ ಇಲ್ಲಿ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

123 ತಾಲ್ಲೂಕು ಕೇಂದ್ರಗಳಲ್ಲಿ ಸಾಂತ್ವನ ಕೇಂದ್ರಗಳನ್ನು ಮುಂದುವರಿಸಲು ₹8 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಿಳಿಸಿದೆ.

ನಗರ ಸ್ಥಳೀಯ ಸಂಸ್ಥೆ ಚುನಾವಣೆ ಮುಂದೂಡಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 10 ನಗರ ಸ್ಥಳೀಯ ಸಂಸ್ಥೆಗಳಿಗೆ ಏ.27ರಂದು ನಡೆಯಲಿರುವ ಚುನಾವಣೆಯನ್ನು ಕೋವಿಡ್ ಉಲ್ಬಣವಾಗಿರುವ ಕಾರಣ ಮುಂದೂಡುವಂತೆ ಕೋರಿ ಸಲ್ಲಿಕೆಯಾಗಿದ್ದ ಮಧ್ಯಂತರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಬಳ್ಳಾರಿ, ವಿಜಯಪುರ, ರಾಮನಗರ, ಚನ್ನಪಟ್ಟಣ, ಗುಡಿಬಂಡೆ, ಭದ್ರಾವತಿ, ತೀರ್ಥಹಳ್ಳಿ, ಬೇಲೂರು, ಮಡಿಕೇರಿ ಮತ್ತು ಬೀದರ್ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಿಗದಿಯಾಗಿದೆ. ಕೋವಿಡ್ ಪ್ರಕರಣ ಹೆಚ್ಚಾಗಿರುವ ಸಂದರ್ಭದಲ್ಲಿ ಚುನಾವಣೆ ನಡೆಸಿದರೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದರು.

ಅವಧಿ ಮುಗಿದಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ಪೃಥ್ವಿ ಚಿಂತಪಲ್ಲಿ ಅವರು ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

‘2 ಲಕ್ಷ ರೆಮ್‌ಡಿಸಿವಿರ್ ವೈಲ್ ಆಮದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶದಿಂದ ಒಂದೇ ಬಾರಿಗೆ 2 ಲಕ್ಷ ರೆಮ್‌ಡಿಸಿವಿರ್ ವೈಲ್ ಆಮದು ಮಾಡಿಕೊಳ್ಳಲು ನಿರ್ಧರಿಸಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಪ್ರಧಾನಿ ಜೊತೆ ಮಾತನಾಡಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಶುಕ್ರವಾರ ತಿಳಿಸಿದರು.

‘ರೆಮ್‌ಡಿಸಿವಿರ್ ವೈಲ್‌ಗಳು ನಿರಂತರವಾಗಿ ಪೂರೈಕೆಯಾಗುತ್ತಿವೆ. ಹೆಚ್ಚುವರಿಯಾಗಿ 25 ಸಾವಿರ ವೈಲ್ ಪಡೆಯಲು ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಅವಕಾಶ ಮಾಡಿಕೊಟ್ಟಿದ್ದಾರೆ. ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಜೊತೆಗೂ ಚರ್ಚಿಸಿದ್ದು, ಈ ತಿಂಗಳಲ್ಲೇ 60 ಸಾವಿರ ವೈಲ್ ಒದಗಿಸುವ ಭರವಸೆ ನೀಡಿದ್ದಾರೆ’ ಎಂದರು.



ಡಾ. ಸುಧಾಕರ್

‘ಬೆಂಗಳೂರಿನಲ್ಲಿ ವೆಂಟಿಲೇಟರ್ ಲಭ್ಯತೆಯನ್ನು 10 ಪಟ್ಟು ಹೆಚ್ಚಿಸಲು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಇದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. 15 ದಿನದಲ್ಲಿ 2 ಸಾವಿರ ಹಾಸಿಗೆ ಸಾಮರ್ಥ್ಯ, ಐಸಿಯು ಸೌಲಭ್ಯವುಳ್ಳ ‘ಮೇಕ್ ಶಿಫ್ಟ್’ ಆಸ್ಪತ್ರೆ ನಿರ್ಮಿಸಲು ಮುಂದಾಗಿದ್ದೇವೆ. ಈ ಪೈಕಿ 800 ಹಾಸಿಗೆಗಳಿಗೆ ವೆಂಟಿಲೇಟರ್ ಇರುತ್ತದೆ’ ಎಂದರು.

‘ವಿಕ್ಟೋರಿಯಾ ಆಸ್ಪತ್ರೆಯ ಆವರಣ ಹಾಗೂ ಇನ್ನೊಂದು ಹೊಸ ಕಟ್ಟಡದಲ್ಲಿ ಕ್ರಮವಾಗಿ 250 ಹಾಗೂ 200 ಹಾಸಿಗೆ ಸಾಮರ್ಥ್ಯದ ಐಸಿಯು ತಲೆ ಎತ್ತಲಿದೆ. 250 ಹಾಸಿಗೆಗಳ ಪೈಕಿ 100ಕ್ಕೆ ವೆಂಟಿಲೇಟರ್ ಅಳವಡಿಸಲಾಗುತ್ತದೆ. ಬೌರಿಂಗ್, ನಿಮ್ಹಾನ್ಸ್, ರಾಜೀವ್ ಗಾಂಧಿ ಹಾಗೂ ಇತರೆಡೆಗೂ ‘ಮೇಕ್ ಶಿಫ್ಟ್’ ಆಸ್ಪತ್ರೆ ನಿರ್ಮಿಸಲಾಗುವುದು’ ಎಂದರು.

ಕೋವಿಡ್– 19: ಪರಿಣಾಮದ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಗೂ ಸಂದೇಹ

ರೆಮ್‌ಡಿಸಿವಿರ್ ‘ರಾಮಬಾಣ’ ಅಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಪಟೈಟಿಸ್‌–ಸಿ ಗಾಗಿ ಅಭಿವೃದ್ಧಿಪಡಿಸಿದ ಬಳಿಕ ಎಬೋಲಾ ಮತ್ತು ಮಾರ್ಬರ್ಗ್‌ಗೂ ಬಳಕೆ ಮಾಡಿದ ರೆಮ್‌ಡಿಸಿವಿರ್ ಚುಚ್ಚುಮದ್ದಿಗೆ ಈಗ ದೇಶದಲ್ಲಿ ಭಾರಿ ಬೇಡಿಕೆ ಸೃಷ್ಟಿ ಆಗಿದೆ. ಆದರೆ, ಇದು ಕೋವಿಡ್‌–19ಗೆ ‘ರಾಮಬಾಣ’ವಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಪುನರುಚ್ಚರಿಸಿದೆ.

‘ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾದ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ರೆಮ್‌ಡಿಸಿವಿರ್ ಪ್ರಯೋಜನಕಾರಿ ಎಂಬುದಕ್ಕೆ ಈವರೆಗೆ ಪೂರಕ ಸಾಕ್ಷ್ಯ ಸಿಕ್ಕಿಲ್ಲ. ಆದರೆ, ಅತ್ಯಂತ ಸಂಕೀರ್ಣ ಸ್ಥಿತಿ ತಲುಪಿದ ರೋಗಿಗಳಿಗೆ ಮಾತ್ರ ಷರತ್ತುಬದ್ಧವಾಗಿ ಬಳಕೆ ಮಾಡಬಹುದು’ ಎಂದು ಅದು ಸ್ಪಷ್ಟಪಡಿಸಿದೆ.

ಈ ಕುರಿತು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ವಿಜ್ಞಾನಿ ಡಾ.ಸೌಮ್ಯ ಸ್ವಾಮಿನಾಥನ್ ಅವರು ಮಾತನಾಡಿದ್ದು, ‘ಕೋವಿಡ್ ರೋಗಿಗಳಲ್ಲಿ ರೆಮ್‌ಡಿಸಿವಿರ್ ಬಳಸಿ ಐದು ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲಾಗಿದೆ. ಇದರಿಂದ ಸಾವನ್ನು ತಡೆಯಲಿಕ್ಕಾಗಲಿ ಅಥವಾ ಕೃತಕ ಉಸಿರಾಟ ಸಾಧನದ ಅವಲಂಬನೆ ಕಡಿಮೆ ಮಾಡುವಲ್ಲಿ ನೆರವಾಗಿಲ್ಲ’ ಎಂದು ಹೇಳಿದ್ದಾರೆ.

ರೆಮ್‌ಡಿಸಿವಿರ್ ಬಳಕೆ ವಿಚಾರವಾಗಿ ಕಳೆದ ವರ್ಷವೂ ವಿಶ್ವ ಆರೋಗ್ಯ ಸಂಸ್ಥೆ ಮಾರ್ಗಸೂಚಿ ಹೊರಡಿಸಿತ್ತು. ಈಗಲೂ ಹೆಚ್ಚಿನ ಕ್ಲಿನಿಕಲ್ ಪ್ರಯೋಗಗಳು ನಡೆಯುತ್ತಿದ್ದು, ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ. ಈ ಚುಚ್ಚುಮದ್ದು ಬಳಕೆ ಮಾಡಿದ ರೋಗಿಗಳಲ್ಲಿ ಸುಧಾರಣೆಗಳ ಲಕ್ಷಣಗಳು ಕಂಡು ಬರುತ್ತಿಲ್ಲವಾದ ಕಾರಣ ಷರತ್ತುಬದ್ಧವಾಗಿ ಮಾತ್ರ ಬಳಸಬಹುದು. ಪ್ರಯೋಜನಕಾರಿ ಎಂದು ಕಂಡು ಬಂದಾಗ ಮಾತ್ರವೇ ಮಾರ್ಗಸೂಚಿ ಪರಿಷ್ಕರಿಸಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಕೋವಿಡ್ ತಾಂತ್ರಿಕ ಸಮಿತಿಯ ಮುಖ್ಯಸ್ಥೆ ಡಾ.ಮರಿಯಾ ವಾನ್ ಕೆರ್ಖೋವ್ ತಿಳಿಸಿದ್ದಾರೆ.

‘ರೆಮ್‌ಡಿಸಿವಿರ್ ಕೊರೊನಾ ವಿರುದ್ಧ ಆಶಾಕಿರಣ’ ಎಂದು ಬಿಂಬಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿರುವ ಡಾ.ಸೌಮ್ಯ ಸ್ವಾಮಿನಾಥನ್, ಸಣ್ಣ ಪುಟ್ಟ ಅಧ್ಯಯನಗಳಲ್ಲಿ ಅಲ್ಪಪ್ರಮಾಣದ ಪ್ರಯೋಜನ ಕಂಡು ಬಂದಿರಲೂಬಹುದು. ನ್ಯಾಷನಲ್ ಹೆಲ್ತ್ ಇನ್ಸ್ ಟಿಟ್ಯೂಟ್ ನಡೆಸಿರುವ ಪ್ರಯೋಗಗಳ ಪ್ರಕಾರ, ಮರಣ ಪ್ರಮಾಣದಲ್ಲಿ ಅಲ್ಪ ಪ್ರಮಾಣದ ಪ್ರಯೋಜನ ಕಂಡು ಬಂದಿದೆ. ಈ ಪ್ರಯೋಗಗಳು ಅತಿ ಸಣ್ಣ ಗುಂಪಿನಲ್ಲಿ ನಡೆಸಿದ್ದಾಗಿದೆ. ದೊಡ್ಡ ಗುಂಪುಗಳಲ್ಲಿ ನಡೆಸಿರುವ ಪ್ರಯೋಗದ ಫಲಿತಾಂಶ ಇನ್ನು ಕೆಲವೇ ವಾರಗಳಲ್ಲಿ ಬರಲಿದೆ’ ಎಂದು ಅವರು ಹೇಳಿದ್ದಾರೆ.

ರೆಮ್‌ಡಿಸಿವಿರ್ ಬಗ್ಗೆಯೂ ತಜ್ಞರ ಸಂದೇಹ?

ರೆಮ್‌ಡಿಸಿವಿರ್ ಒಂದು ವೈರಾಣು ನಿರೋಧಕ ಔಷಧ.

ಗಿಲೀಡ್ ಸೈನ್ಸಸ್, ಅಮೆರಿಕಾದ ‘ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್’(ಸಿಡಿಸಿ) ಮತ್ತು ಅಮೆರಿಕಾದ ‘ಆರ್ಮಿ ಮೆಡಿಕಲ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಆಫ್ ಇನ್ಫೆಕ್ಷಿಯಸ್ ಡಿಸೀಸ್’ ಜಂಟಿಯಾಗಿ ಆರ್‌ಎನ್‌ಎ ಆಧಾರಿತ ಸಾಂಕ್ರಾಮಿಕ ತಡೆಗಾಗಿ ಅಭಿವೃದ್ಧಿ ಪಡಿಸಿವೆ. ಹೆಪಟೈಟಿಸ್(ಸಿ), ಎಬೋಲಾ ಮತ್ತು ಮಾರ್ಬರ್ಗ್‌ಗೂ ವೈರಸ್‌ಗಳ ವಿರುದ್ಧವೂ ಬಳಸಲಾಗಿತ್ತು. ಆದರೆ, ಹೇಳಿಕೊಳ್ಳುವಷ್ಟು ಪ್ರಯೋಜನ ಆಗಲಿಲ್ಲ.

ರೆಮ್‌ಡಿಸಿವಿರ್ ಬಳಕೆಯ ಬಗ್ಗೆ ‘ಬ್ರಿಟಿಷ್ ಮೆಡಿಕಲ್ ಜರ್ನಲ್’ ನಲ್ಲಿ ತಜ್ಞರು ಸಂದೇಹ ವ್ಯಕ್ತಪಡಿಸಿದ್ದಾರೆ. ‘ಇದು ಅತ್ಯಂತ ದುಬಾರಿ ಬೆಲೆಯದ್ದಾಗಿದೆ. ಕೋವಿಡ್‌ನ ಇತರ ಬಗೆಯ ಚಿಕಿತ್ಸೆಗಳಿಗೆ ಬಳಸಬಹುದಾದ ಹಣದ ಬಹುಭಾಗ ರೆಮಿಡಿಸಿಆರ್‌ನತ್ತ ಹರಿದು ಹೋಗುತ್ತಿದೆ’ ಎಂದು ಹೇಳಿದ್ದಾರೆ.

ಕೊರೊನಾ ಸಾಂತ್ವನ

ಯುವಕರೇ ನಿರ್ಲಕ್ಷ್ಯ ಬಿಡಿ

‘ನಾವು ಮನೆಯಿಂದ ಹೊರಗೆ ಕಾಲಿಟ್ಟಿಲ್ಲ. ಹೀಗಿದ್ದರೂ ಕೊರೊನಾ ಸೋಂಕು ತಗುಲಿದೆಯಲ್ಲ’..

ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವ ಹಿರಿಯ ವಯಸ್ಕರ ಪೈಕಿ ಬಹುಪಾಲು ಮಂದಿ ಕೇಳುವ ಪ್ರಶ್ನೆ ಇದು.

‘ಇದಕ್ಕೆ ಮೂಲ ಕಾರಣ ಮನೆಯಲ್ಲಿರುವ ಯುವಕರು. ಇಂದಿನ ಬಹುತೇಕ ಯುವಕರು ಹಿರಿಯರ ಮಾತಿಗೆ ಕಿವಿಗೊಡುವುದಿಲ್ಲ. ಮನೆಯಿಂದ ಹೊರಹೋಗುವಾಗ ಮುಖಗವಸು ಧರಿಸುವುದಿಲ್ಲ. ಆಗಾಗ ಕೈಗಳನ್ನು ಸ್ವಚ್ಛಗೊಳಿಸುವುದಿಲ್ಲ. ಕೊರೊನಾ ಎಲ್ಲಿದೆ? ಅದು ನಮ್ಮ ಹತ್ತಿರಕ್ಕೂ ಸುಳಿಯುವುದಿಲ್ಲ ಎಂಬ ಮನೋಧೋರಣೆ ಅವರಲ್ಲಿ ಗಾಢವಾಗಿ ಬೇರೂರಿದೆ. ಅವರಿಂದಾಗಿ ಮನೆಯ ಇತರ ಸದಸ್ಯರಿಗೆ ಸೋಂಕು ಹರಡುತ್ತಿದೆ. ಜೊತೆಗೆ ಅವರೇ ಅಪಾಯಕ್ಕೆ ಗುರಿಯಾಗುತ್ತಿದ್ದಾರೆ. 35 ವರ್ಷದೊಳಗಿನವರೂ ಕೋವಿಡ್‌ನಿಂದ ಮೃತಪಟ್ಟಿರುವುದು ಇದಕ್ಕೆ ನಿದರ್ಶನ. ಇದರ ಅರಿವಿದ್ದರೂ ಕೆಲವರು ಈಗಲೂ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಈ ನಿರ್ಲಕ್ಷ ಸರಿಯಲ್ಲ. ಈ ಮನಸ್ಥಿತಿ ಬದಲಾಗಲೇಬೇಕು’.

‘ವಯಸ್ಸಾದವರು ಈಗಾಗಲೇ ಹಲವು ಔಷಧಗಳನ್ನು ಸೇವಿಸುತ್ತಿರುತ್ತಾರೆ. ಅವರಿಗೆ ಸೋಂಕು ತಗುಲಿದಾಗ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತದೆ. ಹೀಗಾಗಿ ಅವರಿಗೆ ಅಪಾಯ ಹೆಚ್ಚು. 45 ವರ್ಷ ಮೇಲ್ಪಟ್ಟವರು ಸ್ವಯಂ ಪ್ರೇರಿತರಾಗಿ ಆರೋಗ್ಯ ಕೇಂದ್ರಗಳಿಗೆ ಬಂದು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ. ಈಗ 18 ವರ್ಷ ಮೇಲ್ಪಟ್ಟವರೂ ಲಸಿಕೆ ಪಡೆದುಕೊಳ್ಳಲು ಅರ್ಹರು ಎಂದು ಕೇಂದ್ರ ಸರ್ಕಾರ ಹೇಳಿದೆ. ಅವರು ಕೂಡ ಯಾವ ಹಿಂಜರಿಕೆಯೂ ಇಲ್ಲದೆ ಲಸಿಕೆ ಹಾಕಿಸಿಕೊಳ್ಳಬೇಕು. ಮದುವೆ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಆದಷ್ಟು ಕಡಿಮೆ ಮಾಡಬೇಕು’.

‘ಒಟ್ಟಿಗೆ ಕೂತು ಊಟ ಮಾಡುವುದರಿಂದ, ಗಟ್ಟಿಯಾಗಿ ಮಾತನಾಡುವುದರಿಂದ, ಕೆಮ್ಮು ಹಾಗೂ ಸೀನುವುದರಿಂದ ಸೋಂಕು ಹರಡುವ ಸಾಧ್ಯತೆ ಹೆಚ್ಚು. ಹೀಗಾಗಿ ಮೆಲುದನಿಯಲ್ಲಿ ಮಾತನಾಡುವುದನ್ನು ರೂಢಿಸಿಕೊಳ್ಳಬೇಕು’.

‘ಪ್ರತಿದಿನ ಮಾಂಸಾಹಾರ ಸೇವಿಸುವುದು ಒಳ್ಳೆಯದಲ್ಲ. ತುಂಬಾ ಖಾರವಾದ ಹಾಗೂ ಮಸಾಲೆಯುಕ್ತ ಆಹಾರ ಪದಾರ್ಥಗಳ ಸೇವನೆಗೂ ಕಡಿವಾಣ ಹಾಕಬೇಕು. ಮದ್ಯಪಾನದಿಂದಲೂ ದೂರ ಇರಬೇಕು. ಎಣ್ಣೆಯಿಂದ ಕರಿದ ಪದಾರ್ಥಗಳನ್ನೂ ತ್ಯಜಿಸಬೇಕು. ಆದಷ್ಟು ಹೆಚ್ಚು ನೀರು ಸೇವಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸೊಪ್ಪು, ತರಕಾರಿ, ಹಣ್ಣು ಹೀಗೆ ಸಾತ್ವಿಕ ಆಹಾರ ಸೇವಿಸುವುದಕ್ಕೆ ಆದ್ಯತೆ ಕೊಡಬೇಕು’.

ಡಾ.ಲಕ್ಷ್ಮಿಪತಿ, ನೋಡಲ್ ಅಧಿಕಾರಿ, ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು.

ಸರ್ಕಾರದಿಂದ ಜನರ ಕೊಲೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ತಜ್ಞರ ವರದಿಯನ್ನು ರಾಜ್ಯದ ಬಿಜೆಪಿ ಸರ್ಕಾರ ನಿರ್ಲಕ್ಷಿಸಿದ ಪರಿಣಾಮವಾಗಿ ಜನರು ಕೋವಿಡ್‌ನಿಂದ ಬೀದಿಯ ಮೇಲೆ ಸಾಯುತ್ತಿದ್ದಾರೆ. ಈ ಸಾವುಗಳು ಕೋವಿಡ್‌ನಿಂದ ಆಗುತ್ತಿವೆ ಎನ್ನುವುದಕ್ಕಿಂತ ಬಿಜೆಪಿ ಸರ್ಕಾರದ ಅದಕ್ಷತೆ ಮತ್ತು ಉಡಾಫೆಯಿಂದ ಆದ ಕೊಲೆಗಳು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕೋವಿಡ್ ಎರಡನೇ ಅಲೆ ಸ್ಫೋಟಗೊಂಡಿರುವ ಸಂದರ್ಭದಲ್ಲಿ ಸೋಂಕಿತರ ಚಿಕಿತ್ಸೆಗೆ ನೆರವಾಗುವಂತೆ ಕಾಂಗ್ರೆಸ್‌ನ ಎಲ್ಲ ಶಾಸಕರಿಗೂ ಶುಕ್ರವಾರ ಬರೆದಿರುವ ಪತ್ರದಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಅವರು, ‘ಎರಡನೇ ಅಲೆ ಸ್ಫೋಟಗೊಳ್ಳಲಿದೆ ಎಂದು ತಜ್ಞರು ಸಾಕಷ್ಟು ಮುಂಚೆ ಎಚ್ಚರಿಕೆ ನೀಡಿದ್ದರು. ಅಗತ್ಯ ಪ್ರಮಾಣದ ಪ್ರಯೋಗಾಲಯ, ಆಸ್ಪತ್ರೆಗಳನ್ನು ಸಜ್ಜುಗೊಳಿಸಿ ಹಾಸಿಗೆ, ಆಮ್ಲಜನಕ, ಐಸಿಯು, ವೆಂಟಿಲೇಟರ್, ಔಷಧಿಯ ವ್ಯವಸ್ಥೆ ಮಾಡಿದ್ದರೆ ಈ ಪ್ರಮಾಣದ ಸಾವುಗಳು ಸಂಭವಿಸುತ್ತಿರಲಿಲ್ಲ’ ಎಂದು ಹೇಳಿದ್ದಾರೆ.

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಮಾಡಿದ್ದ ಅರಾಜಕ ಮತ್ತು ತುಘಲಕ್ ಶಾಹಿ ಆಡಳಿತವನ್ನೇ ಬಿಜೆಪಿ ಸರ್ಕಾರ ಈಗಲೂ ಮಾಡುತ್ತಿದೆ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಕೋವಿಡ್‌ನಿಂದ ಮೃತಪಟ್ಟವರ ಗೌರವಯುತ ಅಂತ್ಯಸಂಸ್ಕಾರ ನಡೆಸಲೂ ಆಗದಂತಹ ಅರಾಜಕ ಪರಿಸ್ಥಿತಿ ನಿರ್ಮಿಸಿವೆ. ಯಾವುದೇ ಮುನ್ಸೂಚನೆ ನೀಡದೆ ಬಾಗಿಲು ಮುಚ್ಚಿಸುವುದು, ಸಚಿವರು, ಅಧಿಕಾರಿಗಳು ಬಾಯಿಗೆ ಬಂದಂತೆ ಮಾತನಾಡಿ ಗೊಂದಲ ಹುಟ್ಟಿಸುವ ಕೆಲಸವನ್ನು ಈಗಲೂ ಮಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

‘ಕೋವಿಡ್ ಸಂಕಷ್ಟದ ಕಾಲದಲ್ಲಿ ಜನರ ಕೈಯಲ್ಲಿ ಹಣ ಇಲ್ಲದಿರುವಾಗ ಸರ್ಕಾರ ಪಡಿತರ ಧಾನ್ಯದ ಪ್ರಮಾಣವನ್ನೂ ಕಡಿತ ಮಾಡಿದೆ. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ಅನ್ನ, ಆಹಾರ, ಔಷಧಿ ನೀಡಿ ನೆರವಾದಂತೆ ಈ ಬಾರಿಯೂ ಮಾಡಬೇಕು’ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಶಾಸಕರಿಗೆ ಮನವಿ ಮಾಡಿದ್ದಾರೆ.

ವರ್ತಕರಿಗೆ ಪರಿಹಾರ ಕೊಡಿ: ಡಿ.ಕೆ.ಶಿವಕುಮಾರ್

ಪೊಲೀಸರನ್ನು ಬಳಸಿಕೊಂಡು ಅಂಗಡಿಗಳನ್ನು ಮುಚ್ಚಿಸಿರುವ ರಾಜ್ಯ ಸರ್ಕಾರ, ವರ್ತಕರಿಗೆ ಪರಿಹಾರ ನೀಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತೆರಿಗೆ ಪಾವತಿಸಿ ವಹಿವಾಟು ನಡೆಸುತ್ತಿದ್ದ ವರ್ತಕರ ಮೇಲೆ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ಸಂಕಷ್ಟದ ಕಾಲದಲ್ಲೂ ಜನರಿಗೆ ಉದ್ಯೋಗ ನೀಡಿರುವವರನ್ನು ಅವಮಾನಿಸುತ್ತಿದೆ’ ಎಂದು ದೂರಿದರು.

ಕೋವಿಡ್ ನಿಯಂತ್ರಣಕ್ಕೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಲಿ. ಆದರೆ, ಅದರಿಂದ ತೊಂದರೆಗೊಳಗಾದ ಜನರಿಗೆ ಪರಿಹಾರ ನೀಡಬೇಕು. ವರ್ತಕರು, ನೌಕರರು, ಅಸಂಘಟಿತ ಕಾರ್ಮಿಕರು ಎಲ್ಲರಿಗೂ ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಎರಡನೇ ಅಲೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಜನರನ್ನು ಆರ್ಥಿಕ ಸಮಸ್ಯೆಯಿಂದ ಪಾರು ಮಾಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಬ್ಯಾಂಕ್‌ಗಳ ಮುಖ್ಯಸ್ಥರ ಜತೆ ಸಭೆ ನಡೆಸಿ, ಸಾಲದ ಕಂತುಗಳ ಪಾವತಿಗೆ ಕಾಲಾವಕಾಶ ಮತ್ತು ಬಡ್ಡಿ ವಿನಾಯಿತಿ ಕೊಡಿಸಬೇಕು ಎಂದರು.

ರೆಮ್‌ಡೆಸಿವಿರ್ ಔಷಧಿ, ಆಮ್ಲಜನಕ ಪೂರೈಕೆ ತ್ವರಿತ ಕ್ರಮ ಕೈಗೊಳ್ಳಬೇಕು. ಕೋವಿಡ್‌ನಿಂದ ಮೃತಪಟ್ಟವರ ಶವ ಸಂಸ್ಕಾರಕ್ಕೆ ತುರ್ತಾಗಿ ವ್ಯವಸ್ಥೆ ಮಾಡಬೇಕು. ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ಸಭೆ ನಡೆಸಿದ ಸಚಿವ ಬಿ. ಶ್ರೀರಾಮುಲು ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರ ಅಘೋಷಿತ ಲಾಕ್‌ಡೌನ್ ಜಾರಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಪ್ರಮುಖ ಮುಖಂಡರು, ಶಾಸಕರ ಜತೆ ಸಭೆ ನಡೆಸಿದ ಶಿವಕುಮಾರ್, ಚರ್ಚೆ ನಡೆಸಿದರು.

ಸಿದ್ದರಾಮಯ್ಯ ಅಪ್ರಬುದ್ಧ ವರ್ತನೆ: ಬಿಜೆಪಿ ಕಿಡಿ

‘ಇಡೀ ದೇಶವೇ ಕೋವಿಡ್ ಸಂಕಷ್ಟದಲ್ಲಿರುವಾಗ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೇಜವಾಬ್ದಾರಿಯಿಂದ ಜನರ ಮನೋಸ್ಥೈರ್ಯ ಕುಂದಿಸುವ ಕೆಲಸ ಮಾಡುತ್ತಿದ್ದಾರೆ. ಇದು ಅವರ ಅಪ್ರಬುದ್ಧ ವರ್ತನೆ’ ಎಂದು ಬಿಜೆಪಿ ಟೀಕಿಸಿದೆ.

‘ತಮ್ಮ ಅನುಭವವನ್ನು ಸಂಕಷ್ಟ ನಿರ್ವಹಣೆಗೆ ರಚನಾತ್ಮಕ ಸಲಹೆಗಳನ್ನು ನೀಡುವುದು ಬಿಟ್ಟು, ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದು ಅತ್ಯಂತ ಕೀಳು ಮಟ್ಟದ ವರ್ತನೆ ಮತ್ತು ನಾಡಿನ ಜನರಿಗೆ ಬಗೆಯುತ್ತಿರುವ ದ್ರೋಹ’ ಎಂದು ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಕಿಡಿಕಾರಿದ್ದಾರೆ. ‘ನೀವು ಶಾಸಕರಿಗೆ ಬರೆದಿರುವ ಪತ್ರ ಓದಿದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲ ನಿರ್ಣಯಗಳನ್ನು ಟೀಕಿಸುವುದನ್ನೇ ಜವಾಬ್ದಾರಿ ಅಂದುಕೊಂಡಂತಿದೆ. ಪತ್ರದ ಹಿಂದೆ ಪಕ್ಷದಲ್ಲಿ ಮೂಲೆ ಗುಂಪಾಗುತ್ತಿರುವ ಹತಾಶ ಸ್ಥಿತಿ ಕಾಣುತ್ತಿದೆ’ ಎಂದು ವ್ಯಂಗ್ಯವಾಡಿದ್ದಾರೆ.



ಅಂತರ ಎಲ್ಲಿದೆ?

ಬೆಂಗಳೂರು ಹೊರವಲಯದ ಹೇರೋಹಳ್ಳಿ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಕೇಂದ್ರದಲ್ಲಿ ಶುಕ್ರವಾರ ಪರಸ್ಪರ ಅಂತರ ಕಾಯ್ದುಕೊಳ್ಳದೇ ಜನರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಸೇರಿದ್ದರು

ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಸಂಸ್ಕಾರಕ್ಕೂ ವ್ಯವಸ್ಥೆ ಮಾಡದ ನಿರ್ದಯಿ ಸರ್ಕಾರ: ಎಚ್‌ಡಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆ ಸಿಗದೇ ಅಮಾನವೀಯವಾಗಿ ಸಾವನ್ನಪ್ಪಿದ ಕೊರೊನಾ ಸೋಂಕಿತರ ಶವಗಳ ಅಂತ್ಯಸಂಸ್ಕಾರಕ್ಕೆ ಕನಿಷ್ಠ ವ್ಯವಸ್ಥೆ ಮಾಡದೇ ಕೈ ಚೆಲ್ಲಿ ಕುಳಿತಿರುವ ರಾಜ್ಯ ಸರ್ಕಾರದ ವರ್ತನೆ ಅತ್ಯಂತ ನಿರ್ದಯಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಕೊರೊನಾದಿಂದ ಜೀವ ತೆತ್ತ ವ್ಯಕ್ತಿಗಳ ಶವಸಂಸ್ಕಾರಕ್ಕೆ ಬೆಂಗಳೂರಿನ ಅಷ್ಟ ದಿಕ್ಕುಗಳಲ್ಲಿರುವ ಡೀಮ್ಡ್ ಅರಣ್ಯ ಪ್ರದೇಶದಲ್ಲಿ ದಿನವೊಂದಕ್ಕೆ ಸುಮಾರು 25 ಶವಗಳನ್ನು ಅಂತ್ಯಸಂಸ್ಕಾರ ಮಾಡಲು ಸರ್ಕಾರ ತಕ್ಷಣವೇ ಸಮರೋಪಾದಿಯಲ್ಲಿ ಕ್ರಮಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

‘ಕೋವಿಡ್ ಪೀಡಿತರಿಗೆ ಹಾಸಿಗೆ, ಆಮ್ಲಜನಕ, ವೆಂಟಿಲೇಟ್ ಹಾಗೂ ಲಭ್ಯವಿರುವ ಉಪಶಮನದ ಔಷಧಿಗಳನ್ನು ಸರ್ಕಾರ ಒದಗಿಸಲಿಲ್ಲ. ಕನಿಷ್ಠ ಅವರ ಅಂತ್ಯಸಂಸ್ಕಾರವನ್ನಾದರೂ ಗೌರವಯುತವಾಗಿ ನಡೆಸಲು ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ’ ಎಂದು ಅವರು ಹೇಳಿದ್ದಾರೆ.

‘ಸೋಂಕಿತರಿಗೆ ಚಿಕಿತ್ಸೆ ವ್ಯವಸ್ಥೆ ಕಲ್ಪಿಸುವಲ್ಲಿ ಮುಗ್ಗರಿಸಿ ಬಿದ್ದ ಸರ್ಕಾರರ ಅಂತ್ಯಸಂಸ್ಕಾರಕ್ಕೆ ಜಾಗದ ವ್ಯವಸ್ಥೆ ಮಾಡಲು ಇನ್ನೂ ತಡ ಮಾಡಬಾರದು. ಸರ್ಕಾರದ ಉದಾಸೀನ ಧೋರಣೆ ಮುಂದುವರಿದರೆ ಜನರ ಹಿಡಿಶಾಪ ಸರ್ಕಾರದ ಮೇಲೆ ಪರಿಣಾಮ ಬೀರುವುದರಲ್ಲಿ ಸಂಶಯವೇ ಬೇಡ. ಕೋವಿಡ್‌ನಿಂದ ಸಾವುಕಂಡವರ ಬಂಧು ಬಳಗದವರು ಪಡುತ್ತಿರುವ ಬವಣೆ ಕಂಡರೆ ಹೃದಯ ಕಿವುಚಿದಂತಾಗುತ್ತದೆ’ ಎಂದು ಅವರು ಹೇಳಿದ್ದಾರೆ.



ವಾರಾಂತ್ಯ ಕರ್ಫ್ಯೂ: ಯಾವುದಕ್ಕೆಲ್ಲ ವಿನಾಯ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆಯವರೆಗಿನ ವಾರಾಂತ್ಯದ ಕರ್ಫ್ಯೂವಿನಿಂದ ವಿನಾಯ್ತಿ ನೀಡಿರುವ ತುರ್ತು ಮತ್ತು ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿ ಉದ್ದಿಮೆಗಳು ಹಾಗೂ ಸೇವೆಗಳ ಪಟ್ಟಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಶುಕ್ರವಾರ ಬಿಡುಗಡೆ ಮಾಡಿದೆ.

ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಿ ಏಪ್ರಿಲ್ 20ರಂದು ಹೊರಡಿಸಿದ್ದ ಆದೇಶದಲ್ಲಿ, ‘ತುರ್ತು ಮತ್ತು ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿರುವ ಉದ್ದಿಮೆಗಳು, ಸೇವೆಗಳಿಗೆ ವಿನಾಯ್ತಿ ನೀಡಲಾಗಿದೆ’ ಎಂದು ಹೇಳಲಾಗಿತ್ತು. ಇದರಿಂದ ಗೊಂದಲ ಉಂಟಾಗಿತ್ತು. ಶುಕ್ರವಾರ ಸುತ್ತೋಲೆ ಹೊರಡಿಸಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ರಾಜ್‌ಕುಮಾರ್ ಖತ್ರಿ, ವಿನಾಯ್ತಿಯ ವ್ಯಾಪ್ತಿಯಲ್ಲಿರುವ ಉದ್ದಿಮೆ ಹಾಗೂ ಸೇವೆಗಳ ಪಟ್ಟಿ ಪ್ರಕಟಿಸಿದ್ದಾರೆ.

ಯಾವುದಕ್ಕೆಲ್ಲಾ ವಿನಾಯ್ತಿ: ಔಷಧಿಗಳು, ಸ್ಯಾನಿಟೇಷನ್ ವಸ್ತುಗಳು, ಆಮ್ಲಜನಕ, ವೈದ್ಯಕೀಯ ಉಪಕರಣಗಳು, ವೈದ್ಯಕೀಯ ಬಳಕೆಯ ಬಟ್ಟೆಗಳು ಮತ್ತು ಈ ಎಲ್ಲವುಗಳ ಉತ್ಪಾದನೆಗೆ ಪೂರಕವಾದ ಕಚ್ಚಾ ವಸ್ತುಗಳ ಉತ್ಪಾದನಾ ಘಟಕಗಳು ಕರ್ಫ್ಯೂ ಅವಧಿಯಲ್ಲೂ ಕಾರ್ಯನಿರ್ವಹಿಸಬಹುದು.

ಇತರ ವಿನಾಯ್ತಿ: ಅಕ್ಕಿ ಗಿರಣಿ, ಎಣ್ಣೆ ಮಿಲ್, ಬೇಳೆಕಾಳು ಸಂಸ್ಕರಣಾ ಮಿಲ್‌ಗಳು, ಡೇರಿ ಉತ್ಪನ್ನಗಳು, ಆರ್.ಒ ಮತ್ತು ಡಿಸ್ಟಿಲ್ಡ್ ನೀರು ಘಟಕ, ಪ್ಯಾಕೇಜ್ಡ್ ನೀರು ಘಟಕ, ಹಿಟ್ಟಿನ ಗಿರಣಿಗಳು, ಆಹಾರ ಸಂಸ್ಕರಣಾ ಘಟಕಗಳು, ಬೇಕರಿ ಉತ್ಪನ್ನಗಳು, ಮೀನು, ಕೋಳಿ ಮತ್ತು ಪಶು ಆಹಾರ ತಯಾರಿಕೆ, ಮಂಜುಗೆಡ್ಡೆ ತಯಾರಿಕಾ ಘಟಕ, ಮೆಣಸಿನ ಪುಡಿ, ಅರಿಶಿನ ಪುಡಿ, ಉಪ್ಪು ತಯಾರಿಕೆ ಮತ್ತಿತರ ಕೃಷಿ ಸಂಬಂಧಿ ಉತ್ಪಾದನಾ ಘಟಕಗಳು.

ರಫ್ತು ಸಂಬಂಧಿ ವಸ್ತುಗಳ ಉತ್ಪಾದನಾ ಘಟಕಗಳು ಮತ್ತು ಅವುಗಳಿಗೆ ಪೂರಕ ಕಚ್ಚಾವಸ್ತು ಉತ್ಪಾದಿಸುವ ಘಟಕಗಳು, ಏರೋಸ್ಪೇಸ್ ಮತ್ತು ರಕ್ಷಣಾ ಇಲಾಖೆಗೆ ಉಪಕರಣ, ಬಿಡಿ ಭಾಗಗಳ ತಯಾರಿಸುವ ಘಟಕಗಳು, ರಕ್ಷಣೆ, ಕೃಷಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಬಳಕೆಯಾಗುವ ವಾಹನಗಳ ತಯಾರಿಕೆ, ಪ್ಯಾಕೇಜಿಂಗ್ ಘಟಕಗಳು, ಕೈಗಾರಿಕಾ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು, ಆಹಾರ ವಸ್ತುಗಳ ತಯಾರಿಕೆ, ಇ–ಕಾಮರ್ಸ್ ಉದ್ದಿಮೆಗಳು, ಕೃಷಿ ಮತ್ತು ಆಹಾರ ವಲಯದ ಉಗ್ರಾಣಗಳು.

ಪೆಟ್ರೋಲಿಯಂ ರಿಫೈನರಿ, ಬೃಹತ್ ಉಕ್ಕು ತಯಾರಿಕಾ ಘಟಕಗಳು, ಬೃಹತ್ ಸಿಮೆಂಟ್ ಕೈಗಾರಿಕೆಗಳು, ಬಣ್ಣ ತಯಾರಿಕೆ, ಸಕ್ಕರೆ ಕಾರ್ಖಾನೆಗಳು, ರಸಗೊಬ್ಬರ ಕಾರ್ಖಾನೆಗಳು, ಗಾಜು ಉತ್ಪಾದನೆ, ಬೃಹತ್ ಫೌಂಡ್ರಿಗಳು, ಟಯರ್ ಉತ್ಪಾದನೆ, ಬೃಹತ್ ಪ್ರಮಾಣದ ವಾಹನ ತಯಾರಿಕಾ ಘಟಕಗಳು.

ವಿವೇಚಿಸಿ ಅನುಮತಿಗೆ ಅವಕಾಶ: ಟೆಲಿಕಾಂ ಮತ್ತು ಸಂಬಂಧಿತ ಸೇವೆಗಳು, ಐಟಿ ಕಂಪನಿಗಳು, ವೈದ್ಯಕೀಯ, ಹಣಕಾಸು, ಸಾರಿಗೆ ಮತ್ತಿತರ ಉದ್ದಿಮೆಗಳಿಗೆ ಸಂಬಂಧಿಸಿದ ಬ್ಯಾಕ್ ಎಂಡ್ ಐಟಿ ಸೇವೆಗಳು, ಸರಕುಗಳ ಲೋಡಿಂಗ್, ಇಳಿಸುವುದು ಮತ್ತಿತರ ಚಟುವಟಿಕೆಗಳಿಗೆ ಅಗತ್ಯ ಕಂಡುಬಂದಲ್ಲಿ ಅನುಮತಿ ನೀಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಾಲ್ವರು ಶಾಸಕರು, ಮಾಜಿ ಸಚಿವರೊಬ್ಬರಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರಾದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ ಕ್ಷೇತ್ರ) ಪಿ.ರಾಜೀವ (ಕುಡಚಿ, ಬೆಳಗಾವಿ ಜಿಲ್ಲೆ) ಮತ್ತು ಬಸವರಾಜ ಮತ್ತಿಮೂಡ (ಕಲಬುರ್ಗಿ ಗ್ರಾಮೀಣ), ಆರ್.ವಿ.ದೇಶಪಾಂಡೆ (ಹಳಿಯಾಳ) ಅವರಿಗೆ ಕೋವಿಡ್ ಸೋಂಕು ತಗುಲಿರುವುದು ಶುಕ್ರವಾರ ದೃಢಪಟ್ಟಿದೆ.

ಅಲ್ಲದೆ, ಮಾಜಿ ಸಚಿವ ಎಚ್. ವೈ.ಮೇಟಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ರೆಮ್‌ಡಿಸಿವಿರ್ ಅಕ್ರಮ ಮಾರಾಟ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕೊರೊನಾ ಸೋಂಕಿತರಿಗೆ ನೀಡುವ ‘ರೆಮ್‌ಡಿಸಿವಿರ್’ ಚುಚ್ಚುಮದ್ದನ್ನು ಅಕ್ರಮವಾಗಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಮೂವರನ್ನು ಇಲ್ಲಿಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಇವರಿಂದ 14 ರೆಮ್‌ಡಿಸಿವಿರ್ ಚುಚ್ಚುಮದ್ದು ಹಾಗೂ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್‌.ಸತೀಶಕುಮಾರ ತಿಳಿಸಿದ್ದಾರೆ.

‘ಆರೋಪಿಗಳು ಬೆಳಗಾವಿ ಹಾಗೂ ಬೆಂಗಳೂರಿನಲ್ಲಿ ಇರುವ ತಮ್ಮ ಪರಿಚಯಸ್ಥರಿಂದ ಈ ಚುಚ್ಚುಮದ್ದು ಖರೀದಿಸಿ, ಖಾಸಗಿ ಬಸ್‌ಗಳ ಮೂಲಕ ಕಲಬುರ್ಗಿಗೆ ತರಿಸಿಕೊಳ್ಳುತ್ತಿದ್ದರು. ಒಂದೊಂದು ಚುಚ್ಚುಮದ್ದನ್ನು ₹ 25 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಕಲೆಹಾಕಿದ ನಗರದ ಎ–ಉಪವಿಭಾಗದ ರೌಡಿ ನಿಗ್ರಹದಳದ ಪೊಲೀಸರು, ವ್ಯಾಪಾರ ಕುದುರಿಸುತ್ತಿರುವಾಗಲೇ ದಾಳಿ ಮಾಡಿ ಬಂಧಿಸಿದ್ದಾರೆ’ ಎಂದು ಅವರು ಹೇಳಿದ್ದಾರೆ.

ನಗರದ ನಾಗಲೇಕರ್ ಡಯಗ್ನೊಸ್ಟಿಕ್ ಹಾಗೂ ಅಥರ್ವ ಚೆಸ್ಟ್ ಕ್ಲಿನಿಕ್‌ನಲ್ಲಿ ಎಕ್ಸ್‌ರೇ ಟೆಕ್ನಿಷಿಯನ್ ಆಗಿರುವ, ಜೇವರ್ಗಿ ತಾಲ್ಲೂಕಿನ ಯಾಳವಾರ ಗ್ರಾಮದ ಭೀಮಾಶಂಕರ ಮಲ್ಲಪ್ಪ ಅರಬೋಳ (27), ಸಿದ್ಧಗಂಗಾ ಮೆಡಿಕಲ್ಸ್‌ನ ಕೆಲಸಗಾರ, ಅಫಜಲಪುರ ತಾಲ್ಲೂಕಿನ ಅಂಕಲಗಾ ಗ್ರಾಮದ ಲಕ್ಷ್ಮಿಕಾಂತ ಚನ್ನಪ್ಪ ಮುಲಗೆ (20) ಹಾಗೂ ಸ್ಟಾಫ್‌ನರ್ಸ್ ಆದ ನಗರದ ಖಮರ್ ಕಾಲಿನಿಯ ನಿವಾಸಿ ಜಿಲಾನಿಖಾನ್ ಖಾಜಾಖಾನ್ (32) ಬಂಧಿತರು.

ಆಮ್ಲಜನಕದ ಭಾರಿ ಕೊರತೆ: ಆರೋಗ್ಯ ಬಿಕ್ಕಟ್ಟಿನತ್ತ ಕರ್ನಾಟಕ

ಒಂದನೇ ಪುಟದಿಂದ

ಸಾಗಣೆಯದ್ದೇ ತಲೆನೋವು: ಒಂದೆಡೆ ಆಮ್ಲಜನಕದ ಲಭ್ಯತೆಯೇ ಕಷ್ಟವಾದರೆ, ಇನ್ನೊಂದೆಡೆ ಸಿಕ್ಕ ಆಮ್ಲಜನಕವನ್ನು ಆಸ್ಪತ್ರೆಯವರೆಗೆ ಸಾಗಿಸುವುದೂ ಕಷ್ಟಕರವಾದ ಸ್ಥಿತಿ ಎದುರಾಗಿದೆ. ದ್ರವರೂಪದ ಆಮ್ಲಜನಕವನ್ನು ಬೃಹತ್ ಕಂಟೇನರ್‌ಗಳ ಮೂಲಕ ಹಾಗೂ ಕಂಪ್ರೆಸ್ಡ್ ಆಮ್ಲಜನಕವನ್ನು ಸಿಲಿಂಡರ್‌ಗಳ ಮೂಲಕ ಸಾಗಿಸಬೇಕಿದೆ. ಈಗ ಸಾಗಣೆಯ ಕಂಟೇನರ್ ಮತ್ತು ಸಿಲಿಂಡರ್‌ಗಳ ಕೊರತೆಯೂ ಹೆಚ್ಚಾಗಿದ್ದು, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಿದೆ.

‘ಏಪ್ರಿಲ್‌–ಮೇ ತಿಂಗಳುಗಳಲ್ಲಿ ಎರಡನೇ ಅಲೆ ಸ್ಫೋಟಗೊಳ್ಳಲಿದೆ ಎಂದು ತಾಂತ್ರಿಕ ಸಲಹಾ ಸಮಿತಿ 2020ರ ನವೆಂಬರ್ ತಿಂಗಳಲ್ಲೇ ಎಚ್ಚರಿಸಿತ್ತು. ಆಮ್ಲಜನಕದ ಕೊರತೆ ನೀಗುವುದಕ್ಕೆ ರಾಜ್ಯ ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ರಾಜ್ಯ ಸರ್ಕಾರದ ಹೊಣೆಗೇಡಿತನದಿಂದಾಗಿ ಬಿಕ್ಕಟ್ಟು ಸೃಷ್ಟಿಯಾಗಿದೆ’ ಎಂದು ದೂರುತ್ತಾರೆ ಮಂಡ್ಯದಲ್ಲಿ ಕ್ಲಿನಿಕ್ ನಡೆಸುವ ವೈದ್ಯ ಡಾ.ಎಚ್‌.ವಿ. ವಾಸು.

‘ಸಣ್ಣ ಆಸ್ಪತ್ರೆಗಳಲ್ಲಿ ಸಿಲಿಂಡರ್ ಮೂಲಕವೇ ಆಮ್ಲಜನಕ ತುಂಬಿಸಿ ತರಬೇಕು. ನಮ್ಮ ಆಸ್ಪತ್ರೆಗೆ ಆಮ್ಲಜನಕ ಪಡೆಯುವುದಕ್ಕೆ ನಿತ್ಯವೂ ಪರದಾಡುತ್ತಿದ್ದೇವೆ. ನಿತ್ಯವೂ ಮೂರರಿಂದ ನಾಲ್ಕು ಬಾರಿ ಸಿಲಿಂಡರ್‌ಗಳನ್ನು ತುಂಬಿಸಿ ತರುತ್ತಿದ್ದೇವೆ. ಹೆಚ್ಚು ಹಣ ಕೊಟ್ಟರೂ ಆಮ್ಲಜನಕ ದೊರೆಯದ ಪರಿಸ್ಥಿತಿ ಇದೆ’ ಎಂದು ಬೆಂಗಳೂರಿನಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಯೊಂದರ ಮುಖ್ಯಸ್ಥರು ನೋವು ತೋಡಿಕೊಂಡರು.

ಒಂಬತ್ತು ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಏ.24ರಂದು ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಈ ಭಾಗದ ಒಂಬತ್ತು ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಶುಕ್ರವಾರವೂ ಹೆಚ್ಚು ಮಳೆ ಸುರಿದಿದ್ದು, ಶನಿವಾರವೂ ಭಾರಿ ಮಳೆಯ ಮುನ್ಸೂಚನೆ ಇದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂದಿನ ಮೂರು ದಿನ ಮಳೆಯಾಗುವ ಸಾಧ್ಯತೆ ಇದೆ. ಈ ಭಾಗಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದ್ದು, ಕೆಲವೆಡೆ ಚದುರಿದಂತೆ ಮಳೆಯಾಗಬಹುದು ಎಂದೂ ತಿಳಿಸಿದೆ.

ಮಳೆ– ಎಲ್ಲಿ, ಎಷ್ಟು?: ರಾಮನಗರದಲ್ಲಿ 6 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಸೊರಬ 4, ಸುಬ್ರಹ್ಮಣ್ಯ, ಬೆಳ್ತಂಗಡಿ, ಸಿದ್ದಾಪುರ, ಶಿರಹಟ್ಟಿ, ಗದಗ, ಕಡೂರು, ಕೋಲಾರ, ನಾಗಮಂಗಲ 3, ಕುಂದಾಪುರ, ಧರ್ಮಸ್ಥಳ, ಭಟ್ಕಳ, ಹಾವೇರಿ, ಪಾಂಡವಪುರ, ಎಚ್‌.ಡಿ.ಕೋಟೆ, ದಾವಣಗೆರೆ, ಬೆಂಗಳೂರು ನಗರ, ಬಾಗೇಪಲ್ಲಿ, ಶಿರಾ 2, ಮಂಗಳೂರು, ಮೂಡುಬಿದರೆ, ಬಂಟ್ವಾಳ, ಪುತ್ತೂರು, ಹೊನ್ನಾವರ, ಮಾಗಡಿ, ಶ್ರೀರಂಗಪಟ್ಟಣ, ಚಿತ್ರದುರ್ಗ, ಮೈಸೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಕಲಬುರ್ಗಿಯಲ್ಲಿ 40.1 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ವಿಜಯಪುರ, ಗದಗ, ಕೊಪ್ಪಳ, ರಾಯಚೂರು ತಲಾ 38 ಹಾಗೂ ಚಿಕ್ಕಮಗಳೂರಿನಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.



ಕೋವಿಡ್ ಬೇಗೆಗೆ ಬಾಡದಿರಲಿ

ಮಕ್ಕಳ ಮೊಗ್ಗಿನ ಮನಸು

ಅನನ್ಯ ಆರ್.ಪಿ.

ಕಳೆದ ಒಂದು ವರ್ಷದಿಂದ ಇರುವ ಪರಿಸ್ಥಿತಿ ಬಹಳಷ್ಟು ಒಳ್ಳೆಯ ವಿಷಯಗಳನ್ನು ಕಲಿಸಿಕೊಟ್ಟಿದೆ. ಬದುಕಿನಲ್ಲಿ ಸಣ್ಣ ಸಣ್ಣ ವಿಷಯಗಳ ಬಗ್ಗೆಯೂ ಲಕ್ಷ್ಯ ವಹಿಸುವುದು, ಆರೋಗ್ಯ ಮತ್ತು ಸ್ವಚ್ಛತೆ ಕಡೆ ಗಮನ ಹರಿಸುವುದು, ಶಿಸ್ತಿನಿಂದ ಜೀವನ ನಡೆಸುವುದು... ಹೀಗೆ ಕಲಿತಿರುವುದನ್ನು ಪಟ್ಟಿ ಮಾಡುತ್ತ ಹೋಗಬಹುದು. ಇದರ ಹೊರತಾಗಿ ಕೆಲವು ಪೋಷಕರು ಕಚೇರಿ ಕೆಲಸ ಮತ್ತು ಮನೆಯ ಕೆಲಸದಲ್ಲಿ ಸಮತೋಲನ ಸಾಧಿಸುತ್ತಲೇ ಮಕ್ಕಳಿಗಾಗಿ ಸಮಯ ಮೀಸಲಿಟ್ಟು ಅವರ ಮನದಲ್ಲಿನ ಭಯವನ್ನು ಹೋಗಲಾಡಿಸಲು ಯತ್ನಿಸಿರಬಹುದು.

ಒಂದು ಅಧ್ಯಯನದ ಪ್ರಕಾರ, ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ಪೋಷಕರು ತಮ್ಮ ಕೆಲಸದ ನಡುವೆ ಮಕ್ಕಳಿಗೆ ಸಮಯ ಮೀಸಲಿಟ್ಟಿದ್ದು ಕಡಿಮೆ. ಲಾಕ್‌ಡೌನ್‌ಗಿಂತ ಮುಂಚೆ ಶೇ 70ರಷ್ಟು ಪೋಷಕರು ಸಂಜೆ 7ರ ನಂತರ ತಮ್ಮ ಮಕ್ಕಳ ಜೊತೆ ಬಿಡುವಾಗಿ ಮಾತನಾಡುತ್ತ, ಆಟವಾಡುತ್ತ, ಹೊರಗಡೆ ತಿನ್ನಲು, ಶಾಪಿಂಗ್ ಮಾಡಲು ಕರೆದುಕೊಂಡು ಹೋಗುತ್ತಿದ್ದರು. ಆದರೆ ಲಾಕ್‌ಡೌನ್ ನಂತರ ಇಂತಹ ಪೋಷಕರ ಸಂಖ್ಯೆ ಶೇ 30ಕ್ಕಿಂತಲೂ ಕಡಿಮೆ ಎನ್ನುತ್ತದೆ ಸಮೀಕ್ಷೆ. ಮನೆಯಲ್ಲಿ ಇದ್ದರೂ ಕೂಡ ಮಕ್ಕಳ ಜೊತೆ ಸಮಯ ಕಳೆಯುವುದು ದುಸ್ತರವಾಗಿದೆ. 2020 ಕಳೆದು ಈಗ 21ಕ್ಕೆ ಕಾಲಿಟ್ಟು ನಾಲ್ಕು ತಿಂಗಳುಗಳು ಮುಗಿಯುತ್ತ ಬಂತು. ಈಗ ಶುರುವಾಗಿರುವ ಕೋವಿಡ್‌ನ ಎರಡನೆಯ ಅಲೆ ಮತ್ತೆ ಅಂಥದೇ ಪರಿಸ್ಥಿತಿ ತಂದೊಡ್ಡಿದೆ. ಹಾಗಂತ ಕೊರಗುತ್ತ ಕುಳಿತುಕೊಳ್ಳುವ ಬದಲು ಮಕ್ಕಳ ಜೊತೆ ಸಂವಹನ ನಡೆಸುವುದು, ಸಮಯ ಕಳೆಯುವುದರತ್ತ ಗಮನ ಹರಿಸಿದರೆ ನಮ್ಮ ಮಾನಸಿಕ ಆರೋಗ್ಯವೂ ಸುಧಾರಿಸುತ್ತದೆ.

> **ನಿತ್ಯ ಕೆಲ ಕಾಲ ಫೋನ್ ಬಂದ್ ಇಡಿ:** ಈ ದಿನಗಳಲ್ಲಿ ಸಮಯ ಕೊಲ್ಲಲು ಇರುವ ಸಾಧನವೆಂದರೆ ಮೊಬೈಲ್ ಎಂಬಂತಾಗಿದೆ. ಆದರೆ ನಮಗೆ ಅರಿವಾಗುವ ಮೊದಲೇ ಇದರ ದಾಸರಾಗಿ ಬಿಡುತ್ತೇವೆ. ಇದರ ಬದಲು ನಿತ್ಯ ಅರ್ಧ ತಾಸಿನ ಕಾಲವಾದರೂ ಈ ಡಿಜಿಟಲ್ ಸಾಧನಗಳಿಂದ ಬಿಡುವು ಮಾಡಿಕೊಂಡು ಮಕ್ಕಳ ಜೊತೆ ಕಾಲ ಕಳೆಯಿರಿ. ಕಥೆ ಹೇಳುವುದು ಅಥವಾ ಯಾವುದಾದರೂ ತಮಾಷೆಯ ಆಟ ಆಡುವುದು ಮಾಡಿ.

ಕುಟುಂಬದವರ ಜೊತೆಗೆ ಇದ್ದ ಮಾತ್ರಕ್ಕೆ ಅವರ ಜೊತೆ ಒಳ್ಳೆಯ ರೀತಿಯಲ್ಲಿ ಸಮಯ ಕಳೆಯುವುದು ಸಾಧ್ಯವೆ ಎಂಬ ಪ್ರಶ್ನೆಯೂ ಏಳಬಹುದು. ಆದರೆ ಕೆಲವೊಂದು ಹೊಂದಾಣಿಕೆ ಮಾಡಿಕೊಂಡರೆ ಖಂಡಿತ ಸಾಧ್ಯ. ಹಾಗೆಯೇ ಬಹುತೇಕರಿಗೆ ಕುಟುಂಬದ ಜೊತೆ ಸೇರುವುದು ಎಂದರೆ ತಮಾಷೆ, ಮನರಂಜನೆಯ ವಿಷಯ. ಆದರೆ ಕುಟುಂಬ ಒಟ್ಟಾಗಿ ಸೇರುವುದು ಎಂದರೆ ಇದಕ್ಕಿಂತ ಹೆಚ್ಚಿನ ಲಾಭಗಳಿವೆ.

ಸಂವಹನ ಕೌಶಲವನ್ನು ಹೆಚ್ಚಿಸುತ್ತದೆ: ಮಕ್ಕಳ ಜೊತೆ ಹೆಚ್ಚು ಸಂವಹನ ಮಾಡುತ್ತ ಹೋದಂತೆ ಅವರೂ ಕೂಡ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಹೊಸ ಶಬ್ದಗಳನ್ನು ಕಲಿಯುವತ್ತ ಆಸಕ್ತಿ ತೋರುತ್ತಾರೆ.

> ಮಕ್ಕಳ ಜೊತೆ ಸಮಯ ಕಳೆಯುವುದು, ಯಾವುದಾದರೂ ಚಟುವಟಿಕೆಯಲ್ಲಿ ತೊಡಗುವುದು ಅವರ ಜೊತೆ ಒಳ್ಳೆಯ ಬಾಂಧವ್ಯ ಬೆಳೆಸಿಕೊಳ್ಳುವ ವಿಧಾನ. ಅದರಲ್ಲೂ ಈ ಕೋವಿಡ್ ಸಂದರ್ಭದಲ್ಲಿ ನಮ್ಮದೇ ಕೆಲಸ, ಚಿಂತೆಯಲ್ಲಿ ಮುಳುಗದೇ ಮಕ್ಕಳಿಗಾಗಿ ಒಂದಿಷ್ಟು ಸಮಯ ಮೀಸಲಿಟ್ಟು ಅವರ ಮನಸ್ಸಿನಲ್ಲಿ ಸುರಕ್ಷತಾ ಭಾವ ಮೂಡಿಸುವುದು ಸೂಕ್ತ.

ಬಾಂಧವ್ಯ ಗಟ್ಟಿಯಾಗುತ್ತದೆ: ಚಿಕ್ಕ ಮಕ್ಕಳು ತಂದೆ– ತಾಯಿ ಅಥವಾ ಅಜ್ಜ– ಅಜ್ಜಿಯ ಜೊತೆ ಹೆಚ್ಚು ಸಮಯ ಕಳೆದರೆ ಅವರ ಮಧ್ಯೆ ಬಾಂಧವ್ಯ ಗಟ್ಟಿಯಾಗುವುದಲ್ಲದೇ ಪರಸ್ಪರ ನಂಬಿಕೆ ಹೆಚ್ಚುತ್ತದೆ. ಮಕ್ಕಳು ಇದರಿಂದ ನಿಮ್ಮ ಮಾತು ಕೇಳುವುದು, ಉತ್ತಮ ನಡವಳಿಕೆ ತೋರುವುದು ಹೆಚ್ಚಾಗುತ್ತದೆ.

ಓದಿನಲ್ಲೂ ಮುಂದೆ: ಕುಟುಂಬದವರ ಜೊತೆ ಹೆಚ್ಚು ಬೆರೆಯುವ ಮಕ್ಕಳು ಓದಿನಲ್ಲೂ ಚೆನ್ನಾಗಿ ಬೆಳವಣಿಗೆ ಸಾಧಿಸುತ್ತಾರೆ ಎನ್ನುತ್ತದೆ ಅಧ್ಯಯನ. ತನ್ನ ಬಗ್ಗೆ ಅಪ್ಪ– ಅಮ್ಮ ಲಕ್ಷ್ಯ ಕೊಡುತ್ತಾರೆ ಎಂದು ಅರಿತ ಮಗು ಯಾವುದೇ ಸಮಯದಲ್ಲೂ ನಿಮ್ಮ ಜೊತೆ ಚೆನ್ನಾಗೇ ನಡೆದುಕೊಳ್ಳುತ್ತದೆ ಮತ್ತು ಅದರಿಂದ ಸುರಕ್ಷತಾ ಭಾವವನ್ನೂ ಅನುಭವಿಸುತ್ತದೆ. ಇದರಿಂದ ಮಕ್ಕಳಿಗೆ ಈ ಕೋವಿಡ್ ಸಮಯದ ಒತ್ತಡವೂ ಕಡಿಮೆಯಾಗಿ ಇತರ ಚಟುವಟಿಕೆಗಳತ್ತ ಗಮನ ಹರಿಸುವುದು ಸುಲಭ.

ಸಮಸ್ಯೆ ಕಡಿಮೆ: ಹೆಚ್ಚು ಹೆಚ್ಚು ಬೆರೆಯುತ್ತ ಹೋದಂತೆ, ಮಗು ತನ್ನ ಆತಂಕ ಅಥವಾ ಸವಾಲುಗಳ ಬಗ್ಗೆ ಹೇಳಿಕೊಳ್ಳಲು ಶುರು ಮಾಡುತ್ತದೆ. ತಂದೆ– ತಾಯಿ ತನ್ನ ಭಾವನೆ ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು ಮಗುವಿಗೆ ಅನಿಸಲು ಶುರುವಾದರೆ ಅದು ಹೆಚ್ಚು ನಂಬಿಕೆ ಬೆಳೆಸಿಕೊಳ್ಳುತ್ತದೆ. ಇದರಿಂದ ಕೆಟ್ಟ ವರ್ತನೆ ಅಥವಾ ಕೋಪ ಮಾಡಿಕೊಳ್ಳುವುದು ಕಡಿಮೆಯಾಗುತ್ತದೆ. ಹೆಚ್ಚು ಖುಷಿಯಾಗಿರುವ ಮಗು ಮುಂದೆ ಕೆಟ್ಟ ಚಟ ಅಥವಾ ಹಿಂಸೆಗೆ ಇಳಿಯುವ ಸಾಧ್ಯತೆ ಕಡಿಮೆ.

ಹೆಚ್ಚುವ ಆತ್ಮವಿಶ್ವಾಸ: ತಂದೆ– ತಾಯಿಯ ಜೊತೆ ಹೆಚ್ಚು ಸಮಯ ಕಳೆಯುವ ಮಗು ಏನೇ ಆದರೂ ಪೋಷಕರು ತನ್ನ ನೆರವಿಗೆ ಬರುತ್ತಾರೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಳ್ಳುತ್ತದೆ. ಇದರಿಂದ ಯಾವುದೇ ಕೆಲಸವನ್ನು ಯತ್ನಿಸುವುದಕ್ಕೆ ಧೈರ್ಯವೂ ಬರುತ್ತದೆ. ವಿಫಲವಾದರೂ ಎದೆಗುಂದದೆ ಯಶಸ್ಸು ಸಾಧಿಸುವ ಸಾಧ್ಯತೆ ಹೆಚ್ಚು.

ಮಾನಸಿಕ ಆರೋಗ್ಯ ಸುಧಾರಣೆ: ಕೇವಲ ಪೋಷಕಾಂಶ ಮತ್ತು ವ್ಯಾಯಾಮ ಮಾತ್ರವಲ್ಲ, ಮಕ್ಕಳಿಗೆ ಪ್ರೀತಿ ಮತ್ತು ಗಮನ ಕೂಡ ಮುಖ್ಯ. ನಿತ್ಯ ಮಕ್ಕಳ ಜೊತೆ ಈ ರೀತಿ ಸಾಮೀಪ್ಯ ಸಾಧಿಸುತ್ತ ಹೋದರೆ ಅವರಲ್ಲಿ ಮೂಡುವ ಸುರಕ್ಷತೆಯ ಭಾವನೆ ಮಾನಸಿಕ ಆರೋಗ್ಯಕ್ಕೆ ನಾಂದಿ ಹಾಡುತ್ತದೆ.

ಮಕ್ಕಳೊಂದಿಗೆ ಸಮಯ ಕಳೆಯುವುದು ಹೇಗೆ?

ಒಟ್ಟಿಗೆ ಊಟ– ತಿಂಡಿ ಸೇವಿಸಿ: ಊಟ– ತಿಂಡಿಯ ಸಮಯದಲ್ಲಿ ಕುಟುಂಬದ ಸದಸ್ಯರು ಒಟ್ಟಿಗೇ ಕುಳಿತು ಮಾತನಾಡಬಹುದು. ನಿಮ್ಮ ಫೋನ್ ಬದಿಗಿಡಿ, ಟಿವಿ ಬಂದ್ ಮಾಡಿ. ಬದಲಾಗಿ ಇದನ್ನು ಮಾತುಕತೆಗೆ ಮೀಸಲಿಡಿ. ಸಣ್ಣಪುಟ್ಟ ಮನೆಗೆಲಸದಲ್ಲಿ ಮಕ್ಕಳನ್ನು ಸೇರಿಸಿಕೊಳ್ಳಿ.

ಒಟ್ಟಾಗಿ ಆಚರಣೆ: ತಿಂಗಳಿನಲ್ಲಿ ಒಂದು ದಿನವಾದರೂ ಕುಟುಂಬದ ಕೆಲವು ಸಂಪ್ರದಾಯಗಳನ್ನು ಪಾಲಿಸಿ. ಅಂದರೆ ವಿಶೇಷ ಅಡುಗೆ ಮಾಡಿ, ಸಾಧ್ಯವಾದರೆ ಪಾರ್ಕ್‌ಗೆ ಅಥವಾ ಕಡಲ ತೀರಕ್ಕೆ ಹೋಗಿ. ಪಿಕ್ನಿಕ್, ಹೋಟೆಲ್‌ನಲ್ಲಿ ಊಟ... ಹೀಗೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳಬಹುದು.

ಚಟುವಟಿಕೆಗಳಲ್ಲಿ ಭಾಗಿಯಾಗಿ: ಯೋಗ ಅಥವಾ ಧ್ಯಾನ ಅಥವಾ ಬೇರೆ ಯಾವುದಾದರೂ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ. ಮಕ್ಕಳ ಜೊತೆ ಇದರಿಂದ ಹೆಚ್ಚು ಬಾಂಧವ್ಯ ಬೆಳೆಯುತ್ತದೆ.

ನಿಸರ್ಗದ ಪಾಠ: ಚಾರಣ, ಕಾಡಿನಲ್ಲಿ ಸುತ್ತಾಟಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಬಹುದು. ಇದರಿಂದ ಮಕ್ಕಳಿಗೆ ಪ್ರಕೃತಿಯ ಬಗ್ಗೆ ಪಾಠ ಕಲಿಸಿದಂತಾಗುತ್ತದೆ.

ಬೋರ್ಡ್ ಗೇಮ್ ಆಡಿ: ಕೇರಂ, ಚೆಸ್ ಮೊದಲಾದ ಆಟಗಳನ್ನು ಮಕ್ಕಳಿಗೆ ಕಲಿಸಿ. ಇದರಿಂದ ಮಕ್ಕಳೂ ಅಂತಹ ಆಟಗಳಲ್ಲಿ ಖುಷಿಯಿಂದ ಪಾಲ್ಗೊಳ್ಳುತ್ತಾರೆ.

ಕಥೆ ಹೇಳಿ: ರಾತ್ರಿ 15 ನಿಮಿಷ ಕಥೆ ಹೇಳಲು ಬಳಸಿಕೊಳ್ಳಿ. ಇದರಿಂದ ಮಕ್ಕಳಿಗಷ್ಟೇ ಅಲ್ಲ, ನಿಮಗೂ ಒತ್ತಡದಿಂದ ಮುಕ್ತಿ ಸಾಧ್ಯ.

ನಳಪಾಕ



ಉರುಲಿ ದೋಸೆ, ಅಡ್ಡೆ ದೋಸೆ



ರಶ್ಮಿ ಭಟ್

ಉರುಲಿ ದೋಸೆ

ಬೇಕಾಗುವ ಸಾಮಗ್ರಿಗಳು: ಕುಚ್ಚಲಕ್ಕಿ – 2 ಕಪ್, ದೋಸೆಅಕ್ಕಿ – 2 ಕಪ್, ತೆಂಗಿನತುರಿ – ಒಂದೂವರೆ ಕಪ್, ನೀರು – ಬೇಕಾದಷ್ಟು, ಉಪ್ಪು – ರುಚಿಗೆ ತಕ್ಕಷ್ಟು, ಈರುಳ್ಳಿ – 3, ಹಸಿಮೆಣಸು – 2, ಕರಿಬೇವು – 2 ಎಸಳು, ಶುಂಠಿ – 1 ಇಂಚು, ತೆಂಗಿನೆಣ್ಣೆ – ಕಾಯಿಸಲು

ತಯಾರಿಸುವ ವಿಧಾನ: ದೋಸೆಅಕ್ಕಿ ಹಾಗೂ ಕುಚ್ಚಲಕ್ಕಿಯನ್ನು ಚೆನ್ನಾಗಿ ತೊಳೆದು 5 ರಿಂದ 6 ಗಂಟೆಗಳ ಕಾಲ ನೆನೆಸಿಡಿ. ಅದನ್ನು ಮಿಕ್ಸಿ ಜಾರಿಗೆ ಹಾಕಿ ತೆಂಗಿನತುರಿ ಸೇರಿಸಿ ತರಿತರಿಯಾಗಿ ರುಬ್ಬಿಕೊಳ್ಳಿ. ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಕಲೆಸಿ. ನಂತರ ಮೂರು ಈರುಳ್ಳಿ, ಹಸಿಮೆಣಸು, ಕರಿಬೇವು ಹಾಗೂ ಶುಂಠಿಯನ್ನು ಚಿಕ್ಕದಾಗಿ ಹೆಚ್ಚಿ ಹಾಕಿ ಮಿಶ್ರಣ ಮಾಡಿ. ಉರುಲಿ(ಬಾಣಲೆ)ಯನ್ನು ಬಿಸಿ ಮಾಡಿ ಬಿಸಿಯಾದ ಮೇಲೆ ತೆಂಗಿನೆಣ್ಣೆ ಹಚ್ಚಿ, ಅದರ ಮೇಲೆ ದೋಸೆಹಿಟ್ಟು ಜಾಸ್ತಿ ಹಾಕಿ. ತೆಂಗಿನೆಣ್ಣೆ ಚಿಮುಕಿಸಿ. ಮಗುಚಿ ಹಾಕಿ. ಎರಡೂ ಕಡೆ ಚೆನ್ನಾಗಿ ಬೆಂದ ಮೇಲೆ ತೆಗೆಯಿರಿ. ಇದು ತೆಂಗಿನೆಣ್ಣೆ ಚಟ್ನಿ ಜೊತೆ ತಿನ್ನಲು ಚೆನ್ನಾಗಿರುತ್ತದೆ.

ಮೆಂತ್ಯೆ ದೋಸೆ

ಬೇಕಾಗುವ ಸಾಮಗ್ರಿಗಳು: ದೋಸೆಅಕ್ಕಿ – 6 ಕಪ್, ಉದ್ದಿನಬೇಳೆ – ಮುಕ್ಕಾಲು ಕಪ್, ಮೆಂತ್ಯೆ – ಕಾಲು ಕಪ್, ದಪ್ಪ ಅವಲಕ್ಕಿ – ಕಾಲು ಕಪ್, ಎಣ್ಣೆ – ಕಾಯಿಸಲು, ತುಪ್ಪ – ಸ್ವಲ್ಪ

ತಯಾರಿಸುವ ವಿಧಾನ: ಅಕ್ಕಿ, ಉದ್ದಿನಬೇಳೆ ಹಾಗೂ ಮೆಂತ್ಯೆಯನ್ನು ತೊಳೆದು 6 ಗಂಟೆಗಳ ಕಾಲ ನೆನೆ ಹಾಕಿ. ನಂತರ ತೊಳೆದ ಉದ್ದಿನಬೇಳೆಗೆ ಬೇಕಾದಷ್ಟು ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಅಕ್ಕಿಗೆ ಒಂದು ಕಪ್ ಅವಲಕ್ಕಿ ಸೇರಿಸಿ 15 ನಿಮಿಷ ನೆನೆಸಿ. ಅದನ್ನು ಮೆಂತ್ಯೆಯೊಂದಿಗೆ ಸೇರಿಸಿ ರುಬ್ಬಿಕೊಳ್ಳಿ. ಎಲ್ಲಾ ಹಿಟ್ಟನ್ನು ಮಿಶ್ರಣ ಮಾಡಿ ಉಪ್ಪು ಸೇರಿಸಿ ಎಂಟು ಗಂಟೆ ಕಾಲ ನೆನೆಸಿಡಿ. ಮರುದಿನ ಹಿಟ್ಟಿನಿಂದ ದೋಸೆ ಮಾಡಿ ತಿನ್ನಿ. ಇದು ಕೆಂಪುಚಟ್ನಿಯ ಜೊತೆ ತಿನ್ನಲು ಚೆನ್ನಾಗಿರುತ್ತದೆ.

ಅಡ್ಡೆ ದೋಸೆ




ಬೇಕಾಗುವ ಸಾಮಗ್ರಿಗಳು: ದೋಸೆಅಕ್ಕಿ – ಎರಡೂವರೆ ಕಪ್, ತೊಗರಿಬೇಳೆ – ಅರ್ಧ ಕಪ್, ಕಡಲೆಬೇಳೆ – ಅರ್ಧ ಕಪ್, ಹೆಸರುಬೇಳೆ – ಅರ್ಧ ಕಪ್, ಉದ್ದಿನಬೇಳೆ – ಅರ್ಧ ಕಪ್, ಹಸಿಮೆಣಸು – 2, ಶುಂಠಿ – 1 ಇಂಚು, ನೀರು – ಬೇಕಾದಷ್ಟು, ಉಪ್ಪು – ರುಚಿಗೆ, ಈರುಳ್ಳಿ – 2, ಕೊತ್ತಂಬರಿ ಸೊಪ್ಪು – ಸ್ವಲ್ಪ, ಬೇವಿನಸೊಪ್ಪು

ತಯಾರಿಸುವ ವಿಧಾನ: ಅಕ್ಕಿ ಹಾಗೂ ಬೇಳೆಗಳನ್ನು ತೊಳೆದು 5 ರಿಂದ 6 ಗಂಟೆ ನೆನೆಸಿಡಿ. ನಂತರ ಮಿಕ್ಸಿ ಜಾರಿಗೆ ಹಾಕಿ ಅದಕ್ಕೆ ಹಸಿಮೆಣಸು ಹಾಗೂ ಶುಂಠಿ, ಸ್ವಲ್ಪ ನೀರು ಸೇರಿಸಿ ತರಿತರಿಯಾಗಿ ರುಬ್ಬಿಕೊಳ್ಳಿ. ರುಬ್ಬಿಕೊಂಡ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. ಹಿಟ್ಟು ಮಂದವಾಗಿರಲಿ. ಈರುಳ್ಳಿ, ಕೊತ್ತಂಬರಿ ಸೊಪ್ಪು, ಕರಿಬೇವನ್ನು ಸಣ್ಣಗೆ ಹೆಚ್ಚಿ. ಕಾವಲಿ ಬಿಸಿ ಮಾಡಿ ದೋಸೆ ಹಾಕಿ. ಅದರ ಮೇಲೆ ಹೆಚ್ಚಿಕೊಂಡ ಸಾಮಗ್ರಿಗಳನ್ನು ಉದುರಿಸಿ. ತುಪ್ಪ ಅಥವಾ ಎಣ್ಣೆ ಹಾಕಿ ಮುಚ್ಚಿ ಗರಿಗರಿಯಾಗಿ ಬೇಯಿಸಿ. ಇದನ್ನು ತೆಂಗಿನಕಾಯಿ ಚಟ್ನಿ ಜೊತೆ ತಿನ್ನಲು ಚೆನ್ನಾಗಿರುತ್ತದೆ.

ಪ್ರಜಾವಾಣಿ ನೋಡಿಯೊ — ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಸಿಸೇರಿಯನ್ ಪ್ರಸವ ಶೀಘ್ರ ಚೇತರಿಕೆ ಹೇಗೆ?



ಡಾ. ಪ್ರತಿಮಾ ರೆಡ್ಡಿ



ಸಿಸೇರಿಯನ್ ಅಥವಾ ಸಿ ಸೆಕ್ಷನ್ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸುವುದು ಅತ್ಯಂತ ಸುರಕ್ಷಿತ ವಿಧಾನವಾದರೂ, ಕೆಲವು ಅಪಾಯಗಳು ಇದ್ದೇ ಇರುತ್ತವೆ. ಮಗು ಮತ್ತು ತಾಯಿಯ ಜೀವಕ್ಕೆ ಅತ್ಯಂತ ಸುರಕ್ಷಿತವಾಗಿದ್ದರೆ ಮಾತ್ರ ಇದನ್ನು ನಡೆಸಲಾಗುತ್ತದೆ. ಹೊಕ್ಕಳಿಗಿಂತ ಕೆಳಗೆ (ಬಿಕಿನಿ ಲೈನ್) ಅಡ್ಡವಾಗಿ ಅಥವಾ ಕೆಲವೊಮ್ಮೆ ಉದ್ದಕ್ಕೆ ಹೊಟ್ಟೆ ಮತ್ತು ಗರ್ಭಕೋಶವನ್ನು ಕತ್ತರಿಸಿ ಮಗುವನ್ನು ಹೊರ ತೆಗೆಯುವ ವಿಧಾನವಿದು. ಶಸ್ತ್ರಚಿಕಿತ್ಸೆಯ ವಿಧಾನಗಳು ಮತ್ತು ಅನಸ್ತೇಶಿಯ ಗುಣಮಟ್ಟದ ಸುಧಾರಣೆಯಿಂದಾಗಿ, ಶಸ್ತ್ರಚಿಕಿತ್ಸೆಯ ನಂತರ ಮಹಿಳೆಯರು ಶೀಘ್ರ ಚೇತರಿಸಿಕೊಳ್ಳಬಹುದು ಮತ್ತು ಶಸ್ತ್ರಚಿಕಿತ್ಸೆ ನಡೆಸಿದ 24-48 ಗಂಟೆಗಳಲ್ಲಿ ಎದ್ದು ಓಡಾಡಬಹುದು.

ಶಸ್ತ್ರಚಿಕಿತ್ಸೆಯ ನಂತರ ಶೀಘ್ರ ಚೇತರಿಕೆಗೆ ಕೆಲವು ಸಲಹೆಗಳು..

ಮನಸ್ಸು ಮುಕ್ತವಾಗಿರಲಿ

ಗರ್ಭಿಣಿಯಾಗಿದ್ದಾಗಲೇ ಸಾಮಾನ್ಯ ಹೆರಿಗೆಗೆ ವೈದ್ಯರು ಪ್ರಯತ್ನ ಪಡುವುದು ಸಾಮಾನ್ಯ. ಆದರೆ ಗರ್ಭಾವಸ್ಥೆ ಸಹಜವಾಗಿದ್ದರೂ ಕೆಲವೊಮ್ಮೆ ಮಗು ಮತ್ತು ತಾಯಿಯನ್ನು ರಕ್ಷಿಸಲು ಸಿಸೇರಿಯನ್ ಅಗತ್ಯ ಉಂಟಾಗಬಹುದು. ಶಸ್ತ್ರಚಿಕಿತ್ಸೆಯಿಲ್ಲದೇ ಹೆರಿಗೆಯಾಗುತ್ತದೆ ಎಂದು ಬಲವಾಗಿ ನಂಬಿಕೊಂಡಿದ್ದ ಮಹಿಳೆಯರಿಗೆ, ಸಿಸೇರಿಯನ್ ಮಾಡಿದ ನಂತರ ಚೇತರಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗಬಹುದು.

ಪ್ರಸವದ ನಂತರ ಆಹಾರ ಸೇವನೆ

ಶಸ್ತ್ರಚಿಕಿತ್ಸೆಯ ನಂತರ ಮಹಿಳೆಯರು ದ್ರವಾಹಾರ ಸೇವನೆಯನ್ನು ಆರಂಭಿಸಬೇಕು. ಅವರಿಗೆ ಅಗತ್ಯವೆನಿಸಿದರೆ, ಕೆಲವು ಗಂಟೆಗಳ ನಂತರ ಮೆದು ಆಹಾರ ನೀಡಬಹುದು. ಇದರಿಂದ ಕರುಳಿನ ಚಲನೆ ಸುಧಾರಣೆಯಾಗಲು ಸಹಾಯವಾಗುತ್ತದೆ.

ನಡಿಗೆ

ಸಾಧ್ಯವಾದಷ್ಟೂ ಬೇಗ ಮಹಿಳೆಯರು ನಡೆದಾಡಲು ಆರಂಭಿಸಬೇಕು ಮತ್ತು ಇದಕ್ಕಾಗಿ ಆಸ್ಪತ್ರೆಯಲ್ಲಿನ ಫಿಸಿಯೋ ಥೆರಪಿಸ್ಟ್‌ಗಳಿಂದ ತರಬೇತಿ ಪಡೆಯಬಹುದು. ಸಂಪೂರ್ಣ ವಿಶ್ರಾಂತಿ (ಬೆಡ್ ರೆಸ್ಟ್) ಅಷ್ಟು ಒಳ್ಳೆಯದಲ್ಲ. ಯಾಕೆಂದರೆ, ಇದರಿಂದ ಕಾಲುಗಳಲ್ಲಿ 'ಡೀಪ್ ವೇನ್ಸ್ ಥ್ರೋಂಬೋಸಿಸ್' ಎಂದು ಕರೆಯಲಾಗುವ ಅಪಾಯಕಾರಿ ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆ ಉಂಟಾಗಬಹುದು.

ನೋವಿನ ಔಷಧ

ಶಸ್ತ್ರಚಿಕಿತ್ಸೆಯಾದ ಮೊದಲ ಕೆಲವು ದಿನಗಳವರೆಗೆ ನೋವು ತಡೆಯುವುದಕ್ಕಾಗಿ ನೋವಿನ ಔಷಧವನ್ನು ಶಿಫಾರಸು ಮಾಡಲಾಗುವುದು. ಬಹುತೇಕ ಮಹಿಳೆಯರಿಗೆ 24 ರಿಂದ 48 ಗಂಟೆಗಳವರೆಗೆ ಔಷಧದ ಅಗತ್ಯವಿರುತ್ತದೆ ಮತ್ತು ನಂತರ ಅಗತ್ಯವಿದ್ದಾಗ ಮಾತ್ರ ಬಳಸಬಹುದು. ಆರಂಭಿಕ ಕೆಲವು ಗಂಟೆಗಳು ಮತ್ತು ನಂತರದ ದಿನಗಳಲ್ಲಿ, ನೋವು ನಿರ್ವಹಣೆಯು ಅತ್ಯಂತ ಮಹತ್ವದ್ದು. ಯಾಕೆಂದರೆ ನೋವು ಇಲ್ಲದ ಮತ್ತು ಆರಾಮವಾಗಿರುವ ಮಹಿಳೆಯರು ಹೆಚ್ಚು ನಡೆದಾಡುವ ಮತ್ತು ಬೇಗ ಚೇತರಿಸಿಕೊಳ್ಳುವ ಸಾಧ್ಯತೆ ಅಧಿಕ.

ಮಲಬದ್ಧತೆ

ಮೊದಲ ಕೆಲವು ದಿನಗಳಲ್ಲಿ ಎದೆಯುರಿ ಮತ್ತು ಮಲಬದ್ಧತೆ ಸಮಸ್ಯೆಗಳನ್ನು ನಿವಾರಿಸಲು ಸೂಕ್ತ ಔಷಧವನ್ನು ನೀಡುವುದು ಅಗತ್ಯ. ವಾಯುವಿನಿಂದಾಗಿ ಹೊಟ್ಟೆಉಬ್ಬರ ಉಂಟಾಗಿ, ನೋವು ಹೆಚ್ಚಾಗುವುದರಿಂದ ಸಮಸ್ಯೆ ಉಂಟಾಗಬಹುದು. ಮಲ ಮತ್ತು ಉದರವಾಯುವನ್ನು ಹೊರಹಾಕಲು ಎನಿಮಾ ಚಿಕಿತ್ಸೆ ನೀಡುವ ಅವಶ್ಯಕತೆ ಉಂಟಾಗಬಹುದು.

ಶುಚಿತ್ವ

ನಿಮ್ಮ ವೈದ್ಯರ ಸಲಹೆಯ ಮೇರೆಗೆ ಶಸ್ತ್ರಚಿಕಿತ್ಸೆ ಮಾಡಿದ ಹೊಟ್ಟೆಯ ಭಾಗವನ್ನು ಸೋಪ್ ಮತ್ತು ನೀರಿನಿಂದ ತೊಳೆದು ಸ್ವಚ್ಛವಾಗಿಡಿ. ಆ ಭಾಗ ಕೆಂಪಾದರೆ ಅಥವಾ ನೋವು ಕಂಡು ಬಂದರೆ ವೈದ್ಯರಿಗೆ ತಿಳಿಸಿ.

ವ್ಯಾಯಾಮ

ಆಸ್ಪತ್ರೆಯಲ್ಲಿರುವಾಗ ಸಾಧ್ಯವಾದಾಗಲೆಲ್ಲ ನಡೆದಾಡಲು ಆರಂಭಿಸಿ. ಮನೆಯಲ್ಲಿ ದಿನಕ್ಕೆ 30 ನಿಮಿಷಗಳವರೆಗೆ ನಡೆದಾಡಬಹುದು. ಇದರಿಂದ ನೀವು ಶೀಘ್ರ ಚೇತರಿಸಿಕೊಳ್ಳಬಹುದು ಮತ್ತು ರಕ್ತ ಹೆಪ್ಪುಗಟ್ಟುವಿಕೆ ತಡೆಯಲು ಸಹಾಯ ಮಾಡುತ್ತದೆ. ಹಾಗೆಯೇ ಮಲಬದ್ಧತೆ ಕಡಿಮೆಯಾಗುತ್ತದೆ ಮತ್ತು ಜೀರ್ಣಕ್ರಿಯೆಗೂ ನೆರವಾಗುತ್ತದೆ.

(ಲೇಖಕಿ: ನಿರ್ದೇಶಕರು, ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ, ಫೋರ್ಟಿಸ್ ಲಾ ಫೆಮ್ಮೆ ಆಸ್ಪತ್ರೆ, ಬೆಂಗಳೂರು)

ಪೌಷ್ಟಿಕ ಆಹಾರ ಎಂದರೇನು? ಹಾಗೂ ಕೊರೊನಾ ಸಮಯದಲ್ಲಿ ಅದರ ಸೇವನೆಯ ಅವಶ್ಯಕತೆಯ ಬಗ್ಗೆ ಮಾತನಾಡಿದ್ದಾರೆ ಪೋಷಕಾಂಶ ತಜ್ಞೆ ಪ್ರಿಯದರ್ಶಿನಿ ಮಂಜುನಾಥ್

ಪ್ರಜಾವಾಣಿ ನೋಡಿಯೊ

ಗರ್ಭಾಶಯದಲ್ಲಿ ಗಡ್ಡೆ: ಶಸ್ತ್ರಚಿಕಿತ್ಸೆ ಪರಿಹಾರವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನ್ನ ಮಡದಿಯ ಗರ್ಭಾಶಯದಲ್ಲಿ ಗಡ್ಡೆಗಳಾಗಿವೆ. ಗರ್ಭಾಶಯ ತೆಗೆಯಬೇಕೆಂದು ವೈದ್ಯರು ಹೇಳಿದ್ದಾರೆ. ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬಹುದು ಅಥವಾ ಲ್ಯಾಪ್ರೊಸ್ಕೋಪಿ ಮೂಲಕ ತೆಗೆಯಬಹುದು ಎಂದು ಹೇಳಿದ್ದರು. ಇದರಲ್ಲಿ ಯಾವುದು ಒಳಿತು ಎಂದು ತಿಳಿಸಿ.**

ಊರು, ಹೆಸರು ಇಲ್ಲ.

ಉತ್ತರ: ನಿಮ್ಮ ಮಡದಿಗೆ ವಯಸ್ಸೆಷ್ಟು ಹಾಗೂ ಅವರಿಗೆ ಮಕ್ಕಳಿವೆಯೇ ಅಥವಾ ಮುಂದೆ ಮಗುವಾಗುವ ಅವಶ್ಯಕತೆ ಇದೆಯೇ? ಏನನ್ನೂ ತಿಳಿಸಿಲ್ಲ. ಗರ್ಭಕೋಶದ ನಾರುಗಡ್ಡೆ (ಫೈಬ್ರಾಯಿಡ್) ಸಂತಾನೋತ್ಪತ್ತಿ ವಯಸ್ಸಿನಲ್ಲಿ ಸಾಮಾನ್ಯವಾಗಿ ಆಗುವ ಸೌಮ್ಯವಾದ ಗಡ್ಡೆಯಷ್ಟೇ. ಇವು ಈಸ್ಟ್ರೋಜನ್ ಹಾಗೂ ಪ್ರೊಜೆಸ್ಟಿರಾನ್ ಸಂಬಂಧಿತ ಗಡ್ಡೆಗಳಾದ್ದರಿಂದ ಮೆನೋಪಾಸ್ ನಂತರ ಕುಗ್ಗಿ ಹೋಗಿಬಿಡುತ್ತವೆ. ಈ ನಾರುಗಡ್ಡೆ ಮಕ್ಕಳಿಲ್ಲದವರಲ್ಲಿಯೂ, ಪದೇಪದೇ ಗರ್ಭಪಾತ ಮಾಡಿಸಿದವರಲ್ಲೂ ಅಪರೂಪಕ್ಕೊಮ್ಮೆ ಅತಿ ಹೆಚ್ಚು ಮಕ್ಕಳನ್ನು ಪಡೆದವರಲ್ಲೂ ಕಾಣಿಸಿಕೊಳ್ಳಬಹುದು. ಈ ಗಡ್ಡೆಗಳು ಹೊರಪದರ ಅಥವಾ ಸ್ನಾಯುಪದರ ಹಾಗೂ ಒಳಪದರಗಳಲ್ಲಿ ಇರಬಹುದು. ಈ ಗಡ್ಡೆಗಳ ಗಾತ್ರ ಹಾಗೂ ಅವು ಇರುವ ಸ್ಥಳಗಳ ಮೇಲೆ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೆಲವರಲ್ಲಿ ಮುಟ್ಟಿನ ಸಮಯದಲ್ಲಿ ಅಧಿಕ ರಕ್ತಸ್ರಾವವಾಗಬಹುದು, ಕೆಲವರಲ್ಲಿ ಮುಟ್ಟಿನ ಮೊದಲೇ ಹೊಟ್ಟೆನೋವು ಕಾಣಿಸಿಕೊಳ್ಳಬಹುದು. ಪದೇಪದೇ ಮುಟ್ಟಾಗಲೂಬಹುದು. ಕೆಲವೊಮ್ಮೆ ಮುಂಭಾಗದಲ್ಲಿ ಬೆಳೆಯುತ್ತಿದ್ದರೆ ಮೂತ್ರಕೋಶದ ಮೇಲೆ ಒತ್ತಡ ಆಗಿ ಮೂತ್ರವಿಸರ್ಜನೆಗೆ ತೊಂದರೆಯಾಗಬಹುದು. ಇಲ್ಲವೇ ಹಿಂಭಾಗದಲ್ಲಿ ಬೆಳೆಯುತ್ತಿದ್ದರೆ ಮಲವಿಸರ್ಜನೆಗೂ ತೊಂದರೆಯಾಗಬಹುದು.

ನಾರುಗಡ್ಡೆ ಪತ್ತೆಯಾದ ತಕ್ಷಣ ಗರ್ಭಕೋಶ ತೆಗೆಯಬೇಕೆಂದೇನೂ ಇಲ್ಲ. ಗಡ್ಡೆ ಸಣ್ಣದಿದ್ದು ಮುಟ್ಟಿನಲ್ಲಿ ಯಾವುದೇ ತೊಂದರೆಗಳು ಇಲ್ಲದಿದ್ದಲ್ಲಿ ಮತ್ತು ಮಲಮೂತ್ರಗಳ ಮೇಲೆ ಒತ್ತಡದ ಚಿಹ್ನೆಗಳಿಲ್ಲದಿದ್ದಲ್ಲಿ ಹಾಗೆಯೇ ಬಿಡಬಹುದು. ಅದನ್ನೆಲ್ಲಾ ವೈದ್ಯರು ನಿರ್ಣಯಿಸಿ ಶಸ್ತ್ರಚಿಕಿತ್ಸಾ ವಿಧಾನವಾಗಿ ಗರ್ಭಕೋಶ ತೆಗೆದು ಹಾಕುವುದನ್ನು ಹಿಸ್ಟರೆಕ್ಟಮಿ ಅನ್ನುತ್ತಾರೆ. ಅದನ್ನು ಸಹಜವಿಧಾನ ಅಥವಾ ಲ್ಯಾಪ್ರೊಸ್ಕೋಪಿಕ್ ವಿಧಾನದಲ್ಲಿ ಮಾಡಿಸಿಕೊಳ್ಳಬಹುದು. ಹೊಟ್ಟೆ ಕೊಯ್ದು ಮಾಡುವ ವಿಧಾನವಾದರೆ 3-4 ದಿನ ಆಸ್ಪತ್ರೆಯಲ್ಲಿ ಇರಬೇಕಾಗಬಹುದು ಮತ್ತು ಸ್ವಲ್ಪ ನೋವು ಇರಬಹುದು. ಲ್ಯಾಪ್ರೊಸ್ಕೋಪಿಕ್ ವಿಧಾನದಲ್ಲಿ 48 ಗಂಟೆಯೊಳಗಾಗಿ ಆಸ್ಪತ್ರೆಯಿಂದ ಬಿಡುಗಡೆ ಮಾಡುತ್ತಾರೆ. ಶಸ್ತ್ರಚಿಕಿತ್ಸೆ ಮಾಡುವ ತಜ್ಞವೈದ್ಯರು ಯಾವ ವಿಧಾನದಲ್ಲಿ ಪರಿಣತಿ ಹೊಂದಿದ್ದಾರೆ ಮತ್ತು ಆ ಆಸ್ಪತ್ರೆಯಲ್ಲಿ ಅಂತಹ ಸೌಲಭ್ಯಗಳು ಇದೆಯೇ ಎನ್ನುವುದರ ಮೇಲೆ ಚಿಕಿತ್ಸಾ ವಿಧಾನ ನಿರ್ಣಯವಾಗುತ್ತದೆ. ಜೊತೆಗೆ ನಿಮಗೆ ಯಾವ ವಿಧಾನದಲ್ಲಿ ಮಾಡಿಸಿಕೊಳ್ಳಬೇಕೆಂಬ ಆಸೆ ಇದೆ ಎನ್ನುವುದನ್ನು ಅವಲಂಬಿಸಿರುತ್ತದೆ. ಗರ್ಭಕೋಶ ಉಳಿಸಿಕೊಳ್ಳಬೇಕು, ಫಲವಂತಿಕೆಯನ್ನು ಕಾಪಾಡಿಕೊಳ್ಳಬೇಕು ಎಂದಿದ್ದರೆ ಕೇವಲ ನಾರುಗಡ್ಡೆಯನ್ನು ಮಾತ್ರ ತೆಗೆಯುವ ವಿಧಾನವನ್ನು ಮಯೋಮೆಕ್ಟಮಿ ಎನ್ನುತ್ತಾರೆ. ಇತ್ತೀಚೆಗೆ ನಾರುಗಡ್ಡೆ ಕರಗಿಸುವ ಮಾತ್ರೆಗಳೂ ಬಂದಿವೆ. ಬೇರೆ ಬೇರೆ ತಂತ್ರಜ್ಞಾನಗಳು ಬಂದಿವೆ. ವೈದ್ಯರ ಸಲಹೆಯನ್ನು ಪಡೆಯಿರಿ.

- **ನನಗೆ ನಾಲ್ಕು ತಿಂಗಳಿಂದ ಮುಟ್ಟಾಗುತ್ತಿಲ್ಲ. ಮೈ ದಪ್ಪಗಾಗುತ್ತಿದೆ, ಸುಸ್ತಾಗುತ್ತಿದೆ. ಏನಾದರೂ ಕೆಲಸ ಮಾಡಬೇಕೆಂದರೆ ಉಬ್ಬಸ ಬರುತ್ತದೆ. ಕೆಲವೊಮ್ಮೆ ವಾಂತಿ ಬಂದಂತೆ ಆಗುತ್ತದೆ, ಆದರೆ ವಾಂತಿ ಬರುವುದಿಲ್ಲ. ನನಗೆ ಇನ್ನೂ ಮದುವೆ ಆಗಿಲ್ಲ. ಪರಿಹಾರ ತಿಳಿಸಿ.**

ಪ್ರಣೀತಾ ಪೈ, ಊರು ತಿಳಿಸಿಲ್ಲ.

ಉತ್ತರ: ನಿಮ್ಮ ತೂಕ ಹೆಚ್ಚಾಗುತ್ತಿರುವುದಕ್ಕೆ ಥೈರಾಯಿಡ್ ಸಮಸ್ಯೆ ಅಥವಾ ಜೀವನಶೈಲಿಯಲ್ಲಿನ ವ್ಯತ್ಯಾಸವೂ ಕಾರಣವಿರಬಹುದು. ಅಂದರೆ ದೈಹಿಕ ಚಟುವಟಿಕೆಯ ಕೊರತೆ ಮತ್ತು ಅವಶ್ಯಕತೆಗಿಂತ ಹೆಚ್ಚು ಆಹಾರ ಸೇವನೆ ಇತ್ಯಾದಿಗಳಿಂದ ಪಿಸಿಒಡಿ ಸಮಸ್ಯೆಯಿಂದಾಗಿ ಪ್ರತಿ ತಿಂಗಳು ಅಂಡಾಣು ಬಿಡುಗಡೆಯಾಗದೆ ತಿಂಗಳಿಗೆ ಸರಿಯಾಗಿ ಮುಟ್ಟಾಗದೆ ಇರಬಹುದು. ನೀವು ತಜ್ಞವೈದ್ಯರನ್ನು ಕಂಡು ತಪಾಸಣೆಗೊಳಗಾಗಿ ಥೈರಾಯಿಡ್ ಹಾರ್ಮೋನ್‌ಗಳ ಮಟ್ಟ ಪರೀಕ್ಷಿಸಿಕೊಳ್ಳಿ. ಕತ್ತಿನ ಬುಡದಲ್ಲಿರುವ ಈ ಥೈರಾಯಿಡ್ ಗ್ರಂಥಿಯಿಂದ ಉತ್ಪಾದನೆಯಾಗುವ ಥೈರಾಯಿಡ್ ಹಾರ್ಮೋನ್ ಶರೀರದ ಚಯಾಪಚಯ ಕ್ರಿಯೆ, ಪಿಷ್ಟ, ಪ್ರೊಟೀನ್ ಹಾಗೂ ಕೊಬ್ಬುಗಳ ಆಮ್ಲೀಕರಣ ಇನ್ನಿತರ ಹಲವು ಚಟುವಟಿಕೆಗಳ ಮೇಲೆ ಪ್ರಭಾವಬೀರಿ ಋತುಚಕ್ರದ ಮೇಲೂ ಪ್ರಭಾವ ಬೀರುತ್ತದೆ. ಈ ಥೈರಾಯಿಡ್ ಗ್ರಂಥಿಯಲ್ಲಿ ಸ್ರಾವ ಕಡಿಮೆಯಾದರೆ ಹಲವು ಶಾರೀರಿಕ ಕ್ರಿಯೆಗಳು ಕುಂಠಿತಗೊಂಡು ತೂಕ ಹೆಚ್ಚಾಗುವುದು, ಮುಟ್ಟಿನ ಅವಧಿಯಲ್ಲಿ ಹಾಗೂ ಸ್ರಾವದಲ್ಲಿ ಏರುಪೇರಾಗುವುದು, ಬಂಜೆತನ, ಮಲಬದ್ಧತೆ, ಚರ್ಮ, ಕೂದಲು ಒರಟಾಗುವುದು, ಸುಸ್ತು, ಖಿನ್ನತೆ ಹೀಗೆ ಹಲವು ತರಹದ ಸಮಸ್ಯೆಗಳು ಆಗಬಹುದು. ಯಾವುದಕ್ಕೂ ತಜ್ಞ ವೈದ್ಯರಿಂದ ಸೂಕ್ತ ಸಲಹೆ ಹಾಗೂ ಚಿಕಿತ್ಸೆ ಪಡೆದುಕೊಳ್ಳಿ.

- **ನನಗೆ 27 ವರ್ಷ, ಮದುವೆಯಾಗಿ ಒಂದೂವರೆ ವರ್ಷ ಆಗಿದೆ. ಎರಡು ತಿಂಗಳಿಗೆ ಗರ್ಭಪಾತ ಆಗಿದೆ. ಗರ್ಭಪಾತವಾಗಿ ಒಂದು ವರ್ಷ ಕಳೆದಿದೆ. 70 ಕೆ.ಜಿ. ತೂಕವಿದ್ದೇನೆ. ಮುಂದೆ ಮಗುವಿಗಾಗಿ ಪ್ರಯತ್ನ ಮಾಡಬಹುದೇ? ಗರ್ಭಿಣಿಯಾಗಲು ನನ್ನ ತೂಕ ಜಾಸ್ತಿ ಇದೆಯೇ?**

ವಿಜಯಲಕ್ಷ್ಮೀ ಪ್ರಸನ್ನ, ಹಾಸನ

ಉತ್ತರ: ನೀವು 70 ಕೆ.ಜಿ. ತೂಕವಿದ್ದರೆ ನಿಮ್ಮ ಎತ್ತರ ಎಷ್ಟಿದೆ ಎಂದು ತಿಳಿಸಿಲ್ಲ. ನಿಮ್ಮ ಎತ್ತರವನ್ನು ಸೆಂ.ಮೀಟರ್‌ನಲ್ಲಿ ಅಳೆದು ಅದರಲ್ಲಿ 105ನ್ನು ಕಳೆಯಿರಿ. ಆಗ ಬರುವ ಉತ್ತರ ಗಮನಿಸಿ. (ಉದಾ: ನೀವು 160 ಸೆಂ.ಮೀ ಇದ್ದರೆ ನೀವು 55 ಕೆ.ಜಿ ಇರುವುದು ಸೂಕ್ತ). ನಿಮ್ಮ ತೂಕ ಎಷ್ಟಿರಬೇಕೆಂದು ಹೀಗೆ ಕಂಡುಹಿಡಿದು ಗರ್ಭಧರಿಸುವ ಮೊದಲೇ ಸಮತೂಕ ಹೊಂದಲು ಪ್ರಯತ್ನಿಸಿ. ಸಮತೋಲಿತ ಹಾಗೂ ಪೌಷ್ಟಿಕ ಆಹಾರವನ್ನು ಸೇವಿಸಿ ಮತ್ತು ಗರ್ಭಧಾರಣೆಗೆ 2 ತಿಂಗಳ ಮೊದಲೇ ದಿನವೂ 5 ಮಿ.ಗ್ರಾಂನ ಫೋಲಿಕ್ ಆಸಿಡ್ ಮಾತ್ರೆ ತೆಗೆದುಕೊಳ್ಳುತ್ತಿರಿ. ತಜ್ಞವೈದ್ಯರನ್ನು ಸಂಪರ್ಕಿಸಿ. ಆದಷ್ಟು ಬೇಗ ಮಗು ಪಡೆದುಕೊಳ್ಳಿ.

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮ್ಮ ಮನಸ್ಸು ಯಾವುದನ್ನಾದರೂ ಇಷ್ಟಪಡದಿದ್ದರೆ, ಅದಕ್ಕೆ ಅನುಗುಣವಾಗಿ ನಡೆದುಕೊಳ್ಳಿ.

–ವಿಲಿಯಂ ಷೇಕ್ಸ್‌ಪಿಯರ್

ಮಾರ್ಗಸೂಚಿ: ಗೊಂದಲ ನಿವಾರಿಸಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ

ಕೋವಿಡ್‌– 19 ಹರಡುವಿಕೆಯನ್ನು ತಡೆಯಲು ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿರುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಸೋಂಕು ಹರಡುತ್ತಿರುವ ವೇಗ ಗಮನಿಸಿದರೆ ಇದು ಅನಿವಾರ್ಯವೂ ಹೌದು. ಆದರೆ ಈ ಕಟ್ಟುನಿಟ್ಟಿನ ಕ್ರಮಗಳು ಯಾವುವು ಎನ್ನುವುದನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ಮತ್ತು ವಿವರವಾಗಿ ತಿಳಿಸುವುದು ಸರ್ಕಾರದ ಕರ್ತವ್ಯವೂ ಹೌದಲ್ಲವೇ? ‘ಯಾವುದೇ ಕಾರಣಕ್ಕೂ ಲಾಕ್‌ಡೌನ್ ಮಾಡುವುದಿಲ್ಲ’ ಎಂದು ಮುಖ್ಯಮಂತ್ರಿ ಮತ್ತು ಕೆಲವು ಸಚಿವರು ಕೆಲವು ದಿನಗಳಿಂದ ಮತ್ತೆ ಮತ್ತೆ ಹೇಳಿದ್ದರು. ಕೋವಿಡ್ ಮಾರ್ಗಸೂಚಿಗಳನ್ನು ಪ್ರಕಟಿಸಿ ಸರ್ಕಾರ ಸುತ್ತೋಲೆಯನ್ನೂ ಹೊರಡಿಸಿತ್ತು. ಕಠಿಣ ನಿರ್ಬಂಧಗಳು ಯಾವುವು ಎನ್ನುವುದನ್ನು ವಿವರಿಸಲಾಗಿತ್ತು. ಆದರೆ, ಗುರುವಾರ ಮಧ್ಯಾಹ್ನದ ಹೊತ್ತಿಗೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಪೊಲೀಸರು ಹಠಾತ್ತಾಗಿ ಬೀದಿಗಿಳಿದು ಬಹುತೇಕ ಅಂಗಡಿ, ಮುಂಗಟ್ಟುಗಳನ್ನು ಬಲವಂತವಾಗಿ ಮುಚ್ಚಿಸಿರುವುದು ಸರ್ಕಾರದ ಕಾರ್ಯನಿರ್ವಹಣೆಯ ಗೊಂದಲವನ್ನು ಸೂಚಿಸುತ್ತದೆ. ಕೆಲವು ನಗರಗಳಲ್ಲಿ ವರ್ತಕರು ಮತ್ತು ಗ್ರಾಹಕರ ಮೇಲೆ ಲಾಠಿ ಬೀಸಿರುವುದೂ ವರದಿಯಾಗಿದೆ. ಪೊಲೀಸರ ಈ ಕ್ರಮವು ಸರ್ಕಾರವು ದಿಢೀರನೆ ಲಾಕ್‌ಡೌನ್ ಜಾರಿಗೆ ತಂದಿತೇ ಎನ್ನುವ ಅನುಮಾನವನ್ನೂ ಸಾರ್ವಜನಿಕರಲ್ಲಿ ಮೂಡಿಸಿತು. ಕೋವಿಡ್ ಹಾವಳಿಯಿಂದಾಗಿ ತೀವ್ರ ಸಂಕಷ್ಟದಲ್ಲಿರುವ ಜನರಲ್ಲಿ ಪೊಲೀಸರ ಈ ಏಕಾಏಕಿ ಕಾರ್ಯಾಚರಣೆಯು ಇನ್ನಷ್ಟು ಆತಂಕ ಮೂಡಿಸಿತು. ಸಾರ್ವಜನಿಕರನ್ನು, ಉದ್ಯಮಿಗಳನ್ನು ಮತ್ತು ವ್ಯಾಪಾರಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರಿಯಾದ ಮುನ್ನೆಚ್ಚರಿಕೆಗಳನ್ನು ಕೈಗೊಂಡಿದ್ದಿದ್ದರೆ ಇಂತಹ ಅವ್ಯವಸ್ಥೆ ಸೃಷ್ಟಿಯಾಗುತ್ತಿರಲಿಲ್ಲ. ಸರ್ಕಾರವು ಪದೇ ಪದೇ ಮಾರ್ಗಸೂಚಿಗಳನ್ನು ಪರಿಷ್ಕರಿಸುತ್ತಿರುವುದೂ ಗೊಂದಲಗಳಿಗೆ ಕಾರಣವಾಗಿದೆ. ‘ಕೈಗಾರಿಕಾ ಚಟುವಟಿಕೆಗಳಿಗೆ ಯಾವುದೇ ಅಡ್ಡಿ ಇಲ್ಲ ಎಂದು ಸರ್ಕಾರ ಹೇಳಿದೆ. ಆದರೆ, ಕೈಗಾರಿಕೆಗಳು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಇರುವ ಮಾರುಕಟ್ಟೆಗಳನ್ನು ಬಂದ್ ಮಾಡಲಾಗಿದೆ. ಉತ್ಪನ್ನಗಳನ್ನು ಮಾರಲು ಆಗದಿದ್ದರೆ ನೌಕರರಿಗೆ ಸಂಬಳ ಕೊಡುವುದು ಹೇಗೆ’ ಎಂಬ ಉದ್ಯಮಿಗಳ ಪ್ರಶ್ನೆ ಸೂಕ್ತವಾಗಿದೆ. ಇಂತಹ ಸಾಧ್ಯತೆ ಕುರಿತು ಮುಂಚಿತವಾಗಿ ತಿಳಿಸಬೇಕಾದುದು ಸರ್ಕಾರದ ಕರ್ತವ್ಯ. ಮದುವೆಗಳಿಗೆ ಷರತ್ತುಸಹಿತ ಅನುಮತಿ ನೀಡಿರುವ ಸರ್ಕಾರವೇ ಮದುವೆ ಸಾಮಗ್ರಿ ಖರೀದಿಗೆ ಬಂದ ಜನರನ್ನು ಲಾಠಿ ಬೀಸಿ ಚದುರಿಸಿದ್ದನ್ನು ಸಮರ್ಥಿಸಲಾಗದು. ಮಾರ್ಗಸೂಚಿ ಮತ್ತು ಅದರ ಅನುಷ್ಠಾನದ ಕುರಿತು ಜಿಲ್ಲಾ ಆಡಳಿತದ ಮಟ್ಟದಲ್ಲಿ ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ಮೊದಲೇ ಪ್ರಕಟಿಸಿದ್ದರೆ ಜನರಲ್ಲಿ ಇಷ್ಟೊಂದು ಗೊಂದಲ ಮೂಡುತ್ತಿರಲಿಲ್ಲ. ಉದ್ಯಮ ಮತ್ತು ವರ್ತಕ ಸಮುದಾಯದ ಪ್ರಾತಿನಿಧಿಕ ಸಂಸ್ಥೆಗಳ ಮೂಲಕ ಈ ಕ್ರಮಗಳ ಸ್ಪಷ್ಟ ವಿವರಗಳನ್ನು ಸಂಬಂಧಿಸಿದವರಿಗೆ ತಲುಪಿಸುವ ಕೆಲಸವೂ ಆಗಬೇಕಿತ್ತು.



ಸೋಂಕು ಹರಡುವಿಕೆ ತಡೆಗೆ ಸ್ವಯಂಶಿಸ್ತು ಮುಖ್ಯ. ಅದು ನಮ್ಮ ಕರ್ತವ್ಯವೂ ಹೌದು

ಕೋವಿಡ್– 19 ಸೋಂಕು ರಾಜ್ಯದಲ್ಲಿ ಅತ್ಯಂತ ವೇಗವಾಗಿ ಹರಡುತ್ತಿದೆ. ಪ್ರತಿದಿನ ಹೊಸದಾಗಿ ಸೋಂಕಿಗೆ ಒಳಗಾಗುತ್ತಿರುವವರ ಸಂಖ್ಯೆ 25 ಸಾವಿರದ ಆಸುಪಾಸಿಗೆ ಬಂದಿದೆ. ಪ್ರತಿದಿನದ ಸಾವಿನ ಸಂಖ್ಯೆ ಸತತವಾಗಿ ನೂರರ ಗಡಿ ದಾಟಿದೆ. ಆರೋಗ್ಯ ಕ್ಷೇತ್ರದಲ್ಲಿ ತುರ್ತುಪರಿಸ್ಥಿತಿಯ ವಾತಾವರಣವಿದೆ ಎನ್ನುವುದನ್ನು ಜನರೂ ಅರ್ಥ ಮಾಡಿಕೊಳ್ಳಬೇಕು. ಸೋಂಕು ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು, ಜನರ ಸಹಕಾರವಿಲ್ಲದೆ ಪರಿಣಾಮಕಾರಿಯಾಗಿ ಜಾರಿಗೆ ಬರಲು ಸಾಧ್ಯವಿಲ್ಲ. ವಾರಾಂತ್ಯದ ಲಾಕ್‌ಡೌನ್ ಮತ್ತು ರಾತ್ರಿ ವೇಳೆಯ ಕರ್ಫ್ಯೂ ಎರಡೂ ಪರಿಣಾಮಕಾರಿಯಾಗಿ ಜಾರಿಗೆ ಬರುವುದು ಈ ದಿಸೆಯಲ್ಲಿ ಬಹಳ ಮುಖ್ಯವಾದುದು. ಮಾರ್ಗಸೂಚಿ ಪಾಲನೆಗೆ ಸಾರ್ವಜನಿಕರು ಮನಃಪೂರ್ವಕವಾಗಿ ಸ್ಪಂದಿಸಬೇಕಾದ ತುರ್ತು ಸಂದರ್ಭ ಇದು. ಸೋಂಕು ಹರಡುವಿಕೆ ತಡೆಗೆ ಸ್ವಯಂಶಿಸ್ತು ಮುಖ್ಯ. ಅದು ನಮ್ಮ ಕರ್ತವ್ಯವೂ ಹೌದು. ಭಾಗಶಃ ಲಾಕ್‌ಡೌನ್ ಎನ್ನಬಹುದಾದ ಈ ಪರಿಸ್ಥಿತಿಯ ನಿರ್ವಹಣೆಗೆ ಸರ್ಕಾರವು ಜನರನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇನ್ನೊಂದೆಡೆ ಕೋವಿಡ್ ರೋಗಿಗಳ ಆರೈಕೆಯಲ್ಲಿ ಆಗುತ್ತಿರುವ ಲೋಪದೋಷಗಳನ್ನು ಕೂಡಲೇ ಸರಿಪಡಿಸಬೇಕು. ಅವರಿಗೆ ಬೇಕಾಗಿರುವ ಔಷಧ, ಆಮ್ಲಜನಕ ಪೂರೈಕೆಗೂ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ಪೂರ್ಣ ವಿಫಲವಾಗಿದೆ ಎನ್ನುವ ಅನುಮಾನಗಳು ಜನರಲ್ಲಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸಚಿವರು, ಶಾಸಕರು ಸಹಿತ ಜನಪ್ರತಿನಿಧಿಗಳು ಜನರ ಸಂಪರ್ಕಕ್ಕೆ ಸದಾ ಲಭ್ಯವಿದ್ದು ಅವರ ಸಂಕಷ್ಟಕ್ಕೆ ಸ್ಪಂದಿಸಬೇಕು. ಆ ಮೂಲಕ ವ್ಯವಸ್ಥೆಯ ಬಗ್ಗೆ ವಿಶ್ವಾಸ ಕುದುರಿಸಲು ಯತ್ನಿಸಬೇಕು.

ದಿನದ ಟ್ವೀಟ್

ನಿಷ್ಪ್ರಯೋಜಕ ಅಸ್ತ್ರ



ಭಾರತ ಸೇರಿದಂತೆ ವಿಶ್ವದಾದ್ಯಂತ ಎಲ್ಲಾ ಕೋವಿಡ್– 19 ರೋಗಿಗಳ ಚೇತರಿಕೆಗಾಗಿ ನಾವು ಪ್ರಾರ್ಥಿಸುತ್ತೇವೆ. ಆದರೆ, ಕೆಲವು ವಿಷಯಗಳ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಬೇಕಾದ ಸಮಯ ಇದು. ಭಾರತ ಮತ್ತು ಪಾಕಿಸ್ತಾನವು ಪರಮಾಣು ಶಕ್ತ ರಾಷ್ಟ್ರಗಳು. ಆದರೆ ಸಾಂಕ್ರಾಮಿಕದ ಈ ಸಮಯದಲ್ಲಿ ಒಂದು ರಾಷ್ಟ್ರವು ಆಮ್ಲಜನಕದ ಕೊರತೆಯನ್ನು, ಮತ್ತೊಂದು ಲಸಿಕೆ ಕೊರತೆಯನ್ನು ಎದುರಿಸುತ್ತಿವೆ. ಅಣ್ವಸ್ತ್ರಗಳು ನಿಷ್ಪ್ರಯೋಜಕವಾಗಿವೆ.

ಹಮೀದ್ ಮೀರ್, ಪಾಕಿಸ್ತಾನದ ಜಿಯೊ ಟಿ.ವಿ. ವರದಿಗಾರ

25 ವರ್ಷಗಳ ಹಿಂದೆ

ಬುಧವಾರ, 24-4-1996

• ಜಯಾ ಅನರ್ಹತೆ ಪ್ರಶ್ನೆ ಆಯೋಗದ ತೀರ್ಮಾನಕ್ಕೆ

ನವದೆಹಲಿ, ಏ. 23 (ಪಿಟಿಐ)– ತಮಿಳು ನಾಡು ಮುಖ್ಯಮಂತ್ರಿ ಜಯಲಲಿತಾ ಅವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆ ಬಗ್ಗೆ ಬಹುಸದಸ್ಯರ ಚುನಾವಣಾ ಆಯೋಗ ನಿರ್ಧರಿಸಬೇಕು ಎಂದು ಸುಪ್ರೀಂ ಕೋರ್ಟ್ ಇಂದು ಮಹತ್ವದ ತೀರ್ಪು ನೀಡಿದೆ.

ತಮ್ಮನ್ನು ಅನರ್ಹಗೊಳಿಸುವ ವಿಷಯದಲ್ಲಿ ಮುಖ್ಯ ಚುನಾವಣಾ ಕಮಿಷನರ್ ಟಿ.ಎನ್.ಶೇಷನ್ ಅವರು ಪೂರ್ವಗ್ರಹಪೀಡಿತರಾಗಿದ್ದಾರೆ ಎಂಬ ಜಯಲಲಿತಾ ಅವರ ಮನವಿಯನ್ನು ಮದ್ರಾಸ್ ಹೈಕೋರ್ಟ್ ಎತ್ತಿಹಿಡಿದಿರುವ ಹಿನ್ನೆಲೆಯಲ್ಲಿ, ಆಯೋಗದ ಉಳಿದ ಇಬ್ಬರು ಸದಸ್ಯರು (ಶೇಷನ್ ಹೊರತುಪಡಿಸಿ) ಸಭೆ ಸೇರಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸೂಚಿಸಿದೆ.

• ಶೀಲಾ ಕೌಲ್‌ಗೆ ನಿರೀಕ್ಷಣಾ ಜಾಮೀನು

ಶಿಮ್ಲಾ, ಏ. 23 (ಪಿಟಿಐ)– ವಸತಿ ಹಗರಣದಲ್ಲಿ ಆರೋಪಕ್ಕೊಳಗಾಗಿರುವ ಮಾಜಿ ರಾಜ್ಯಪಾಲೆ ಶೀಲಾ ಕೌಲ್ ಅವರಿಗೆ ಹಿಮಾಚಲ ಹೈಕೋರ್ಟ್ ಇಂದು ನಿರೀಕ್ಷಣಾ ಜಾಮೀನು ನೀಡಿತು.

ಇದೇ ವೇಳೆ ರಾಜ್ಯಪಾಲರ ಸಂವಿಧಾನಾತ್ಮಕ ವಿನಾಯಿತಿ ಬಗ್ಗೆ ಪರಿಶೀಲನೆ ಇಲ್ಲ ಎಂದೂ ತೀರ್ಪಿನಲ್ಲಿ ಹೇಳಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 24-4-1971

• ಮುಜೀಬ್ ಜೀವಂತ, ಸುರಕ್ಷಿತ

ನವದೆಹಲಿ, ಏ. 23– ಬಂಗಬಂಧು ಮುಜೀಬುರ್ ರಹಮಾನ್‌ರವರು ‘ಜೀವಂತವಾಗಿದ್ದಾರೆ. ಸುರಕ್ಷಿತ ಸ್ಥಳವೊಂದರಲ್ಲಿದ್ದಾರೆ’ ಎಂದು ಅವರ ಡ್ರೈವರ್, ಪಾಕಿಸ್ತಾನ್ ರಾಷ್ಟ್ರೀಯ ಅಸೆಂಬ್ಲಿ ಮತ್ತು ಪ್ರದೇಶ ಶಾಸನಸಭೆಯ ಕೆಲವು ಸದಸ್ಯರಿಗೆ ತಿಳಿಸಿದ್ದಾನೆ.

ಶಾಸಕರುಗಳಾದ ಸದಾಖತ್ ಹುಸೇನ್, ನುರ್-ಉಲ್-ಇಸ್ಲಾಂ ಮತ್ತು ವಾಲಿ-ಉಲ್-ರಹಮಾನ್‌ರವರು ಈ ವಿಚಾರವನ್ನು ಈ ತಿಂಗಳ ಮೊದಲಲ್ಲಿ ಗೋಲ್ಪಾರ ಜಿಲ್ಲೆಯಲ್ಲಿ ಅವರನ್ನು ಭೇಟಿ ಮಾಡಿದ್ದ ಅಸ್ಸಾಂನ ಪುನರ್ವಸತಿ ಶಾಖೆ ಸಚಿವ ಸಾಧನರಂಜನ್ ಸರ್ಕಾರ್‌ರವರಿಗೆ ತಿಳಿಸಿದರು. ಇಂದು ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಸರ್ಕಾರ್‌ರವರು ಈ ವಿಚಾರ ತಿಳಿಸಿದರು.

• ರಷ್ಯಾದಿಂದ ಮೂವರು ಯಾತ್ರಿಗಳ ಮತ್ತೊಂದು ನೌಕೆ ಬಾಹ್ಯಾಕಾಶಕ್ಕೆ

ಮಾಸ್ಕೊ, ಏ. 23– ನಾಲ್ಕು ದಿನಗಳ ಹಿಂದೆ ಅಂತರಿಕ್ಷಕ್ಕೆ ಪ್ರಯೋಗಿಸಿದ ಸ್ವಯಂಚಾಲಿತ ‘ಸೆಲ್ಯೂಟ್’ ಬಾಹ್ಯಾಕಾಶ ನಿಲ್ದಾಣದ ಜತೆ ಸೇರಿಕೊಳ್ಳುವುದಕ್ಕಾಗಿ ಇಂದು ಮುಂಜಾನೆ ಮೂವರು ಗಗನಯಾತ್ರಿಗಳಿದ್ದ ‘ಸೋಯುಜ್-19’ ಆಕಾಶನೌಕೆಯೊಂದನ್ನು ರಷ್ಯಾ ಪ್ರಯೋಗಿಸಿತೆಂದು ‘ತಾಸ್’ ಸುದ್ದಿಸಂಸ್ಥೆ ಇಂದು ಪ್ರಕಟಿಸಿತು.

‘ಸೆಲ್ಯೂಟ್’ ಜತೆ ಸಂಪರ್ಕ ಕಲ್ಪಿಸಿಕೊಂಡು ಜಂಟಿ ಪ್ರಯೋಗಗಳನ್ನು ಕೈಗೊಳ್ಳುವ ‘ಸೋಯುಜ್-10’ರಲ್ಲಿ ಕಮಾಂಡರ್ ವಾಲ್ಡಿಮೀರ್ ಷಟ್‌ಲಾವ್ (43), ಫ್ಲೈಟ್ ಎಂಜಿನಿಯರ್ ಅಲೆಕ್ಸಿ ಯಲಿಸೇವ್ (36) ಮತ್ತು ಟೆಸ್ಟ್ ಎಂಜಿನಿಯರ್ ನಿಕೋಲಾಯ್ ರುಕಾವಿಸ್ನಿಕಾವ್ ಇದ್ದಾರೆ.

ಬಲಿಷ್ಠ ನಾಯಕತ್ವ ಎಂದರೆ ಪ್ರಬುದ್ಧತೆ, ವಿವೇಕ, ವಿವೇಚನೆಯೇ ವಿನಾ ಹುಚ್ಚು ಧೈರ್ಯ ಅಲ್ಲ

ಮತ್ತೆ ಮತ್ತೆ ನೆನಪಾಗುವ ನೀರೊ



ಅನುರಣನ

ಎ. ನಾರಾಯಣ

ರೋಮ್ ಉರಿಯುತ್ತಿದ್ದಾಗ ಪಿಟೀಲು ಬಾರಿಸುತ್ತಿದ್ದ ಎನ್ನಲಾಗುವ ನೀರೊ ದೊರೆಯ ಹೆಸರನ್ನು ಇತ್ತೀಚೆಗೆ ಮತ್ತೆ ಮತ್ತೆ ಕೇಳುತ್ತಿದ್ದೇವೆ. ರೋಮ್‌ನಲ್ಲಿ ನೀರೊ ಎಂಬ ದೊರೆ ಇದ್ದ ಎನ್ನುವುದಕ್ಕೆ ಚರಿತ್ರೆಯಲ್ಲಿ ದಾಖಲೆಗಳು ಸಿಗುತ್ತವೆ. ಆತನ ಕುರಿತಾಗಿ ಇರುವ ಚಾರಿತ್ರಿಕ ಆಪಾದನೆಯ ಬಗ್ಗೆ ಸಂಶಯ ಇದೆ. ನಾವಿರುವ ಕಾಲವೇ ಅಂತಹದ್ದು. ನಮ್ಮ ಕಣ್ಣೆದುರಿಗೆ ನಡೆಯುತ್ತಿರುವ ಆಗುಹೋಗುಗಳ ಕುರಿತಾಗಿ ಬರುವ ವರ್ತಮಾನವನ್ನೇ ನಂಬಲಾಗದ ಸ್ಥಿತಿಯಲ್ಲಿರುತ್ತಾ, ಎರಡು ಸಾವಿರ ವರ್ಷಗಳ ಹಿಂದೆ ಆಗಿಹೋದ ಸರ್ವಾಧಿಕಾರಿಯೊಬ್ಬನ ಖಯಾಲಿಯ ಬಗ್ಗೆ ಇರುವ ವರ್ಣರಂಜಿತ ಕತೆಯನ್ನು ಹೇಗೆ ನಂಬುವುದು?

ಅದೇನೇ ಇರಲಿ. ಒಂದು ರೂಪಕವಾಗಿ ನೀರೊ ದೊರೆಯ ಹೆಸರಿಗೆ ಬೆಸೆದಿರುವ ಈ ಆಪಾದನೆ ಇದೆಯಲ್ಲಾ ಅದೊಂದು ಶಾಶ್ವತ ಸತ್ಯ. ಆಳುವವರು ಇರುವತನಕವೂ ನಾಡಿಗೆ ಬೆಂಕಿ ಬಿದ್ದಾಗ ಪಿಟೀಲು ಬಾರಿಸುವ ನೀರೊಗಳೂ ಇರುತ್ತಾರೆ. ಚರಿತ್ರೆಯುದ್ದಕ್ಕೂ ಅದೆಷ್ಟು ನೀರೊಗಳು ಆಗಿಹೋಗಿದ್ದಾರೋ ಏನೋ? ನೀರೊನ ಜಾಗದಲ್ಲಿ ಇನ್ಯಾರೋ ನಾಯಕ ಇರುತ್ತಾನೆ, ರೋಮ್‌ನ ಬದಲಿಗೆ ಇನ್ಯಾವುದೋ ದೇಶ ಇರುತ್ತದೆ. ಬೆಂಕಿಗೆ ಬದಲು ಜನರನ್ನು ಬೆಂಕಿಯಷ್ಟೇ ಬಾಧಿಸಬಹುದಾದ ಇನ್ಯಾವುದೋ ಸಮಸ್ಯೆ ಇರುತ್ತದೆ.

ನಾಯಕ ಅಂತ ಪ್ರತಿಷ್ಠಾಪಿಸಲ್ಪಟ್ಟಿರುವ ವ್ಯಕ್ತಿ ತನ್ನ ಕಾಲದ ಅತ್ಯಂತ ಜರೂರಿನ ಸಮಸ್ಯೆಯನ್ನು ಪರಿಹರಿಸುವತ್ತ ನಿರ್ಲಕ್ಷ್ಯ ತೋರಿ ತನ್ನ ಮನರಂಜನೆಗಾಗಿಯೋ ತನ್ನ ಅಧಿಕಾರ ವಿಸ್ತರಿಸುವುದಕ್ಕಾಗಿಯೋ ಅಥವಾ ತನ್ನ ನಂಬಿಕೆಗಳ ಬೆನ್ನುಹತ್ತಿಯೋ ತನ್ನ ಸಮಯವನ್ನೂ ಖಜಾನೆಯ ಹಣವನ್ನೂ ಪೋಲು ಮಾಡುತ್ತಿದ್ದಾನೆ ಎಂದಾದರೆ ಆತ ನೀರೊನೇ ಆಗಿರುತ್ತಾನೆ. ನಾಡನ್ನು ತತ್‌ಕ್ಷಣಕ್ಕೆ ಬಾಧಿಸುವ ಸಮಸ್ಯೆಯ ಪರಿಹಾರಕ್ಕಿಂತ ಹೆಚ್ಚಿನ ಇನ್ಯಾವುದೇ ಆದ್ಯತೆ ಅಧಿಕಾರಸ್ಥನೊಬ್ಬನಿಗೆ ಇರಲೇಬಾರದು ಎನ್ನುವ ಅರ್ಥದಲ್ಲಿ ನೀರೊನ ಕತೆಯಲ್ಲಿ ಬೆಂಕಿಯ ಉದಾಹರಣೆ ಇದೆ.

ರಾಜಕೀಯ ಅರ್ಥಶಾಸ್ತ್ರದಲ್ಲಿ ಒಂದು ಸಿದ್ಧಾಂತವಿದೆ. ಅದರ ಪ್ರಕಾರ, ಪ್ರಜಾತಂತ್ರದಲ್ಲಿ ನೀರೊಗಳಿರುವುದಿಲ್ಲ. ಆಳುವವರನ್ನು ನೀರೊನ ಖಯಾಲಿ ಸದಾ ಕಾಡುತ್ತಿರುತ್ತದೆ ಎನ್ನುವ ಕಾರಣಕ್ಕೇ ಮಾನವ ಸಮಾಜವು ಪ್ರಜಾತಂತ್ರ ಎನ್ನುವ ಆಡಳಿತ ವ್ಯವಸ್ಥೆಯನ್ನು ಆವಿಷ್ಕರಿಸಿಕೊಂಡಿದ್ದು. ಪ್ರಜಾತಂತ್ರದಲ್ಲಿ ಸ್ವತಂತ್ರ ಮಾಧ್ಯಮಗಳಿರುವುದರಿಂದ ದೊರೆಯೊಬ್ಬ ನೀರೊನ ಹಾಗೆ ವರ್ತಿಸಿದಾಕ್ಷಣ ಆ ಸುದ್ದಿ ಜಗಜ್ಜಾಹೀರಾಗಿ ಆತ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾನೆ ಮತ್ತು ಮುಂದೆ ಅಧಿಕಾರವನ್ನೂ ಕಳೆದುಕೊಳ್ಳುತ್ತಾನೆ ಎನ್ನುವ ಕಾರಣಕ್ಕೆ, ನೀರೊನ ಹಾಗಿರುವ ಮನಃಸ್ಥಿತಿ ಇರುವವರೂ ಪ್ರಜಾತಂತ್ರದಲ್ಲಿ ನೀರೊನ ಹಾಗೆ ವರ್ತಿಸುವ ಧಾರ್ಷ್ಟ್ಯ ತೋರಿಸುವುದಿಲ್ಲ ಎನ್ನುವ ವಾದ ಅದು.

ಇದನ್ನೇ ಮುಂದಿಟ್ಟುಕೊಂಡು ಅಮರ್ತ್ಯ ಸೇನ್ ಮುಂತಾದ ಅರ್ಥಶಾಸ್ತ್ರಜ್ಞರು ಪ್ರಜಾತಂತ್ರ ಇದ್ದಲ್ಲಿ ಕ್ಷಾಮ (famine) ತಲೆದೋರುವುದು ವಿರಳ ಎಂದು ಅಂಕಿ-ಅಂಶಗಳ ಆಧಾರವನ್ನು ಮುಂದಿಟ್ಟುಕೊಂಡು ಪ್ರತಿಪಾದಿಸಿದ್ದು. ಬರಗಾಲ ಬರುವುದು ಪ್ರಾಕೃತಿಕ ಕಾರಣಗಳಿಂದಾಗಿ. ಆಹಾರದ ಅಥವಾ ಅಗತ್ಯ ವಸ್ತುಗಳ ಕ್ಷಾಮ ಉಂಟಾಗುವುದು ಆಳುವವರು ನೀರೊನಂತೆ ವರ್ತಿಸುವುದು ಹೆಚ್ಚಾದಾಗ. ಆದುದರಿಂದ ನೀರೊಗಳಿಲ್ಲದಲ್ಲಿ ಕ್ಷಾಮ-ಡಾಮರಗಳಿಗೂ ಅವಕಾಶವಿಲ್ಲ ಎನ್ನುವುದು ಸಿದ್ಧಾಂತ.

ವರ್ತಮಾನವು ಬೇರೆಯೇ ಕತೆ ಹೇಳುತ್ತಿದೆ. ಈ ಸಿದ್ಧಾಂತ ನಮ್ಮ ಕಣ್ಣೆದುರಿಗೆ ಸುಳ್ಳಾದಂತೆ ಕಾಣಿಸುತ್ತಿದೆ. ಸಣ್ಣ ಪ್ರಮಾಣದ ನೀರೊ ನಡೆಗಳನ್ನು ಪ್ರಜಾತಂತ್ರ ವ್ಯವಸ್ಥೆಯೊಳಗೂ ಎಲ್ಲ ಕಾಲದಲ್ಲೂ ಕಂಡಿದ್ದೇವೆ. ಈಗ ಹಾಗಲ್ಲ, ಪ್ರಜಾತಂತ್ರ ಜೀವಂತವಾಗಿರುತ್ತಲೇ, ಮಾಧ್ಯಮಗಳು ದಿನರಾತ್ರಿ ಭೋರ್ಗರೆಯುತ್ತಿರುವಾಗಲೇ, ರೋಮ್‌ನ ಬೆಂಕಿಗಿಂತ ದೊಡ್ಡ ದುರಂತ ದೇಶವನ್ನಿಡೀ ಕಾಡುತ್ತಿರುತ್ತಲೇ ಆಳುವವರು ನೀರೊಗಿಂತಲೂ ಗಟ್ಟಿಯಾಗಿ ಪಿಟೀಲು ಮೀಟಿದರೂ ಏನೂ ಆಗುವುದಿಲ್ಲ. ಮಾಧ್ಯಮಗಳಿವೆ ನಿಜ. ಆದರೆ ಅವುಗಳು ಪಿಟೀಲು ಧ್ವನಿಗೆ ಮೈ ಮರೆಯುತ್ತವೆ ಅಥವಾ ನೀರೊನ ದಾಸ್ಯವನ್ನು ಮನಸಾ ಒಪ್ಪಿಕೊಂಡು, ಉರಿಯುವ ಬೆಂಕಿಯತ್ತ ನಿರ್ಲಕ್ಷ್ಯ ತೋರುತ್ತಾ ಮೀಟುವ ಪಿಟೀಲಿನ ಧ್ವನಿಯನ್ನಷ್ಟೇ ವರದಿ ಮಾಡುತ್ತವೆ. ಸಿದ್ಧಾಂತಗಳು ನಾವು ಈವರೆಗೆ ಅಂದುಕೊಂಡಂತೆ ಇಲ್ಲ. ಪ್ರಜಾತಂತ್ರ ನಾವು ಈವರೆಗೆ ಅಂದುಕೊಂಡಂತೆ ಜರುಗುವುದಿಲ್ಲ. ನೀರೊಗಳಿಗೆ ಯಾವ ಭಯವೂ ಇಲ್ಲ. ನೀರೊಗಳಿಗೆ ಬೆಂಬಲ ಕಡಿಮೆಯಾಗುವುದಿಲ್ಲ.

ವಾಸ್ತವದಲ್ಲಿ ನಾಯಕತ್ವದ ನೀರೊ ನಡೆಗಳಿಗಿಂತಲೂ ಹೆಚ್ಚು ಅಪಾಯ ಇರುವುದು ನೀರೊಗಳನ್ನೇ ಹೀರೊಗಳೆಂದು ಆರಾಧಿಸುವ ಗುಲಾಮಗಿರಿಯಲ್ಲಿ. ಮಾಡಬೇಕಾದದ್ದನ್ನು ಬಿಟ್ಟು ಇನ್ಯಾವುದನ್ನೋ ಮಾಡಿ ಎಡವಟ್ಟು ಮಾಡಿಕೊಳ್ಳುವ, ಎಡವಟ್ಟುಗಳತ್ತ ಸಾರ್ವಜನಿಕ ಗಮನ ಹರಿಯದಂತೆ ಇರಲು ಮತ್ತಿನ್ನೇನನ್ನೋ ಮಾಡುತ್ತಲೇ ಇರುವ ‘ಡಬಲ್ ನೀರೊ’ ನಡೆಗಳು ಈಗೀಗ ನಮ್ಮ ನುರಿತ ವಿಶ್ಲೇಷಕರ ದೃಷ್ಟಿಯಲ್ಲಿ ಬಲಿಷ್ಠ ನಾಯಕತ್ವದ ಸಂಕೇತಗಳಾಗುತ್ತವೆ.

ಇಂಗ್ಲಿಷ್ ಕವಿ ಅಲೆಕ್ಸಾಂಡರ್ ಪೋಪ್‌ನ ಮಾತೊಂದಿದೆ: fools rush in where angels fear to tread ಅಂತ. ಅಕ್ಷರಶಃ ಹೇಳುವುದಾದರೆ ಇದರ ಅರ್ಥ, ದೇವತೆಗಳೂ ಏನನ್ನು ಮಾಡಲು ಅಂಜುತ್ತಾರೋ ಅದನ್ನು ಮೂರ್ಖರು ಸಲೀಸಾಗಿ ಮಾಡಿಬಿಡುತ್ತಾರೆ ಎಂದು. ಈ ಮಾತಿನ ನಿಜ ಅರ್ಥ ಏನೆಂದರೆ, ತಿಳಿದವರು ಮತ್ತು ಅನುಭವಿಗಳು ಮನಃಪೂರ್ವಕವಾಗಿ ಮಾಡದೇ ಬಿಟ್ಟದ್ದನ್ನು ಅನನುಭವಿ, ಅರೆಬರೆ ಅರಿವು ಇರುವವರು ಅವಸರವಸರದಲ್ಲಿ ಮಾಡಿ ಮುಗಿಸಿ ತಾವೇನೋ ಸಾಧನೆ ಮಾಡಿದವರು ಎಂಬಂತೆ ಬಿಂಬಿಸಿಕೊಳ್ಳುತ್ತಾರೆ ಎಂದು. ಹೀಗೆ ಮಾಡುವುದನ್ನೇ ಬಲಿಷ್ಠ ನಾಯಕತ್ವ ಅಂತ ಆರಾಧಿಸುವುದಿದೆಯಲ್ಲಾ ಅಲ್ಲಿರುವುದು ನಿಜವಾದ ಅಪಾಯ.




ಅಷ್ಟಕ್ಕೂ, ಒಂದು ಪ್ರಜಾತಂತ್ರ ದೇಶದಲ್ಲಿ ಬಲಿಷ್ಠ ನಾಯಕತ್ವ ಎಂದರೆ ಏನು? ಅಗತ್ಯವಿಲ್ಲದ್ದನ್ನು ಈ ಕಾಲದ ಅಗತ್ಯ ಅಂತ ಜನರನ್ನು ನಂಬಿಸಿ, ಅವುಗಳನ್ನು ಮಾಡುತ್ತಾ ಹೋಗಿ, ತಾನಲ್ಲದೆ ಇನ್ಯಾರೂ ಇವುಗಳನ್ನೆಲ್ಲಾ ಮಾಡಲು ಸಾಧ್ಯವೇ ಇರಲಿಲ್ಲ ಅಂತ ಜನರನ್ನು ನಂಬಿಸಿದರೆ ಅದು ಬಲಿಷ್ಠ ನಾಯಕತ್ವದ ಮಾದರಿಯೇ? ಅಂತೆಯೇ ಕಾಲದ ನಿಜವಾದ ಅಗತ್ಯಗಳನ್ನು ತಿಳಿಯುವಲ್ಲಿ ಎಡವಿ, ತಿಳಿದರೂ ಅಂತಹ ಅಗತ್ಯಗಳನ್ನು ನಿರ್ಲಕ್ಷಿಸಿ, ಅಧಿಕಾರವನ್ನು ವಿಸ್ತರಿಸುವಲ್ಲೂ ಕೇಂದ್ರೀಕರಿಸುವಲ್ಲೂ ಮನನೆಟ್ಟು, ದೇಶದ ಸೂಕ್ಷ್ಮಾತಿಸೂಕ್ಷ್ಮ ಸಮತೋಲನಗಳನ್ನೆಲ್ಲಾ ಕೆಡವಿಹಾಕಿದರೆ ಅಲ್ಲಿಗೆ ಎಲ್ಲ ಸಮಸ್ಯೆಗಳೂ ಪರಿಹಾರ ಆದಂತೆ ಎನ್ನುವ ಅಮಲಿನಲ್ಲಿರುವ ನಾಯಕತ್ವದ ಮಾದರಿಯು ಬಲಿಷ್ಠ ನಾಯಕತ್ವದ ಮಾದರಿಯೇ?

ಅಮೆರಿಕದಂತಹ ದೇಶದ ಜನ ಕೇವಲ ನಾಲ್ಕೇ ನಾಲ್ಕು ವರ್ಷಗಳ ಅವಧಿಯಲ್ಲೇ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು, ಡೊನಾಲ್ಡ್ ಟ್ರಂಪ್ ಎಂಬ ಚುನಾಯಿತ ಸರ್ವಾಧಿಕಾರಿಗೆ ಗೇಟ್ ಪಾಸ್ ನೀಡಿದ್ದಾರೆ. ಟ್ರಂಪ್ ಅವರ ಆತ್ಮೀಯ ಮಿತ್ರರಾಗಿರುವ ನಾಯಕರು ಆಳುವ ಕೆಲವು ದೇಶಗಳಲ್ಲಿ ಇನ್ನೂ ಚುನಾಯಿತ ಸರ್ವಾಧಿಕಾರ ಎಂದರೆ ಏನು ಎನ್ನುವ ಜಿಜ್ಞಾಸೆ ನಡೆಯುತ್ತಿದೆ.

ಚುನಾಯಿತ ಸರ್ಕಾರವೊಂದು ಚುನಾಯಿತ ಸರ್ವಾಧಿಕಾರವಾಗುವುದು ಯಾವಾಗ ಎನ್ನುವ ನಿರ್ಣಯಕ್ಕೆ ಬರಬೇಕಾಗಿರುವುದು ತನ್ನನ್ನು ಟೀಕಿಸುವ ಎಷ್ಟು ಮಂದಿಯನ್ನು ಆ ಸರ್ಕಾರ ಬಂಧಿಸದೇ ಬಿಟ್ಟಿದೆ ಎನ್ನುವುದರ ಆಧಾರದ ಮೇಲಲ್ಲ. ಬದಲಿಗೆ, ಟೀಕಿಸಿದ ಎಷ್ಟು ಮಂದಿಯನ್ನು ಅದು ಬಂಧನದಲ್ಲಿ ಇಟ್ಟಿದೆ, ಹಾಗೆ ಬಂಧನಕ್ಕೊಳಗಾದವರನ್ನು ದೇಶದ ನ್ಯಾಯಾಂಗ ಹೇಗೆ ನಡೆಸಿಕೊಳ್ಳುತ್ತಿದೆ, ಆ ವಿಚಾರದಲ್ಲಿ ಮಾಧ್ಯಮಗಳು ಹೇಗೆ ವರ್ತಿಸುತ್ತಿವೆ ಎನ್ನುವುದರ ಆಧಾರದ ಮೇಲೆ. ಒಂದೆಡೆ ಆದ ನಷ್ಟಕ್ಕಿಂತ ಇನ್ನೊಂದೆಡೆ ಆದ ಲಾಭ ಹೆಚ್ಚಿದೆ ಎಂದರೆ ಉದ್ಯಮವೊಂದು ಚೆನ್ನಾಗಿದೆ ಅಂತ ಲೆಕ್ಕ ಹಾಕಬಹುದು. ಒಂದು ದೇಶವನ್ನು ಆ ರೀತಿ ಮೌಲ್ಯಮಾಪನ ಮಾಡಲು ಬರುವುದಿಲ್ಲ, ಮಾಡಬಾರದು. ದೇಶ ಬಲಿಷ್ಠವಾಗುವುದು ಪ್ರಬುದ್ಧ, ವಿವೇಚನಾಪೂರ್ಣ ಮತ್ತು ವಿವೇಕಯುತವಾದ ನಾಯಕತ್ವದಿಂದ. ಅಂತಹ ನಾಯಕತ್ವವು ದೇಶಕ್ಕೆ ಏನು ಅಗತ್ಯವಿದೆಯೋ ಅದನ್ನು ಮಾಡುತ್ತದೆ.

ನೀರೊ ಮಾದರಿಯ ಬಲಿಷ್ಠ ನಾಯಕತ್ವವು ಗಂಡಾಂತರದ ಕಾಲದಲ್ಲೂ ತನಗೇನು ಬೇಕೋ ಅದನ್ನೆಲ್ಲಾ ಮಾಡಿ ಮುಗಿಸಿದ ನಂತರ ದೇಶಕ್ಕೇನು ಅಗತ್ಯ ಎನ್ನುವ ಸಮಾಲೋಚನೆ ಪ್ರಾರಂಭಿಸುತ್ತದೆ. ಅಷ್ಟೊತ್ತಿಗೆ ದೇಶದಲ್ಲಿ ಉಸಿರಾಡಲು ಗಾಳಿಗೂ ತತ್ವಾರ ಬಂದಿರುತ್ತದೆ. ಬಲಿಷ್ಠ ನಾಯಕತ್ವದಿಂದ ದೇಶ ಬಲಿಷ್ಠವಾಗುತ್ತದೆ ಎನ್ನುವುದು ಒಂದು ಭ್ರಮೆ.

ಚುರುಮುರಿ



ಕನವರಿಕೆ ಕಥೆ!

• ಬಿ.ಎನ್.ಮಲ್ಲೇಶ್

‘ಲೇ ತೆಪರ, ನಿನ್ನಿ ಯಾಕಲೆ ಮನಿ ಹೊರಗೆ ಕಟ್ಟಿಮ್ಯಾಲ ಮಲಗಿದ್ದಿ? ಪಮ್ಮಕ್ಕ ಚಾಪಿ ದಿಂಬು ಹೊರಗಾಕಿದ್ಲೇನು?’ ಗುಡ್ಡೆ ನಗುತ್ತಾ ವಿಚಾರಿಸಿದ.

‘ಅದೂ... ಹಂಗಲ್ಲಲೆ, ರಾತ್ರಿ ಮಲಗಿದ್ದಾಗ ನಾನು ಲಾಕ್‌ಡೌನು, ಕರ್ಫ್ಯೂ, ಆಕ್ಸಿಜನ್ನು, ವೆಂಟಿಲೇಟ್ರು, ಬೆಡ್ಡು ಅಂತೆಲ್ಲ ಒಂದೇ ಸಮ ಕನವರಿಸ್ತಿದ್ನೆಂತೆ. ನಿದ್ದಿ ಹಾಳಾತು ಅಂತ ಪಮ್ಮಿ ಸಿಟ್ಟಿಗೆದ್ದಿದ್ಲು...’

‘ಗೊತ್ತಾತು ಬಿಡು, ಮೊದ್ಲೇ ಟಿ.ವಿ ರಿಪೋಟ್ರು ನೀನು. ಹಗಲು ಕ್ಯಾಮೆರಾ ಮುಂದೆ ಒದರ್ತಿ, ರಾತ್ರಿ ಹಾಸಿಗೆ ಮ್ಯಾಲ... ನಿಂದಿರ್‍ಲಿ, ನನ್ ಹೆಂಡ್ತಿ ಕತಿ ಇನ್ನೂ ದೊಡ್ಡದು. ರಾತ್ರಿ ಎಲ್ಲ ನಿದ್ರ್ಯಾಗ ನಾಗಿಣಿ, ನಾಗಕನ್ಯೆ, ನಾಗಭೈರವಿ, ನಾಗಮತ್ಸರ ಅಂತ ಕನವರಿಸ್ತಿರ್ತಾಳ. ಹಾಸಿಗೆ ತುಂಬ ಬರೀ ಧಾರಾವಾಹಿ ಹಾವುಗಳೇ...’ ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಆಗ ದುಬ್ಬೀರ ‘ನಿಮ್ದು ಹಂಗಿರ್‍ಲಿ, ನನ್ ಸಣ್ಣ ಮಗ ಬರೀ ಐಪಿಎಲ್ ಕ್ರಿಕೆಟ್ ನೋಡ್ತಾನ. ರಾತ್ರಿ ಎಲ್ಲ ಸಿಕ್ಸು, ಫೋರು, ನೋಬಾಲು ಅಂತ ಕನವರಿಸ್ತಾನ. ಮೊನ್ನೆ ರಾತ್ರಿ ‘ಫ್ರೀ ಹಿಟ್’ ಅಂತ ಜಾಡ್ಸಿ ಒದ್ದಪ. ಅವತ್ತಿಂದ ಅವನ್ನ ಬ್ಯಾರೆ ಮಲಗಿಸ್ತಿದೀವಿ’ ಎಂದ.

‘ಒಳ್ಳೆ ಕತಿ, ಸ್ವಲ್ಪ ದಿನ ನಮ್ ಗುಡ್ಡೆ ಕನಸಿನಾಗೆ ಬರೀ ಸೀಡಿ ಓಡಾಡ್ತಿದ್ದವು ಗೊತ್ತಾ?’ ಎಂದ ಕೊಟ್ರೇಶಿ ನಗುತ್ತ.

‘ಸೀಡಿನಾ? ಯಾವ ಸೀಡಿ? ಎಲ್ಲ ಮರೆತೇ ಹೋಗೇತಪ...’ ಗುಡ್ಡೆಗೂ ನಗು...

‘ನಿಮಗೆ ಗೊತ್ತಾ? ನಮ್ಮ ಸಣ್ಣೀರನ ಕನಸಿನಾಗೆ ದಿನಾ ಶಿವ ಪ್ರತ್ಯಕ್ಷ ಆಗ್ತದಾನಂತೆ’, ತೆಪರೇಸಿ ಹೊಸ ವಿಷಯ ಪ್ರಸ್ತಾಪಿಸಿದ.

‘ಏನು? ಶಿವಾನ? ಸಣ್ಣೀರನ ಕನಸಿಗಾ? ಏನದು ಬಿಡಿಸಿ ಹೇಳಲೆ’ ದುಬ್ಬೀರನಿಗೆ ಕುತೂಹಲ.

‘ಶಿವ ಅಂದ್ರೆ ಶಿವಪರಮಾತ್ಮ ಅಲ್ಲ, ಬಿಡದಿ ಡೈಲಿ ಆನಂದ ಸ್ವಯಂಘೋಷಿತ ಶಿವ. ಅಲ್ಲೆಲ್ಲೋ ‘ಕೈಲಾಸ’ ಅಂತ ದೇಶ ಕಟ್ಟಿದಾನಂತಲ್ಲ. ಅಲ್ಲಿ ಕೊರೊನಾ ಇಲ್ಲಂತೆ. ಕನಸಿನಾಗೆ ಇವ್ನು ಅವನ ಕೈಲಾಸಕ್ಕೆ ಬರ್ತೀನಿ ಅಂತಾನಂತೆ, ಅವ್ನು ಬ್ಯಾಡ ಅಂತಾನಂತೆ. ಸುಮ್ನೆ ಸಣ್ಣೀರನ್ನ ನಮ್ಮ ಒರಿಜಿನಲ್ ಕೈಲಾಸಕ್ಕೆ ಕಳಿಸಿದ್ರೆ ಹೆಂಗೆ?’ ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಲಸಿಕೆಗೆ ಮೊದಲಾಗಲಿ ರಕ್ತದಾನ

ಆಸ್ಪತ್ರೆಗಳಲ್ಲಿ ರಕ್ತದ ಅಗತ್ಯ ಪೂರೈಸುವ ಸಲುವಾಗಿ ಆರೋಗ್ಯವಂತ ನಾಗರಿಕರು ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳುವ ಮೊದಲೇ ರಕ್ತದಾನ ಮಾಡುವ ಬಗ್ಗೆ ಚಿಂತನೆ ಮಾಡಬೇಕು

• ಡಾ. ವಿನಯ ಶ್ರೀನಿವಾಸ್


ಕಳೆದ ಲಾಕ್‌ಡೌನ್‌ನಲ್ಲಿ ಸರ್ಕಾರವು ಸಾರ್ವಜನಿಕರ ಓಡಾಟವನ್ನು ನಿರ್ಬಂಧಿಸಿದಾಗ ದೇಶದಾದ್ಯಂತ ರಕ್ತನಿಧಿಗಳು ರಕ್ತದ ಕೊರತೆಯನ್ನು ಎದುರಿಸಿದ್ದು ಮೊನ್ನೆ ಮೊನ್ನೆಯಂತಿದೆ. ಇದೀಗ ರಕ್ತನಿಧಿಗಳು ಮತ್ತೊಂದು ಬಗೆಯ ಸಂಕಷ್ಟ ಹಾಗೂ ಸವಾಲನ್ನು ಎದುರಿಸುವ ಪ್ರಸಂಗ ಬಂದಿದೆ.

ಜನವರಿ ಹದಿನಾರರಿಂದ ದೇಶದಾದ್ಯಂತ ಕೋವಿಡ್ ಲಸಿಕಾ ಅಭಿಯಾನ ಆರಂಭವಾಯಿತಷ್ಟೆ. ಮೊದಲ ಹಂತದಲ್ಲಿ, ಕೊರೊನಾ ಯೋಧರಂತೆ ಕಾರ್ಯನಿರ್ವಹಿಸಿದ ಆರೋಗ್ಯ ಕಾರ್ಯಕರ್ತರು, ಪೊಲೀಸ್ ಇಲಾಖೆ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಗೃಹರಕ್ಷಕ ದಳ, ಪ್ರಕೃತಿ ವಿಕೋಪ ನಿರ್ವಹಣೆಯ ಸ್ವಯಂಪ್ರೇರಿತ ಕೆಲಸಗಾರರು ಮೊದಲಾದವರಿಗೆ ಲಸಿಕೆಯನ್ನು ಕೊಡಲಾಯಿತು. ಮಾರ್ಚ್ ಒಂದರಿಂದ ಎರಡನೆಯ ಹಂತದಲ್ಲಿ ಅರವತ್ತು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮತ್ತು ನಿರ್ದಿಷ್ಟ ಆರೋಗ್ಯ ಸಮಸ್ಯೆಗಳಿಂದ ಬಳಲುವ ನಲವತ್ತೈದು ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಲಸಿಕೆಯನ್ನು ಕೊಡಲು ಪ್ರಾರಂಭಿಸಿದ್ದಾಯಿತು.

ಏಪ್ರಿಲ್ ಒಂದರಿಂದ ಮೂರನೆಯ ಹಂತದ ಲಸಿಕಾ ಅಭಿಯಾನದಲ್ಲಿ ನಲವತ್ತೈದು ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಿಕೆ ಕಾರ್ಯಕ್ರಮ ಆರಂಭಗೊಂಡಿತು. ಇದೀಗ ಸರ್ಕಾರವು ಮೇ ಒಂದರಿಂದ ನಾಲ್ಕನೆಯ ಹಂತದಲ್ಲಿ ಹದಿನೆಂಟು ವರ್ಷ ಮೇಲ್ಪಟ್ಟವರಿಗೂ ಲಸಿಕೆ ನೀಡಲು ಆಯೋಜಿಸಿದೆ. ಆದರೆ ಯಾವುದೇ ರಕ್ತ ಭಂಡಾರದಲ್ಲಿ ರಕ್ತದಾನಕ್ಕೆ ಒಂದಿಷ್ಟು ನಿಯಮಗಳು ಇರುತ್ತವೆ. ದಾನಿಯು ರಕ್ತದಾನಕ್ಕೆ ಅರ್ಹನೇ ಎಂದು ಪರಿಶೀಲಿಸಿಯೇ ವೈದ್ಯಾಧಿಕಾರಿಯು ಆತನಿಂದ ರಕ್ತವನ್ನು ಸಂಗ್ರಹಿಸುತ್ತಾರೆ. ವ್ಯಕ್ತಿಯ ವಯಸ್ಸು, ದೇಹದ ತೂಕ, ಹಿಮೊಗ್ಲೋಬಿನ್, ರಕ್ತದೊತ್ತಡ ಮೊದಲಾದ ಅಂಶಗಳನ್ನು ಪರೀಕ್ಷಿಸುವುದರ ಜೊತೆಯಲ್ಲಿಯೇ ಆತ ಯಾವುದಾದರೂ ಸೋಂಕಿನಿಂದ ಬಳಲಿದ್ದನೇ, ಹಚ್ಚೆ (ಟ್ಯಾಟೂ) ಹಾಕಿಸಿಕೊಂಡಿದ್ದನೇ ರಕ್ತ ವರ್ಗಾವಣೆ ಮಾಡಿಸಿಕೊಂಡಿದ್ದನೇ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದನೇ ಮತ್ತು ಯಾವುದಾದರೂ ಕಾಯಿಲೆಗಾಗಿ ಲಸಿಕೆ ಹಾಕಿಸಿಕೊಂಡಿದ್ದನೇ ಎಂಬ ಎಲ್ಲ ಮಾಹಿತಿಯನ್ನು ಪಡೆದು, ಅವು ಯಾವುವೂ ಕನಿಷ್ಠ ಈ ಒಂದು ತಿಂಗಳೊಳಗೆ ನಡೆದಿಲ್ಲ ಎನ್ನುವುದನ್ನು ಖಾತರಿ ಮಾಡಿಕೊಂಡ ನಂತರವೇ ರಕ್ತ ಸಂಗ್ರಹಕ್ಕೆ ಮುಂದಾಗುತ್ತಾರೆ.

ಇದೀಗ ಕೋವಿಡ್ ಲಸಿಕೆಯೂ ಆ ಪಟ್ಟಿಯಲ್ಲಿ ಸೇರುತ್ತದೆ. ಅಲ್ಲದೆ, ಕೋವಿಡ್ ಲಸಿಕೆ ಪಡೆದವರಿಂದ ಕಡ್ಡಾಯವಾಗಿ ನಾಲ್ಕು ವಾರಗಳವರೆಗೆ ರಕ್ತ ಸಂಗ್ರಹ ಮಾಡುವಂತಿಲ್ಲ ಎಂದು ರಾಷ್ಟ್ರೀಯ ರಕ್ತ ವರ್ಗಾವಣಾ ಮಂಡಳಿ ಸೂಚಿಸಿದೆ.

ಸಾಮಾನ್ಯವಾಗಿ ರಕ್ತನಿಧಿಗಳು ರಕ್ತ ಸಂಗ್ರಹಕ್ಕಾಗಿ ಹದಿನೆಂಟರಿಂದ ಐವತ್ತು ವರ್ಷದೊಳಗಿನ ಸ್ವಯಂಪ್ರೇರಿತ ರಕ್ತದಾನಿಗಳನ್ನೇ ಅವಲಂಬಿಸಿರುತ್ತವೆ. ಆದರೆ ಈ ಮೇ ಒಂದರಿಂದ ಈ ಗುಂಪಿನವರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಆರಂಭಿಸಿದರೆ, ಮೊದಲ ಚುಚ್ಚುಮದ್ದಿನ ನಂತರ ನಾಲ್ಕು ವಾರಗಳ ಕಾಲ ಅವರು ರಕ್ತದಾನಕ್ಕೆ ಅನರ್ಹರಾಗಿರುತ್ತಾರೆ. ಎರಡನೆಯ ಚುಚ್ಚುಮದ್ದನ್ನು ನಾಲ್ಕರಿಂದ ಆರು ವಾರಗಳ ಅಂತರದಲ್ಲಿ ಹಾಕಿಸಿಕೊಂಡಾಗ ಅದರ ಮುಂದಿನ ನಾಲ್ಕು ವಾರಗಳ ಕಾಲವೂ ಅವರು ರಕ್ತದಾನಕ್ಕೆ ಅನರ್ಹರಾಗಿರುತ್ತಾರೆ. ಅಂದರೆ, ಮೇ ಮೊದಲ ವಾರದಿಂದ ಸುಮಾರು ಅರವತ್ತು ದಿನಗಳವರೆಗೆ ದೇಶದಾದ್ಯಂತ ಈ ಮಹತ್ವದ ಗುಂಪಿನ ರಕ್ತದಾನಿಗಳು ಯಾವ ಕಾರಣಕ್ಕೂ ರಕ್ತದಾನವನ್ನು ಮಾಡುವಂತಿರುವುದಿಲ್ಲ.



ಹೀಗಾದಾಗ ಮುಂದಿನ ಎರಡು ತಿಂಗಳವರೆಗೆ ದೇಶದ ಎಲ್ಲ ರಕ್ತನಿಧಿಗಳಲ್ಲಿಯೂ ರಕ್ತ ಸಂಗ್ರಹಣಾ ಕಾರ್ಯ ಹೆಚ್ಚು ಕಮ್ಮಿ ಸ್ಥಗಿತಗೊಂಡು ರಕ್ತದ ಕೊರತೆ ಉಂಟಾಗುವ ಸಾಧ್ಯತೆ ಇದೆ. ಈ ಸಮಸ್ಯೆಯ ತೀವ್ರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲು ನಮಗೆ ಈಗ ಉಳಿದಿರುವ ದಾರಿ ಒಂದೇ. ನಾಲ್ಕನೆಯ ಹಂತದ ಲಸಿಕಾ ಅಭಿಯಾನ ಆರಂಭವಾಗುವ ಮೊದಲು ಈ ಮಹತ್ವದ ಗುಂಪಿನ ರಕ್ತದಾನಿಗಳು ರಕ್ತದಾನಕ್ಕೆ ಮುಂದಾಗಬೇಕು. ‘ಮೊದಲು ರಕ್ತದಾನ, ನಂತರ ಕೋವಿಡ್ ಲಸಿಕೆ’ ಎಂಬುದು ಅವರ ಈ ಹೊತ್ತಿನ ಸಂಕಲ್ಪವಾಗಬೇಕು. ಅಂದರೆ ಇಂದಿನಿಂದ ನೀವು ಲಸಿಕೆಗೆ ನೋಂದಣಿ ಮಾಡುವ ದಿನದೊಳಗಾಗಿ ಹತ್ತಿರದ ರಕ್ತನಿಧಿಗೆ ತೆರಳಿ ರಕ್ತದಾನ ಮಾಡಿ. ಆಗ ರಕ್ತನಿಧಿಗಳು ಮುಂದಿನ ನಲವತ್ತು ದಿನಗಳವರೆಗೆ ಸ್ವಲ್ಪ ಮಟ್ಟಿಗೆ ರಕ್ತದ ಸಂಗ್ರಹಣೆಯನ್ನು ನಿರ್ವಹಿಸಬಹುದು.

ಆಸ್ಪತ್ರೆಗಳಲ್ಲಿ ರಕ್ತದ ಅವಶ್ಯಕತೆ ಬಹಳಷ್ಟು ಸಂದರ್ಭಗಳಲ್ಲಿ ಇರುತ್ತದೆ. ಅಪಘಾತ, ಹೆರಿಗೆ, ಶಸ್ತ್ರಚಿಕಿತ್ಸೆ ವೇಳೆ, ಕ್ಯಾನ್ಸರ್ ರೋಗಿಗಳಿಗೆ, ಸುಟ್ಟಗಾಯಗಳ ಚಿಕಿತ್ಸೆಗೆ, ಕೆಲವು ಬಗೆಯ ಜನ್ಮಜಾತ ರಕ್ತಹೀನತೆಯ ಚಿಕಿತ್ಸೆಯಲ್ಲಿ ರಕ್ತ ಅತ್ಯಗತ್ಯ. ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ, ಆರೋಗ್ಯವಂತ ನಾಗರಿಕರು ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳುವ ಮೊದಲೇ ರಕ್ತದಾನ ಮಾಡುವ ಬಗ್ಗೆ ಚಿಂತನೆ ಮಾಡಬೇಕು.

ಅಂತೆಯೇ, ಇದೀಗ ಕೋವಿಡ್ ಲಸಿಕೆಯ ಎರಡೂ ಚುಚ್ಚುಮದ್ದುಗಳನ್ನು ಹಾಕಿಸಿಕೊಂಡು ನಾಲ್ಕು ವಾರಗಳು ಪೂರೈಸಿದ ಅರವತ್ತು ವರ್ಷದೊಳಗಿನ ಇತರರೂ ರಕ್ತನಿಧಿಗಳ ಈ ಬವಣೆಯನ್ನು ಗಮನದಲ್ಲಿ ಇರಿಸಿಕೊಂಡು ಸಹಕರಿಸಿದರೆ ಸಹಸ್ರಾರು ರೋಗಿಗಳಿಗೆ ನೆರವಾದೀತು. ಆರೋಗ್ಯ ಕಾರ್ಯಕರ್ತರು, ಪೊಲೀಸ್ ಇಲಾಖೆ ಸಿಬ್ಬಂದಿ ಮೊದಲಾದ ಮೊದಲ ಸಾಲಿನ ಕೊರೊನಾ ಯೋಧರು ರಕ್ತದಾನಕ್ಕೆ ಮುಂದಾಗಬೇಕು ಹಾಗೂ ರಕ್ತನಿಧಿಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಹಕರಿಸಬೇಕು.

ಲೇಖಕಿ: ಶಿವಮೊಗ್ಗದ ಸುಬ್ಬಯ್ಯ ವೈದ್ಯಕೀಯ ಕಾಲೇಜು ರಕ್ತನಿಧಿಯ ವೈದ್ಯಾಧಿಕಾರಿ

ವಾಚಕರ ವಾಣಿ

ಕನ್ನಡದ ಕಂಪು ಅನ್ಯ ಭಾಷೆಗೆ ಪಸರಿಸಲಿ

‘ಕನ್ನಡದ ಭವಿಷ್ಯ: ಇಂಗ್ಲಿಷ್‌ನ ಅಗತ್ಯ’ ಎಂಬ ಲೇಖನದಲ್ಲಿ (ಸಂಗತ, ಏ. 23) ಡಾ. ಜ್ಯೋತಿ ಅವರು ಕನ್ನಡವೆಂಬ ನದಿಗೆ ಅನುವಾದದ ಮೂಲಕ ಬೇರೆ ಭಾಷೆಗಳಿಂದ ಹರಿದು ಬರುವ ಜ್ಞಾನವೇ ಆಕರ ಎಂಬಂತೆ ಬಿಂಬಿಸಿದ್ದಾರೆ. ಇದನ್ನು ಒಪ್ಪಿಕೊಳ್ಳಬಹುದಾದರೂ ಅರಗಿಸಿಕೊಳ್ಳಲು ಸ್ವಲ್ಪ ಕಷ್ಟವಾಗುತ್ತಿದೆ. ಏಕೆಂದರೆ ಎಲ್ಲಾ ಭಾಷೆಗಳ ಜ್ಞಾನ ನಮ್ಮ ಭಾಷೆಯಲ್ಲಿ ಲೀನವಾದರೆ ಸಾಕೇ? ಕನ್ನಡದ ಕಂಪು ಬೇರೆ ಭಾಷೆಗೆ ಪಸರಿಸುವುದು ಬೇಡವೇ?

ಇಂಗ್ಲಿಷ್‌ನಿಂದ ತರ್ಜುಮೆಗೊಂಡ ಅದೆಷ್ಟೋ ಪದಗಳಿಗೆ ಕನ್ನಡದಲ್ಲಿ ಸಮರ್ಥಿಸುವಂತಹ ಅರ್ಥವೇ ಇಲ್ಲ. ತಂತ್ರಜ್ಞಾನದ ಹೊಸ್ತಿಲಲ್ಲಿ ನಿಂತು, ಹೆಮ್ಮರವಾಗಿ ಬೆಳೆದ ಇಂಗ್ಲಿಷ್ ಭಾಷೆಯ ಆಸರೆಯಲ್ಲೇ ಇನ್ನೂ ಅದೆಷ್ಟು ವರ್ಷ ನಡೆಯಬೇಕು? ಆಧುನಿಕತೆಗೆ ತಕ್ಕಂತೆ ಇಂಗ್ಲಿಷ್ ವ್ಯಾಕರಣವನ್ನು ಸರಳೀಕರಿಸಿ ಸುಲಭವಾಗಿ ಅರ್ಥೈಸುತ್ತಿರುವಂತಹ ನಮ್ಮ ಬೋಧಕರು ಮಾತೃಭಾಷೆಯನ್ನು ಕಬ್ಬಿಣದ ಕಡಲೆ ಎಂದು ಬಿಂಬಿಸುತ್ತಿರುವುದೇಕೆ? ತಾಯ್ನಾಡಿನಲ್ಲೇ ತಾಯ್ತನದ ಭಾಷೆಗೆ ಮೂರನೇ ಸ್ಥಾನ ಸರಿಯೇ? ಸದ್ಯದ ಸ್ಥಿತಿಯಲ್ಲಿ ಕನ್ನಡ ಕೇವಲ ಭಾಷೆಯಾಗಿ, ಪಠ್ಯದ ವಸ್ತುವಾಗಿ ಉಳಿದರೆ ಸಾಲದು. ಆಧುನಿಕತೆಗೆ ತಕ್ಕಂತೆ ತಂತ್ರಜ್ಞಾನದ ಕಣಜವಾಗಬೇಕು. ಎಲ್ಲರನ್ನೂ ಆಕರ್ಷಿಸುವ ಭಾಷೆಗಿಂತ ಎಲ್ಲರೂ ಪ್ರೀತಿಸುವ ಭಾಷೆ ನಮ್ಮದಾಗಬೇಕು.

ನಾಗರಾಜ್ ಗರಗ್, ಹೊಸದುರ್ಗ

ಕನ್ನಡದ ವಸ್ತುಸ್ಥಿತಿಗೆ ಹಿಡಿದ ಕನ್ನಡಿ

ಮಾಜಿ ಸಚಿವ ಹಾಗೂ ಚಿಂತಕ ದಿವಂಗತ ಬಿ.ಬಸವಲಿಂಗಪ್ಪ ಅವರ ನೂರನೇ ಜನ್ಮದಿನದ ಸಂದರ್ಭದಲ್ಲಿ ಲೇಖಕ ಅಗ್ರಹಾರ ಕೃಷ್ಣಮೂರ್ತಿ ಅವರು ಬರೆದ ಲೇಖನದಲ್ಲಿ (ಪ್ರ.ವಾ., ಏ. 21) ‘ಬಸವಲಿಂಗಪ್ಪನವರು ಅಂಬೇಡ್ಕರ್ ಅವರ ವಿಚಾರವಂತಿಕೆಯನ್ನು ಒಪ್ಪಿದ್ದವರು. ತಮ್ಮ ಸಮಾಜದ ಯುವಕರ ಬೌದ್ಧಿಕ ಕ್ಷೇಮಚಿಂತನೆಯ ಅರಿವಿನಲ್ಲಿ, ಕನ್ನಡದಲ್ಲಿ ಏನೂ ಇಲ್ಲ, ಬರೀ ಬೂಸಾ, ಇಂಗ್ಲಿಷಿನ ಪುಸ್ತಕಗಳನ್ನು ಓದಿರಿ ಎಂದಿದ್ದರು. ಈ ಮಾತುಗಳಿಗೆ ಕುವೆಂಪು ಅವರು ಬೆಂಬಲ ಸೂಚಿಸುವವರೆಗೂ ಸಾಹಿತ್ಯಲೋಕ ಮೌನವಾಗಿತ್ತು’ ಎನ್ನುವ ವಿಷಯ ಆಶ್ಚರ್ಯ ಹಾಗೂ ದಿಗ್ಭ್ರಮೆ ಮೂಡಿಸಿತು. ಆದರೂ ಆ ಕಾಲಘಟ್ಟದಲ್ಲಿ ಅವರು ತಳೆದ ನಿಲುವು ಕಟು ಸತ್ಯವಾದುದಾಗಿದೆ. ಮಾತ್ರವಲ್ಲ, ಅದಕ್ಕೆ ಇಂಬು ಕೊಟ್ಟಂತೆ ಅಂದಿನ ಸಾಹಿತ್ಯ ಲೋಕದ ದಿಗ್ಗಜರು ಬಸವಲಿಂಗಪ್ಪ ಅವರ ಹೇಳಿಕೆಗೆ ವಹಿಸಿದ ದಿವ್ಯ ಮೌನ ಕನ್ನಡದ ವಸ್ತುಸ್ಥಿತಿಯ ಬಗ್ಗೆ ಇಂದಿಗೂ ಹಿಡಿದ ಕನ್ನಡಿಯಾಗಿದೆ.

ವಿ.ಕೆ.ವೆಂಕಟ ಸುಬ್ಬರಾವ್, ಹುಬ್ಬಳ್ಳಿ

ಭಾಷಾ ಅಕಾಡೆಮಿ ಸ್ಥಾಪನೆಯಾಗಲಿ

ಪ್ರತಿವರ್ಷ ಆಯಾ ಭಾಷೆಗಳಲ್ಲಿ ಪ್ರಕಟವಾಗುವ ಸಾಹಿತ್ಯ ಪ್ರಕಾರಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಕೊಡಲಾಗುತ್ತಿದೆ. ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರವು ಕೇಂದ್ರ ಭಾಷಾ ಅಕಾಡೆಮಿಯನ್ನು ಸ್ಥಾಪಿಸಬೇಕಿದೆ. ಅದು ಪ್ರತಿವರ್ಷ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುವ ಜ್ಞಾನ ವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅತ್ಯುತ್ತಮ ಕೃತಿಗಳಿಗೆ ಪ್ರಶಸ್ತಿಯನ್ನು ಕೊಟ್ಟು ಗೌರವಿಸಬೇಕು. ಈ ಮೂಲಕ ಭಾರತೀಯ ಭಾಷೆಗಳ ಜ್ಞಾನ ಸಂಪತ್ತನ್ನು ಹೆಚ್ಚಿಸಬೇಕಾಗಿದೆ. ಇದರಿಂದ ಕೇಂದ್ರೀಯ ನೇಮಕಾತಿ ಪರೀಕ್ಷೆಗಳನ್ನು ಕನ್ನಡ ಮಾಧ್ಯಮದಲ್ಲಿ ತೆಗೆದುಕೊಳ್ಳುವವರಿಗೆ ಸಹ ಅನುಕೂಲ ಆಗುತ್ತದೆ.

ಗಿರೀಶ್ ಮತ್ತೇರ, ಹನುಮಂತ ದೇವರ ಕಣಿವೆ, ಹೊಳಲ್ಕೆರೆ

ಜಾತಿ ವ್ಯವಸ್ಥೆ ಎಂಬ ವೈಚಾರಿಕ ದಾರಿದ್ರ್ಯ

ಡಾ. ಸಬಿತಾ ಬನ್ನಾಡಿ ಅವರು ಜಾತಿ ಆಚರಣೆ ವಿರುದ್ಧ ಬರೆದ ಲೇಖನದ (ಪ್ರ.ವಾ., ಏ. 22) ಬಗ್ಗೆ ಸತೀಶ ಎಂ.ಎಸ್. ಭಟ್ಟ ಅವರು ‘ಜಾತಿ ವ್ಯವಸ್ಥೆಗೂ ಆಧುನಿಕ ಚಿಂತನೆಗೂ ಒಂದಕ್ಕೊಂದು ಸಂಬಂಧ ಇಲ್ಲ’ ಎಂದಿದ್ದಾರೆ (ವಾ.ವಾ., ಏ. 23). ಭಾರತವು ಸದ್ಯ ಎದುರಿಸುತ್ತಿರುವ ಗಂಭೀರ ಸವಾಲುಗಳಿಗೆ ಜಾತಿ ವ್ಯವಸ್ಥೆಯೇ ಮೂಲ ಬೇರು. ಇದು ನೂರಾರು ವರ್ಷಗಳ ಇತಿಹಾಸವನ್ನು ಹೊಂದಿದ್ದು, ಆ ಮೂಲಕ ಅನಾದಿ ಕಾಲದಿಂದಲೂ ಭಾರತೀಯರಲ್ಲಿ ಬಲವಾಗಿ ನೆಲೆಯೂರಿರುವ ವೈಚಾರಿಕ ದಾರಿದ್ರ್ಯವಾಗಿದೆ.

ಭಾರತದ ಈ ಜಾತಿ ವ್ಯವಸ್ಥೆಯು ರಾಷ್ಟ್ರದ ಬೆಳವಣಿಗೆಯನ್ನು ಕುಂಠಿತವಾಗಿಸುತ್ತಿರುವ ಒಂದು ಭಯಾನಕ ವೈರಸ್ ಇದ್ದ ಹಾಗೆ. ಇದು ದೇಶವನ್ನು ಎಲ್ಲ ಕ್ಷೇತ್ರಗಳಲ್ಲೂ ಅಧೋಗತಿಗೆ ತಳ್ಳುತ್ತಿದೆ. ಜಾತಿ ವ್ಯವಸ್ಥೆಗೂ ಆಧುನಿಕತೆಗೂ ಸಂಬಂಧವೇ ಇಲ್ಲ ಎನ್ನುವುದಾದರೆ, ಆಧುನಿಕತೆ ಎಂದರೇನು ಎಂಬ ಪ್ರಶ್ನೆ ಮೂಡುತ್ತದೆ. ಆಧುನಿಕತೆ ಎಂಬುದು ಈ ಎಲ್ಲ ಪೂರ್ವಗ್ರಹಗಳನ್ನೂ ಮೀರಿ ಬೆಳೆಯುವಂಥದ್ದು. ಜಾತಿಯ ಜಾಡ್ಯವನ್ನು ಜೀವಂತವಾಗಿ ಇರಿಸಿಕೊಂಡೇ ನಮ್ಮಲ್ಲಿ ಆಧುನಿಕತೆ ಮೇಳೈಸಿದೆ ಎಂದು ನಾವು ಹೇಳಿಕೊಳ್ಳುವುದಾದರೆ ಅದೊಂದು ಸಣ್ಣತನವೇ ಸರಿ.

ಸಂಗಮೇಶ್ ಯಡ್ರಾಮಿ, ಅರಕೇರಾ, ದೇವದುರ್ಗ

ಅಭಿವೃದ್ಧಿಯ ಧಾವಂತದಲ್ಲಿ ಮರೆಯಾದ ನಾಗರಿಕ

ಅಭಿವೃದ್ಧಿ ಎಂದಿಗೂ ಮನುಷ್ಯ ಒಂದು ಸಮುದಾಯವಾಗಿ ಅಸ್ತಿತ್ವ ಹೊಂದುವ ಭಾಗವಾಗಿ ನಿರೂಪಣೆಗೊಳ್ಳಬೇಕು, ಆಗ ಅದಕ್ಕೊಂದು ಸುಸ್ಥಿರತೆ ದಕ್ಕುತ್ತದೆ. ಆದರೆ ವರ್ತಮಾನದಲ್ಲಿ ಜಾಗತಿಕ ಹಣಕಾಸು ‘ಮನುಷ್ಯನ ಸಾಮುದಾಯಿಕ ಅಸ್ತಿತ್ವ’ವನ್ನು ಕಡೆಗಣಿಸಿ ಭ್ರಮಾತ್ಮಕ ಅಭಿವೃದ್ಧಿಯ ನಿರೂಪಣೆಗಳನ್ನು ಸಮೂಹ ಮಾಧ್ಯಮಗಳ ಮೂಲಕ ಮುಂದಿಟ್ಟ ಪರಿಣಾಮ, ಜನರನ್ನು ನಾಳೆ ಏನೋ ಘಟಿಸಿಹೋಗಲಿದೆ, ನಾವು ಸುವರ್ಣ ಯುಗಕ್ಕೆ ಕಾಲಿಡಲಿದ್ದೇವೆ ಎಂದು ನಂಬಿಸಿದ್ದರಿಂದ ವ್ಯವಸ್ಥೆ ಕೋವಿಡ್ ನಿಭಾಯಿಸಲಾಗದ ಸ್ಥಿತಿಯನ್ನು ತಲುಪಿದೆ!

ದುರಂತ ಎಂದರೆ, ಇಂದಿಗೂ ನಮ್ಮನ್ನು ಆಳುವ ವರ್ಗ ಇದೇ ಭ್ರಮಾತ್ಮಕ ನಿರೂಪಣೆಗಳನ್ನೇ ನೆಚ್ಚಿಕೊಂಡು ಕೋವಿಡ್ ಸಮಸ್ಯೆ ಎದುರಿಸುತ್ತಿರುವುದು, ಇದರ ಪರಿಣಾಮವೇ ವಿಪರೀತ ಕೇಂದ್ರೀಕೃತ ನೀತಿಗಳು, ಎಲ್ಲವನ್ನೂ ನಾನು ನಿಭಾಯಿಸುತ್ತಿದ್ದೇನೆ ಎಂದು ತೋರಿಸಿಕೊಳ್ಳುವ ರಾಜಕಾರಣಿಗಳ ಹಪಹಪಿತನ, ಸಂಕಷ್ಟದಲ್ಲೂ ಪ್ರಸಿದ್ಧಿ ಪಡೆಯುವ ಮೋಹ ಎಲ್ಲವೂ...!

ಒಂದು ರಾಷ್ಟ್ರೀಯ ವಿಪತ್ತನ್ನು ಎದುರಿಸಲು ಅಧಿಕಾರದ ವಿಕೇಂದ್ರೀಕರಣ, ವಿಪತ್ತನ್ನು ಎದುರಿಸಲು ಜನಸಮುದಾಯವನ್ನು ನೈತಿಕವಾಗಿ ಸಿದ್ಧಗೊಳಿಸುವ ಕ್ರಮಗಳು ಮುಖ್ಯವಾಗಬೇಕಾದ ಕಾಲದಲ್ಲಿ, ನಾವು ಪರಿಹಾರಕ್ಕಾಗಿ ಟಿ.ವಿ ಭಾಷಣಗಳ ಮೊರೆ ಹೋಗುವ ಸ್ಥಿತಿ ತಲುಪಿರುವುದು ಚಾರಿತ್ರಿಕ ದುರಂತ!

ಡಾ. ಕಿರಣ್ ಎಂ. ಗಾಜನೂರು, ಕಲಬುರ್ಗಿ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕೇ?

ಪ್ರಜಾವಾಣಿ ಚರ್ಚೆ

ದೇಗುಲ ನಿರ್ವಹಣೆಗೆ ಮನದಲ್ಲಿ ಬೇಕು ಅನುರಾಗ

• ಸದ್ಗುರು ಜಗ್ಗಿ ವಾಸುದೇವ್



ಕಳೆದ ವರ್ಷ, ತಮಿಳುನಾಡು ಸರ್ಕಾರವು ಮದ್ರಾಸಿನ ಹೈಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ ರಾಜ್ಯದಲ್ಲಿನ 11,999 ದೇವಸ್ಥಾನಗಳಲ್ಲಿ ವರಮಾನ ಇಲ್ಲದಿರುವುದರಿಂದ ಯಾವುದೇ ರೀತಿಯ ಪೂಜೆ ಅಥವಾ ಧಾರ್ಮಿಕ ಆಚರಣೆ ನಡೆಯುತ್ತಿಲ್ಲ ಎಂದು ಉಲ್ಲೇಖಿಸಿದೆ. ಸುಮಾರು 34,000 ದೇವಸ್ಥಾನಗಳಲ್ಲಿ ಅಲ್ಲಿನ ಎಲ್ಲಾ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ನೇಮಿಸಲಾಗಿದೆ. ಇನ್ನು 37,000 ದೇವಸ್ಥಾನಗಳು ವಾರ್ಷಿಕವಾಗಿ ₹10,000ಕ್ಕಿಂತ ಕಡಿಮೆ ವರಮಾನವನ್ನು ಹೊಂದಿವೆ. ಮುಂದಿನ ಕೆಲ ವರ್ಷಗಳಲ್ಲಿ ಸುಮಾರು 12,000 ದೇವಸ್ಥಾನಗಳು ನಶಿಸಿ ಹೋಗಲಿವೆಯೆಂದು ಅಂದಾಜು ಮಾಡಲಾಗಿದೆ.

ಸರ್ಕಾರದ ಅಧಿಕೃತ ಹೇಳಿಕೆಯ ಪ್ರಕಾರ 1,200 ದೇವತಾ ಮೂರ್ತಿಗಳು ಕಳೆದುಹೋಗಿವೆ, ಅಂದರೆ ಕಳವಾಗಿವೆ. ಇದು ಕೇವಲ ಸಾಮಾಜಿಕ ಮಾಧ್ಯಮಗಳ ಚರ್ಚೆಯಲ್ಲ. ಇದು ನಮ್ಮ ಮುಂದಿರುವ ಕಟುಸತ್ಯ. ನಾವು ಹೀಗೆ ಮುಂದುವರಿದರೆ, ಮುಂದಿನ ನೂರು ವರ್ಷಗಳಲ್ಲಿ, ಕೆಲವು ಮುಖ್ಯ ದೇವಸ್ಥಾನಗಳನ್ನು ಹೊರತುಪಡಿಸಿ, ಉಳಿದೆಲ್ಲ ದೇವಸ್ಥಾನಗಳು ನಶಿಸಿಹೋಗುತ್ತವೆ. ಇದೀಗ, ದೇವಸ್ಥಾನಗಳು ಸರ್ಕಾರದ ನಿಯಂತ್ರಣದಲ್ಲಿವೆ, ಮತ್ತು ದೇವಸ್ಥಾನಗಳ ಬಗ್ಗೆ ಯಾವುದೇ ಭಾವನೆ ಇಲ್ಲದವರು ಅದನ್ನು ನಿರ್ವಹಿಸುತ್ತಿದ್ದಾರೆ, ಆದ್ದರಿಂದ ಸ್ವಾಭಾವಿಕವಾಗಿ ಅವರು ಅದನ್ನು ಸರಿಯಾಗಿ ನಿರ್ವಹಿಸುವುದಿಲ್ಲ.

ಮೊದಲನೆಯದಾಗಿ, ದೇವಸ್ಥಾನವು ವ್ಯಕ್ತಿನಿಷ್ಠ ವಿಚಾರವಾಗಿದೆ. ನೀವು ಕೇವಲ ಉದ್ಯೋಗಿಗಳೊಂದಿಗೆ ದೇವಸ್ಥಾನವನ್ನು ನಡೆಸಲು ಸಾಧ್ಯವಿಲ್ಲ. ಅದಕ್ಕಾಗಿ ಹೃದಯದಲ್ಲಿ ಅನುರಾಗ ಮತ್ತು ಭಕ್ತಿ ಇರಬೇಕು. ಪ್ರತಿಯೊಬ್ಬ ವ್ಯಕ್ತಿಯು ತಮ್ಮ ತಮ್ಮ ಪೂಜಾ ಸ್ಥಳಗಳನ್ನು ನಿರ್ವಹಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ಭಾರತದ ಸಂವಿಧಾನ ಸ್ಪಷ್ಟವಾಗಿ ಹೇಳುತ್ತದೆ. ಹಣಕಾಸು, ನೈತಿಕ ಅಥವಾ ಭದ್ರತಾ ಸಮಸ್ಯೆಗಳ ಸಂದರ್ಭದಲ್ಲಿ, ಅವುಗಳನ್ನು ನಿರ್ಬಂಧಿಸಲು ಮತ್ತು ನಿಯಂತ್ರಿಸಲು ಸರ್ಕಾರಕ್ಕೆ ಅನುಮತಿ ನೀಡುವ ಷರತ್ತು ಇದ್ದರೂ, ಸರ್ಕಾರವೇ ಅಧಿಕಾರ ವಹಿಸಿಕೊಳ್ಳಬಹುದು ಅಥವಾ ಆಡಳಿತ ನಡೆಸಬಹುದು ಎಂದು ಎಲ್ಲಿಯೂ ಹೇಳಿಲ್ಲ. ಆದಾಗ್ಯೂ, ತಮಿಳುನಾಡಿನಲ್ಲಿ ಹಿಂದೂ ಧಾರ್ಮಿಕ ಮತ್ತು ದತ್ತಿ (ಎಚ್‌ಆರ್ ಮತ್ತು ಸಿಇ) ಕಾಯ್ದೆಯು ಈ ಉಲ್ಲೇಖದಿಂದಲೇ ಪ್ರಾರಂಭವಾಗುತ್ತದೆ - ದೇವಾಲಯಗಳ ಅಧಿಕಾರ ಮತ್ತು ಆಡಳಿತ. ಇದು ಮೂಲಭೂತವಾಗಿ ಸಂವಿಧಾನಕ್ಕೆ ವಿರುದ್ಧವಾದರೂ, ಈ ಕಾನೂನು ದಶಕಗಳಿಂದಲೂ ಮುಂದುವರಿದಿದೆ.

ಭಕ್ತರು ದೇವಸ್ಥಾನಗಳ ಪೂರ್ಣ ಸಾಮರ್ಥ್ಯವನ್ನು ಹೊರತರಬಲ್ಲರು. ಪ್ರಸ್ತುತವಾಗಿ, 44,000 ದೇವಸ್ಥಾನಗಳು ಸುಮಾರು ಐದು ಲಕ್ಷ ಎಕರೆಗಳ ಭೂಮಿಯ ಸಮೇತವಾಗಿ ತಮಿಳುನಾಡು ಸರಕಾರದ ನಿರ್ವಹಣೆಯಲ್ಲಿವೆ. ಆದರೆ, ಈ ಎಲ್ಲದರಿಂದ ವಾರ್ಷಿಕವಾಗಿ ಕೇವಲ ₹128 ಕೋಟಿ ಆದಾಯ ಬರುತ್ತದೆ. ಇದಕ್ಕೆ ಹೋಲಿಸಿ ನೋಡುವುದಾದರೆ, ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯು 85 ಗುರುದ್ವಾರಗಳನ್ನು ನಿರ್ವಹಿಸುತ್ತದೆ, ಆದರೆ ಅದರ ಬಜೆಟ್ ವಾರ್ಷಿಕವಾಗಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಾಗಿವೆ. ಜನಸಂಖ್ಯೆಯ ಶೇ 87ರಷ್ಟು ಇರುವ ಸಮುದಾಯಕ್ಕೆ ಸೇರಿದ 44,000 ದೇವಸ್ಥಾನಗಳಿಂದ ಕೇವಲ ₹128 ಕೋಟಿ ಬರುತ್ತದೆ ಎಂದರೆ ಅದು ಭಯಂಕರವಾದ ಕಳಪೆ ನಿರ್ವಹಣೆಯನ್ನು ತೋರಿಸುತ್ತದೆ.

> ದೇವಸ್ಥಾನಗಳ ಕುರಿತು ಸಂವೈಧಾನಿಕ ಹಕ್ಕನ್ನು ಚಲಾಯಿಸಿ ಸಮುದಾಯವು ಎದ್ದು ನಿಂತು ‘ನೀವು ದೇವಸ್ಥಾನಗಳನ್ನು ನಮ್ಮ ಕೈಗೆ ಒಪ್ಪಿಸದಿದ್ದರೆ, ನಾವು ನಿಮಗೆ ಓಟು ಹಾಕುವುದಿಲ್ಲ’ ಎಂದು ರಾಜಕೀಯ ಪಕ್ಷಗಳಿಗೆ ಹೇಳಬೇಕು. ಹಸ್ತಾಂತರ ಪ್ರಕ್ರಿಯೆ ಆತುರಾತುರವಾಗಿ ಒಮ್ಮೆಲೆ ಆಗಬೇಕೆಂದಿಲ್ಲ. ಅದೊಂದು ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಸೂಕ್ತ ರೀತಿಯಲ್ಲಿ ನಡೆಯಬೇಕು

ಒಂದು ಸಾಮಾನ್ಯವಾದ ವಾದವೆಂದರೆ, ದೇವಸ್ಥಾನಗಳನ್ನು ಸಮುದಾಯಕ್ಕೆ ಮರಳಿಸಿದರೆ, ಅವರು ಈಗಿರುವುದಕ್ಕಿಂತ ಚೆನ್ನಾಗಿ ನಿರ್ವಹಿಸುತ್ತಾರೆಯೇ? ಅವರು ಅದನ್ನು ಇನ್ನಷ್ಟು ಹಾಳುಮಾಡಬಹುದು ಎನ್ನುವುದು. ಇದರರ್ಥ, ಜನಸಂಖ್ಯೆಯ ಶೇ 87ರಷ್ಟಿರುವ ಸಮುದಾಯದಲ್ಲಿ ದೇವಸ್ಥಾನಗಳನ್ನು ನಿರ್ವಹಿಸಲು ಇರಬೇಕಾದ ಬದ್ಧತೆ ಮತ್ತು ಅರ್ಹತೆಯಿರುವ ಒಂದಷ್ಟು ಜನರಿಲ್ಲ ಎಂದಾಯಿತು. ಇದು ಹಾಸ್ಯಾಸ್ಪದ.

ನೀವು ದೇವಸ್ಥಾನಗಳನ್ನು ಭಕ್ತರ ಕೈಗೆ ಕೊಟ್ಟರೆ, ಅವರು ಅದನ್ನು ಅದ್ಭುತವಾಗಿ, ಚೈತನ್ಯಯುತವಾಗಿ ನಿರ್ವಹಿಸುತ್ತಾರೆ. ದೇವಸ್ಥಾನಗಳನ್ನು ನಡೆಸಲು ಉಪಯೋಗಿಸಬಹುದಾದ ಅನೇಕ ಮಾದರಿಗಳಿವೆ. ಉದಾಹರಣೆಗೆ, ಗುರುದ್ವಾರಗಳನ್ನು ನಡೆಸುತ್ತಿರುವ ರೀತಿಯನ್ನು ನೋಡಿ - ಲಂಗರುಗಳು ನೀಡುತ್ತಿರುವ ಆಹಾರದ ಪ್ರಮಾಣ, ಮತ್ತು ಅಗತ್ಯವಿರುವ ಸಮಯದಲ್ಲಿ ಅವರು ಜನರನ್ನು ತಲುಪುತ್ತಿರುವ ರೀತಿ. ಭೂಮಿಯಿಂದ ಬರುವ ಆದಾಯವನ್ನು ಸೇರಿಸಿಕೊಂಡು ದೇವಸ್ಥಾನಗಳು ಎಷ್ಟು ದೊಡ್ಡ ಬಜೆಟ್ ಅನ್ನು ಹೊಂದಿಸಿಕೊಳ್ಳಬಹುದು ಎಂಬುದನ್ನು ಊಹಿಸಿಕೊಳ್ಳಿ. ಅವು ಇನ್ನೂ ಎಷ್ಟೋ ಮಾಡಬಲ್ಲವು. ಹಾಗೂ, ಈ ದೇವಸ್ಥಾನಗಳಲ್ಲಿ ಕಳೆದ ಕೆಲವು ಸಾವಿರ ವರ್ಷಗಳಲ್ಲಿ ಜನರು ಕಷ್ಟಪಟ್ಟು ಹೂಡಿದ ಸಂಪತ್ತು ಮತ್ತು ಶ್ರಮ ಸಣ್ಣದಲ್ಲ.

ದೇವಸ್ಥಾನವು ಕೇವಲ ಒಂದು ಮತಧರ್ಮದ ಕುರಿತಾದುದಷ್ಟೇ ಅಲ್ಲ. ದೇವಸ್ಥಾನವೆಂದರೆ, ಕಲೆ, ಇತಿಹಾಸ, ಸಂಸ್ಕೃತಿ. ವಾಸ್ತುಶಿಲ್ಪ, ಕೆತ್ತನೆ, ಕಲೆ ಮತ್ತು ವಿನ್ಯಾಸದ ದೃಷ್ಟಿಯಿಂದ ನೋಡಿದರೆ ದೇವಸ್ಥಾನಗಳಲ್ಲಿ ನಡೆದಿರುವ ಕೆಲಸ ಅತ್ಯದ್ಭುತವಾದದ್ದು. ಜಗತ್ತಿನಲ್ಲೆಲ್ಲೂ ಈ ರೀತಿಯ ಕಟ್ಟಡಗಳಿಲ್ಲ, ಆದರೆ ನಾವು ನಮ್ಮ ಭಾವಶೂನ್ಯತೆಯಿಂದ ಅವುಗಳನ್ನು ನಶಿಸಿಹೋಗಲು ಬಿಡುತ್ತಿದ್ದೇವೆ. ಇದೀಗ ಅದನ್ನು ಸರಿಪಡಿಸುವ ಸಮಯ ಬಂದಿದೆ.

ದೇವಸ್ಥಾನಗಳ ಕುರಿತು ಸಂವೈಧಾನಿಕ ಹಕ್ಕನ್ನು ಚಲಾಯಿಸಿ ಸಮುದಾಯವು ಎದ್ದು ನಿಂತು ‘ನೀವು ದೇವಸ್ಥಾನಗಳನ್ನು ನಮ್ಮ ಕೈಗೆ ಒಪ್ಪಿಸದಿದ್ದರೆ, ನಾವು ನಿಮಗೆ ಓಟು ಹಾಕುವುದಿಲ್ಲ’ ಎಂದು ರಾಜಕೀಯ ಪಕ್ಷಗಳಿಗೆ ಹೇಳಬೇಕು. ಹಸ್ತಾಂತರ ಪ್ರಕ್ರಿಯೆ ಆತುರಾತುರವಾಗಿ ಒಮ್ಮೆಲೆ ಆಗಬೇಕೆಂದಿಲ್ಲ. ಅದೊಂದು ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಸೂಕ್ತ ರೀತಿಯಲ್ಲಿ ನಡೆಯಬೇಕು. ಮುಖ್ಯವಾದ ಸಂಗತಿಯೆಂದರೆ ಮೊದಲು ಆ ದಿಸೆಯಲ್ಲಿ ಒಂದು ಇಚ್ಛಾಶಕ್ತಿಯನ್ನು ತೋರಬೇಕು. ಒಂದು ಆಯೋಗವನ್ನು ರಚಿಸಿ ಅದರ ಮೂಲಕ ನಮ್ಮ ದೇವಸ್ಥಾನಗಳನ್ನು ಸಮುದಾಯಕ್ಕೆ ಹಂತ ಹಂತವಾಗಿ ಹಸ್ತಾಂತರಗೊಳಿಸಲು ಪ್ರಕ್ರಿಯೆಯೊಂದನ್ನು ವಿಕಾಸಗೊಳಿಸಬೇಕು.

ಎಲ್ಲಕ್ಕಿಂತ ಮುಖ್ಯವಾಗಿ, 74 ವರ್ಷಗಳ ಸ್ವತಂತ್ರ ಭಾರತದಲ್ಲಿ, ಜನರಿಗೆ ತಮ್ಮ ಮತಧರ್ಮವನ್ನು ತಮಗೆ ಬೇಕಾದಂತೆ ಅನುಸರಿಸುವ ಸ್ವಾತಂತ್ರ್ಯವಿಲ್ಲದಿದ್ದರೆ, ಅದೆಂತಹ ಸ್ವಾತಂತ್ರ್ಯ? 75ನೇ ಸ್ವಾತಂತ್ರ್ಯ ದಿನಕ್ಕೆ ಮೊದಲು ನಾವು ದೇವಸ್ಥಾನಗಳನ್ನು ಮುಕ್ತಗೊಳಿಸಬೇಕು.

(ಲೇಖಕ: ಯೋಗಿ, ಈಶ ಪ್ರತಿಷ್ಠಾನದ ಸ್ಥಾಪಕ, ದೇವಸ್ಥಾನಗಳನ್ನು ಸರ್ಕಾರದ ಕೈಯಿಂದ ಮುಕ್ತಗೊಳಿಸಬೇಕು ಎಂಬ ಅಭಿಯಾನ ಆರಂಭಿಸಿದ್ದಾರೆ)



ಪುರೋಹಿತಶಾಹಿ ತಂಟೆ ಲಾಗಾಯ್ತಿನಿಂದಲೂ ಇದೆ

• ಪ್ರೊ. ಕೆ.ಫಣಿರಾಜ್



ಕನಕದಾಸರು ದೇವರಿಗೆ ಕಾಣದಂತೆ ಬಾಳೆ ಹಣ್ಣು ತಿನ್ನಲಾಗದ ನೀತಿ ಕತೆ ಪ್ರಸಿದ್ಧವಾಗಿದೆ; ದೇವರಿಗೆ ಕಾಣದಂತೆ ಬಾಳೆ ಹಣ್ಣು ತಿನ್ನಲು ಅಡಗುತಾಣಗಳನ್ನು ಹುಡುಕಿಕೊಳ್ಳುವುದು ಲೌಕಿಕ ವ್ಯವಹಾರವೇ ಹೊರತು ಮತದ ಆಧ್ಯಾತ್ಮವಲ್ಲ. ತನ್ನ ಮತ್ತು ದೇವರ ನಡುವೆ ಯಾವ ಮಧ್ಯವರ್ತಿಗಳನ್ನು ಬಯಸದ ನಿಜ ಭಕ್ತರಿಗೂ, ದೇವರ ಪರವಾಗಿ ಲೋಕದ ಠೇಕೆದಾರಿಕೆಯ ಅಧಿಕಾರವನ್ನು ಬಲವಂತವಾಗಿ ವಹಿಸಿಕೊಳ್ಳಲು ಹಾತೊರೆಯುವ ವೈದಿಕಶಾಹಿಗಳಿಗೂ ಇರುವ ವ್ಯತ್ಯಾಸವನ್ನು ತುಕಾರಾಮನ ಅಭಂಗವೊಂದು ಸ್ಪಷ್ಟಪಡಿಸುತ್ತದೆ; ತುಕಾ ತನ್ನ ಅಭಂಗಗಳಿಂದ ಭಕ್ತರನ್ನು ಮತಿಹೀನರನ್ನಾಗಿ ಮಾಡುತ್ತಿದ್ದಾನೆ, ಅವನ ಅಭಂಗಗಳನ್ನು ನಾಶ ಮಾಡಿ ತಮ್ಮ ಮತ ಉಳಿಸಬೇಕೆಂದು ವೈದಿಕ ಮತದ ಠೇಕೆದಾರರು ದೊರೆಗಳಿಗೆ ದೂರು ನೀಡುತ್ತಾರೆ; ದೊರೆಗೂ ಮತಾಧಿಕಾರದ ಠೇಕೆದಾರರ ಸಾಥ್ ಬೇಕಾಗಿ ತುಕಾನ ಅಭಂಗಗಳ ಕಟ್ಟನ್ನು ಭೀಮಾ ನದಿಗೆ ಎಸೆಯಲು ಅಪ್ಪಣೆ ಮಾಡುತ್ತಾನೆ; ಆಗ ತುಕಾ ದೊರೆಯ ಬಳಿ ಬೇಡುವುದಿಲ್ಲ!

ಭಕ್ತನ ನುಡಿಯಲ್ಲಿ ನಿಜವಿದ್ದರೆ ನೀನೇ ನುಡಿ ಉಳಿಸಿಕೋ ಎಂದು ತನ್ನ ದೈವಕ್ಕೆ ಸವಾಲು ಹಾಕುತ್ತಾನೆ. ವೈದಿಕಶಾಹಿ ಠೇಕೆದಾರರಿಗೆ, ದೇವರ ಕಣ್ಣುತಪ್ಪಿಸಿ ಬಾಳೆ ಹಣ್ಣು ತಿನ್ನುವ ಲೌಕಿಕ ಅಧರ್ಮಕ್ಕೆ ಯಾರ ಅಡ್ಡಿಯೂ ಇರಕೂಡದು! ಆದರೆ, ತಮ್ಮ ಕೈಯಿಂದ ಬಾಳೆ ಹಣ್ಣು ಜಾರುತ್ತಿರುವ ಅಪಾಯ ಬಂದಾಗ, ಮತ ಸಂಪ್ರದಾಯದ ನೆಪದಲ್ಲಿ ದೊರೆಯ ಅಧಿಕಾರ ಪ್ರವೇಶ ಬೇಕು! ಇಂಥಾ ಲೌಕಿಕ ಅಧಿಕಾರ ಲಾಲಸೆ ಮತ ಡಾಂಭಿಕತೆಯನ್ನು ಭಕ್ತಿಪಂಥದ ಸಾವಿರಾರು ತಾತ್ವಿಕರು ಉಗಿದರೂ, ಹೊಸ ಸನ್ನಿವೇಶಗಳಲ್ಲಿ ಹೊಸ ವೇಷದಲ್ಲಿ, ಅದೇ ಲೋಕ ಲಾಲಸೆಯ ಮರುಪ್ರದರ್ಶನ ಮಾಡುವುದಕ್ಕೆ ವೈದಿಕಶಾಹಿ ಠೇಕೆದಾರರು ಹೇಸುವುದಿಲ್ಲ. ಹಿಂದೂ ಧಾರ್ಮಿಕ ಸಂಸ್ಥೆ ಹಾಗೂ ದತ್ತಿ ಕಾಯ್ದೆಗಳ ಬಗ್ಗೆ ವೈದಿಕಶಾಹಿ ಠೇಕೆದಾರರ ದೂರು ದುಮ್ಮಾನಗಳಿಗೂ ಮತ ನಂಬಿಕೆಯ ಆಧ್ಯಾತ್ಮಕ್ಕೂ ಏನೂ ಸಂಬಂಧವಿಲ್ಲ; ಅವು ಮತ ನಂಬಿಕೆಯ ಹೆಸರಲ್ಲಿ ನಡೆಯುವ ಲೌಕಿಕ ಸಂಪತ್ತಿನ ವ್ಯವಹಾರದಲ್ಲಿ ನಿರಂಕುಶ ಸರ್ವಾಧಿಕಾರ ಸ್ಥಾಪಿಸುವ ತಂತ್ರಗಳು ಮಾತ್ರವಾಗಿವೆ- 1850ರಿಂದ ಇಂದಿನ ವರೆಗೂ ನಡೆದಿರುವ ಕೋರ್ಟು ಕಟ್ಲೆಗಳನ್ನು ಗಮನಿಸಿದರೆ ಈ ಸಂಗತಿಯು ನಿಚ್ಚಳವಾಗಿ ತೋರುತ್ತದೆ.

> ಭಕ್ತಿ ಪಂಥದ ಪ್ರಭಾವದಲ್ಲಿ ತಮ್ಮ ಅಧಿಕಾರಕ್ಕೆ ಜನ ಸಮ್ಮತಿಯು ತೆಳುವಾದಾಗಲೆಲ್ಲಾ, ವೈದಿಕ ಪುರೋಹಿತಶಾಹಿಗಳು ಸಂತರನ್ನು ದಂಡಿಸುವಂತೆ ಅರಸರ ಮೊರೆ ಹೋಗುತ್ತಿದ್ದ ಇತಿಹಾಸವು ಭಾರತದ ಉಪಖಂಡದಲ್ಲಿ ದಂಡಿಯಾಗಿದೆ. ವೈದಿಕಶಾಹಿಯ ಲೌಕಿಕ ಕರಾಮತ್ತುಗಳನ್ನು ಅರಿತ ಬ್ರಿಟಿಷ್ ವಸಾಹತುಶಾಹಿಯೂ, ತನ್ನ ಸುಭದ್ರತೆಗೆ ಇವರ ಆಟಗಳಿಗೆ ಅವಕಾಶ ನೀಡಿತ್ತು

ಅರಸೊತ್ತಿಗೆಗಳ ಕಾಲದಲ್ಲಿ ಆಯ್ದ ದೇವಸ್ಥಾನಗಳು ಅರಸರ ಅಧಿಕಾರ ಕೇಂದ್ರಗಳಾಗಿದ್ದವು; ಜನರಿಂದ ಪಡೆದ ತೆರಿಗೆ ಹಣದಲ್ಲಿ, ಜನರ ಮುಫತ್ತಾದ ಶ್ರಮ ಪಡೆದು, ವೈಭವೋಪೇತ ದೇವಸ್ಥಾನ ಕಟ್ಟಿಸಿ, ಅವನ್ನು ಅಧಿಕಾರಸ್ಥ ಮತಗಳ ಪುರೋಹಿತಶಾಹಿಗಳಿಗೆ ವಹಿಸಿಕೊಡುತ್ತಿದ್ದರು. ಪುರೋಹಿತಶಾಹಿಯ ಶ್ರಮಹೀನ ಸವಲತ್ತಿನ ಜೀವನಕ್ಕಾಗಿ ಸಾವಿರಾರು ಎಕರೆ ಕೃಷಿಯೋಗ್ಯ ಜಮೀನುಗಳನ್ನು ದಾನ ನೀಡುತಿದ್ದರು. ಪುರೋಹಿತಶಾಹಿಯು ದೇವರ ಭಯ ಹುಟ್ಟಿಸಿ ರೈತರಿಂದ ಪುಕ್ಕಟೆ ಸಾಗುವಳಿ ಮಾಡಿಸುವುದಕ್ಕೆ ದೊರೆಯ ಕೃಪೆ ಇರುವಾಗ ‘ರಾಜಃ ಪ್ರತ್ಯಕ್ಷ ದೇವತಃ’ ಆಗಿರುತ್ತಿದ್ದ! ಭಕ್ತಿ ಪಂಥದ ಪ್ರಭಾವದಲ್ಲಿ ತಮ್ಮ ಅಧಿಕಾರಕ್ಕೆ ಜನ ಸಮ್ಮತಿಯು ತೆಳುವಾದಾಗಲೆಲ್ಲಾ, ಇದೇ ವೈದಿಕ ಪುರೋಹಿತಶಾಹಿಗಳು ಸಂತರನ್ನು ದಂಡಿಸುವಂತೆ ಅರಸರ ಮೊರೆ ಹೋಗುತ್ತಿದ್ದ ಇತಿಹಾಸವು ಭಾರತದ ಉಪಖಂಡದಲ್ಲಿ ದಂಡಿಯಾಗಿವೆ. ವೈದಿಕಶಾಹಿಯ ಲೌಕಿಕ ಕರಾಮತ್ತುಗಳನ್ನು ಅರಿತ ಬ್ರಿಟಿಷ್ ವಸಾಹತುಶಾಹಿಯೂ, ತನ್ನ ಸುಭದ್ರತೆಗೆ ಇವರ ಆಟಗಳಿಗೆ ಅವಕಾಶ ನೀಡಿತ್ತು.

ಆದರೇನು, ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ವೈದಿಕಶಾಹಿಯ ಸಾಮಾಜಿಕ ಅಸಮಾನತೆಯ ವಿರುದ್ಧದ ಹೋರಾಟವೂ ಒಂದು ಭಾಗವಾಗಿ ಕಟ್ಟಿಕೊಂಡಿತು. ಭಕ್ತರ ಸಮಾನತೆಯ ಆಶಯಗಳ ಪರಿಣಾಮಗಳಿಂದ ರಕ್ಷಣೆ ಪಡೆಯಲು ವೈದಿಕಶಾಹಿಯು, ವಸಾಹತುಶಾಹಿ ಅರಸೊತ್ತಿಗೆಯ ಭಾಗವಾದ ಕೋರ್ಟು ಕಟ್ಲೆಗಳಿಗೆ ಮೊರೆ ಹೋಗುವುದಕ್ಕೂ, ಅಧಿಕಾರಿಗಳ ಕೃಪೆಗೆ ಯಾಚಿಸುವುದಕ್ಕೂ, ಶುರುವಿಟ್ಟುಕೊಂಡಿತ್ತು.

‘ಸಕಲ ಜಾತಿಗಳಿಗೂ ದೇವಸ್ಥಾನ ಪ್ರವೇಶ ಚಳವಳಿ’ ಹಾಗೂ ದೇವಸ್ಥಾನಗಳ ಆಸ್ತಿ ದುರ್ವ್ಯವಹಾರ ದೂರುಗಳು ‘ಹಿಂದೂ ಭಕ್ತ’ರಿಂದ ಬರತೊಡಗಿದ್ದರ ಫಲವಾಗಿ 1925ರಲ್ಲಿ ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ ಬಂದದ್ದು. ಸ್ವತಂತ್ರ ಭಾರತದ ಯಾವ ಸರ್ಕಾರವೂ ದೇವಸ್ಥಾನಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವ ಕಾಯ್ದೆ ಮಾಡಿಲ್ಲ, ಎಲ್ಲಾ ರಾಜ್ಯಗಳಲ್ಲೂ ದತ್ತಿ ಇಲಾಖೆಗಳನ್ನು ಸ್ಥಾಪಿಸಬೇಕು ಎಂಬ ಕಾನೂನು ಸಹ ಇಲ್ಲ. ಆಯಾ ರಾಜ್ಯಗಳಲ್ಲಿ ಇರುವ ಸ್ಥಿತಿಗಳಿಗೆ ಅನುಗುಣವಾಗಿ ದತ್ತಿ ಇಲಾಖೆಗಳನ್ನು ಸ್ಥಾಪಿಸಲಾಗಿದೆ. ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ ಪ್ರಕಾರ ದೇವಸ್ಥಾನಗಳನ್ನು ರಾಜ್ಯ ಸರ್ಕಾರ ತನ್ನ ಸಂಪೂರ್ಣ ಸ್ವಾಮ್ಯಕ್ಕೆ ತಂದುಕೊಂಡು, ತನ್ನದೇ ಮತಾಚರಣೆಯ ನಿಯಮ ರೂಪಿಸಬೇಕು ಎಂಬ ಯಾವ ಪ್ರಸ್ತಾಪವೂ ಇರುವುದಿಲ್ಲ. ‘ಸಾರ್ವಜನಿಕ ದೇವಸ್ಥಾನ’ ಎಂದು ಘೋಷಿಸಿಕೊಂಡಿರುವ ದೇವಸ್ಥಾನಗಳ ಆಡಳಿತ ಮಂಡಳಿಯ ವ್ಯವಹಾರಗಳನ್ನು ಇಲಾಖೆಯು ಪರಿಶೀಲಿಸುವ ಅಧಿಕಾರವನ್ನು ಮಾತ್ರವೇ ಹೊಂದಿರುತ್ತದೆ.

ದೇವಸ್ಥಾನಗಳ ಆದಾಯವನ್ನು ದೇವಸ್ಥಾನದ ಅಭಿವೃದ್ಧಿ ಹಾಗೂ ಅದರ ಮತ ನಂಬಿಕೆಯ ಕಾರ್ಯಗಳಿಗೆ ಸದ್ವಿನಿಯೋಗವಾಗುವ ಕುರಿತು ಇಲಾಖೆಯು ನಿಗಾ ವಹಿಸುತ್ತದೆಯೇ ವಿನಹ, ಆದಾಯದ ಚಿಕ್ಕಾಸನ್ನೂ ಸರ್ಕಾರದ ಬೊಕ್ಕಸಕ್ಕೆ ವರ್ಗಾಯಿಸುವ ಅಥವಾ ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ಬಳಸುವ ಯಾವ ನಿಯಮಗಳೂ ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆಯಲ್ಲಿ ಇರುವುದಿಲ್ಲ.

ಶ್ರೀಮಂತ ದೇವಸ್ಥಾನಗಳಲ್ಲಿ ಉಳಿತಾಯ ವಾಗುವ ಆದಾಯದಲ್ಲಿ ಒಂದಿಷ್ಟನ್ನು, ಅದೇ ಮತ ನಂಬಿಕೆಯ ಜೀರ್ಣಾವಸ್ಥೆಯಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ವಿನಿಯೋಗಿಸುವ ತಿದ್ದುಪಡಿ ತಂದಾಗ, ಶ್ರೀಮಂತ ದೇವಸ್ಥಾನಗಳು ಅದನ್ನು ವಿರೋಧಿಸಿದ ಉದಾಹರಣೆಗಳಿವೆ! ಆದರೆ ‘ಸಾರ್ವಜನಿಕ ದೇವಸ್ಥಾನ’ ಎಂದು ಘೋಷಿಸಿಕೊಂಡು, ಎಲ್ಲ ಜಾತಿ ವರ್ಗಗಳಿಂದ ಕಾಣಿಕೆ ಸ್ವೀಕರಿಸಿ ಆದಾಯ ವೃದ್ಧಿಸಿಕೊಳ್ಳುವ ಆಡಳಿತ ಮಂಡಳಿಯಲ್ಲಿ ಸಾಂವಿಧಾನಿಕ ನಿಯಮಗಳನ್ವಯ ಪ್ರಾತಿನಿಧ್ಯ ಇರಬೇಕು ಮತ್ತು ಆದಾಯವು ಪಾರದರ್ಶಕವಾಗಿ ಲೆಕ್ಕಪರಿಶೋಧನೆಗೆ ತೆರೆದುಕೊಳ್ಳಬೇಕು ಎಂಬ ನ್ಯಾಯಬದ್ಧ ನಿಯಮಗಳ ಬಗ್ಗೆ, ವೈದಿಕಶಾಹಿಯು ತಂಟೆ ಎತ್ತುವುದು ಲಾಗಾಯ್ತನಿಂದ ನಡೆಯುತ್ತಿದೆ; ಈ ತಂಟೆಗಳನ್ನು ಸಾಮಾನ್ಯ ಭಕ್ತರು ಸಾಂವಿಧಾನಿಕ ನ್ಯಾಯಾಲಯಗಳಲ್ಲಿ ಪ್ರಶ್ನಿಸುತ್ತಿರುವುದೂ ನಡೆಯುತ್ತಿದೆ.

ವೈದಿಕಶಾಹಿಯ ಲೌಕಿಕ ಯಜಮಾನಿಕೆಗೆ ಸಾಮಾನ್ಯ ಭಕ್ತಗಣವು ಎದುರಾಗಿ ಸಾಂವಿಧಾನಿಕ ಸಂಸ್ಥೆಗಳಿಂದ ನ್ಯಾಯ ಪಡೆದಾಕ್ಷಣವೇ, ವೈದಿಕಶಾಹಿಯು ‘ಮತ ನಂಬಿಕೆ’ಯ ಸ್ವಾಯತ್ತತೆಯಲ್ಲಿ ಸರ್ಕಾರದ ಮಧ್ಯಪ್ರವೇಶವೆಂದು ಟೊಂಕ ಕಟ್ಟಿ ನಿಲ್ಲುವ ವರಸೆಯೇ, ಸದ್ಯಕ್ಕೆ ಇರುವ ಅತಿ ಸೌಮ್ಯ ಸಾಂವಿಧಾನಿಕ ಮಧ್ಯಪ್ರವೇಶವನ್ನು ಸಮರ್ಥಿಸುತ್ತದೆ.

(ಲೇಖಕ: ಚಿಂತಕ, ಮಣಿಪಾಲ ಎಂಐಟಿಯಲ್ಲಿ ಸಿವಿಲ್ ಎಂಜಿನಿಯರಿಂಗ್ ಸಹ ಪ್ರಾಧ್ಯಾಪಕ)

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ವಿದ್ಯೆಗೆ ಬೇಕು ವಿವೇಕ

ವಿದ್ಯೆಗೂ-ವಿವೇಕಕ್ಕೂ ಬಹಳ ವ್ಯತ್ಯಾಸವಿದೆ. ವಿದ್ಯೆ ಎಂದರೆ ಕಲಿಯುವ ಮಾರ್ಗ. ವಿವೇಕ ಎಂದರೆ, ಕಲಿತ ವಿದ್ಯೆಯ ಮೌಲ್ಯ. ವಿದ್ಯೆಯಿಂದ ಬುದ್ಧಿ ಬೆಳೆಯಬಹುದು, ಆದರೆ ವಿವೇಕ ಬೆಳೆಯಲಾರದು. ಅದಕ್ಕೆ ಸಾತ್ವಿಕ ಗುಣದ ಬಲವಿರಬೇಕು. ವಿವೇಕ ಇಲ್ಲದ ವಿದ್ಯೆಯಿಂದ ವಿನಯತೆ-ವಿಧೇಯತೆ ಮೂಡಲಾರದು. ವಿದ್ಯೆ ಕಲಿಯುವ ನೀತಿಯಾದರೆ, ವಿವೇಕ ಬದುಕುವ ರೀತಿ. ತಪ್ಪು ಮಾಡದಂತೆ ಎಚ್ಚರವಹಿಸುವುದು ವಿವೇಕವಾದರೆ, ತಾನೊಬ್ಬನೇ ಉದ್ಧಾರವಾಗಬೇಕೆನ್ನುವುದು ಅವಿವೇಕ. ಸ್ವಾರ್ಥಿ-ವಂಚಕರಲ್ಲಿ ವಿವೇಕ ಇರುವುದಿಲ್ಲ. ಇಂಥ ವಿವೇಕವಿಲ್ಲದ ವಿದ್ಯಾವಂತರಿಂದ ಸಮಾಜ ಹಾಳಾಗುತ್ತದೆ.

ವಿದ್ಯೆಯಿಂದ ಬುದ್ಧಿ ಬೆಳೆಯುತ್ತದೆ, ಬುದ್ಧಿಯಿಂದ ವಿವೇಕ ವೃದ್ಧಿಸುತ್ತದೆ, ವಿವೇಕದಿಂದ ಮಾನವಾಭಿವೃದ್ಧಿ ಆಗುತ್ತದೆ ಅಂತ; ವಿದ್ಯೆಯ ಅಡಿಪಾಯದ ಮೇಲೆಯೇ ನಮ್ಮ ನಾಗರಿಕ ಸಮಾಜದ ಕೋಟೆ ಕಟ್ಟಲಾಯಿತು. ಆದರೆ, ಅಂಥ ಮಾನವ ಸೌಹಾರ್ದದ ಕೋಟೆ ಇಂದು ವಿದ್ಯಾವಂತರಿಂದಲೇ ಕುಸಿಯುತ್ತಿದೆ. ಇದಕ್ಕೆ ಕಲಿಕೆಯಲ್ಲಿನ ದೋಷವೇ ಕಾರಣ. ನಮ್ಮ ಮಕ್ಕಳಿಗೆ ವಿಜ್ಞಾನಿಯಾಗು, ವೈದ್ಯನಾಗು, ಎಂಜಿನಿಯರ್ ಆಗು ಅಂತ ಸಾವಿರಾರು ರೂಪಾಯಿ ಖರ್ಚು ಮಾಡಿ ಶಾಲೆಗೆ ಕಳುಹಿಸುತ್ತೇವೆ. ಆದರೆ, ಒಳ್ಳೇ ವಿವೇಕ ಕಲಿತು, ಸಂಸ್ಕಾರವಂತನಾಗಿ ಬಾಳು ಅಂತ ಯಾವ ಶಾಲೆಗೂ ಕಳುಹಿಸುವುದಿಲ್ಲ. ಇದರಿಂದಾಗಿ ನಮ್ಮ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾದರೂ, ವಿವೇಕವಂತರ ಸಂಖ್ಯೆ ಕಡಿಮೆಯಾಗುತ್ತಿದೆ. ಗುಣವಿಲ್ಲದವರಿಂದ ಸಮಾಜದಲ್ಲಿ ನೈತಿಕತೆ ಕುಸಿಯುತ್ತಿದೆ.

ವಿದ್ಯೆಯಿಂದ ಹಣ ಗಳಿಸುವ ಮಾರ್ಗ ಹೇಳಿಕೊಟ್ಟಂತೆ, ವಿದ್ಯೆಯಿಂದ ಹೇಗೆ ಗುಣ ಸಂಪಾದಿಸಬಹುದೆಂಬುದನ್ನು ನಮ್ಮ ಶಿಕ್ಷಣ ಹೇಳಿಕೊಡುತ್ತಿಲ್ಲ. ಇದರ ಪರಿಣಾಮವಾಗಿ ವಿದ್ಯೆಯಿಂದ ಹಣ ಗಳಿಸುವ ಮಕ್ಕಳು, ಎಲ್ಲವನ್ನೂ ಹಣದಿಂದಲೇ ನೋಡುತ್ತಾರೆ. ಒಡಹುಟ್ಟಿದವರನ್ನು ಹಣದಿಂದಲೇ ಅಳೆಯುತ್ತಾರೆ. ಸಾಕಿಸಲಹಿದ ಹೆತ್ತವರ ಜವಾಬ್ದಾರಿಯನ್ನು ಹಣದಿಂದಲೇ ಕಳೆದುಕೊಳ್ಳುತ್ತಾರೆ. ಸಂಬಂಧಗಳ ಬೆಲೆಗೊತ್ತಿಲ್ಲದ ಅವರು ಹಣದಿಂದಲೇ ತೂಗಲು ಯತ್ನಿಸುತ್ತಾರೆ. ಇದೆಲ್ಲಾ ನಮ್ಮ ಮಕ್ಕಳಿಗೆ ಸಂಸ್ಕಾರ ಗುಣ ಕಲಿಸದ ದುಷ್ಪರಿಣಾಮ. ಇಂಥ ಮಕ್ಕಳ ಹೆತ್ತವರು ತಮ್ಮ ತಪ್ಪಿನ ಫಲವನ್ನು ಇಳಿಗಾಲದ ವೃದ್ಧಾಪ್ಯದ ಇರುಳಲ್ಲಿ ಅನುಭವಿಸುತ್ತಿದ್ದಾರೆ.

ಇಂಥ ಸಂಸ್ಕಾರ ಹೀನ ಮಕ್ಕಳಿಂದ ಹೆತ್ತವರು ಪಡುವ ಬಾಧೆ ಈ ಪರಿಯಾದರೆ, ಸಮಾಜದ ಪಾಡು ಹೇಳತೀರದು. ಹೆತ್ತವರನ್ನೇ ದೇವರಂತೆ ಕಾಣದ ಮಕ್ಕಳು, ಕರ್ತವ್ಯದಲ್ಲಿ ದೇವರನ್ನು ಕಾಣಲು ಸಾಧ್ಯವೆ? ಹಣಗಳಿಸುವ ದ್ರೋಹ ಚಿಂತನೆಯಲ್ಲೇ ಅನ್ಯಾಯ-ಅಕ್ರಮಗಳಲ್ಲಿ ತೊಡಗುತ್ತಾರೆ. ಹೀಗಾಗಿ ಸಮಾಜದಲ್ಲಿ ಕುರುಡು ಕಾಂಚಾಣದ ಕುಣಿತ, ಅನೈತಿಕತೆಯ ಎಲ್ಲೆಮೀರುತ್ತಿದೆ. ಯಾವ ಮಕ್ಕಳಿಂದ ಈ ಸಮಾಜ-ಈ ದೇಶ ನಾಗರಿಕತೆಯಿಂದ ನಳನಳಿಸಬೇಕಿತ್ತೋ, ಅಲ್ಲಿ ಮನುಷ್ಯತನ ನರಳಿ ನರಳಿ ನಿಡುಸುಯ್ಯುತ್ತಿದೆ. ಆದರ್ಶವಿಲ್ಲದ ಮಾನವ ಸಮಾಜ ಉದ್ಧಾರವಾದ ನಿದರ್ಶನವೇ ಜಗತ್ತಿನಲ್ಲಿಲ್ಲ. ಈ ಕಟುಸತ್ಯ ನಮ್ಮ ಜನರಿಗೆ ಅರ್ಥವಾಗದಿದ್ದರೆ, ಇನ್ನೊಂದು ಶತಮಾನವಾದರೂ ಭಾರತ, ಅಭಿವೃದ್ಧಿಯ ಸೆಲೆಗೆ ಹೊರಳಲಾರದು. ಗತಕಾಲದ ಮೌಢ್ಯದ ಬಲೆಗೆ ಸಿಲುಕಿ ನರಳಾಡುತ್ತದೆಯಷ್ಟೆ.

ಪ್ರಸ್ತುತ ಸಮಾಜದಲ್ಲಿ ತಲೆದೋರಿರುವ ಸಮಸ್ಯೆಗಳಿಂದ ಜನ ಪಾಠ ಕಲಿಯುತ್ತಿಲ್ಲ. ವರ್ತಮಾನದ ವರ್ತನೆಯಲ್ಲೂ ಒಳ್ಳೆತನ ಬೆಳೆಸಿಕೊಳ್ಳುತ್ತಿಲ್ಲ. ಭವಿಷ್ಯದ ಬದುಕಿಗೆ ಬೇಕಾದ ಮೌಲ್ಯಗಳನ್ನು ಆದರಿಸುತ್ತಿಲ್ಲ. ತಮಗೇ ಅರಿವಿಲ್ಲದೆ ಸ್ವಾರ್ಥ ಪರರೊಂದಿಗೆ ಕೆಟ್ಟ ದಾರಿ ತುಳಿಯುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಮೌಲ್ಯಭರಿತ ಬದುಕು ಕಾಣೆಯಾಗಿ, ಅನೀತಿ ಆದರಣೀಯವಾಗುತ್ತಿದೆ. ಸುಸಂಸ್ಕೃತ ಬದುಕಿಗೆ ತಾವೇ ಕೊಳ್ಳಿ ಇಟ್ಟು ಬಾಧೆಪಡುತ್ತಿರುವ ಜನ, ಇನ್ನಾದರೂ ತಮ್ಮ ತಪ್ಪು ತಿದ್ದಿಕೊಳ್ಳದಿದ್ದರೆ ಮತ್ತಷ್ಟು ಸಂಕಟಪಡುವುದು ನಿಶ್ಚಿತ. ಗುಣಮೌಲ್ಯ ಬೆಳೆಯಲು ಯಾವ ಉನ್ನತ ವಿದ್ಯೆಯೂ ಬೇಕಿಲ್ಲ, ನಮ್ಮ ಬುದ್ಧಿಯೊಳಗೆ ‘ಎಲ್ಲಾ ನನ್ನವರು, ನನ್ನಂತೆ ಎಲ್ಲರು’ ಎಂಬ ವಿವೇಕ ಇದ್ದರಷ್ಟೇ ಸಾಕು, ‘ಸಚ್ಚಿದಾನಂದ’ದ ಬದುಕು ಸಮಾಜದೆಲ್ಲೆಡೆ ನಳನಳಿಸುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ 24 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ದ್ವÁದಶೀ ಗಂ. 24-4 (ಹ. 3-46) ಶನಿವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 49-0 (ರಾ. 1-45) ಧ್ರುವ ನಾಮ ಯೋಗ ಗಂ 6-13 ಬಾಲವ ಕರಣ ಗಂ. 24-4 ವಿಷ ಗಂ. 8-22 ಅಮೃತ ಗಂ. 31-21: ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-07 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 1 5 9

ಮೇಷ: ಉನ್ನತ ಅಧ್ಯಯನ ನಿಮಿತ್ತ ಪ್ರಯಾಣ. ಆರ್ಥಿಕ ಅನುಕೂಲತೆಗಳ ಅಭಿವೃದ್ಧಿ. ವಸ್ತ್ರಾಭರಣ ಖರೀದಿ. ಆಸ್ತಿ ಲಾಭದ ಲಕ್ಷಣಗಳು ಗೋಚರ.

ವೃಷಭ: ಉದ್ಯೋಗದ ಪ್ರತಿ ಹೆಜ್ಜೆಗಳಲ್ಲಿಯೂ ಪ್ರಗತಿ. ಭೂಮಿ, ನಿವೇಶನಗಳ ವ್ಯವಹಾರದಿಂದಾಗಿ ಹೆಚ್ಚಿನ ಲಾಭ. ಗೆಳೆಯರೊಂದಿಗಿನ ಸಂಬಂಧ ಗಟ್ಟಿಯಾಗಲಿದೆ. ಶತ್ರುಗಳು ನಾಶ ಅಥವಾ ಮಿತ್ರರಾಗುವ ಸಾಧ್ಯತೆ.

ಮಿಥುನ: ಕೃಷಿ ವಿಧಾನದಲ್ಲಿ ಹೊಸತನವನ್ನು ಅಳವಡಿಸಲಿದ್ದೀರಿ. ವಾಹನ ಖರೀದಿಸುವ ಯೋಗ. ಶೇರು ಮತ್ತು ಏಜೆನ್ಸಿ ಉದ್ಯಮದಲ್ಲಿ ತುಂಬ ಉತ್ಕರ್ಷದ ದಿನವಾಗಿ ಕಂಡುಬರುವುದು.

ಕರ್ಕಾಟಕ: ಪಾಲುಗಾರಿಕೆ ವ್ಯವಹಾರ ಅಥವಾ ಮಧ್ಯಸ್ಥಿಕೆಯ ವ್ಯವಹಾರಗಳಲ್ಲಿ ಮನಸ್ತಾಪ. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನಿಮಿತ್ತ ಅಲೆದಾಟ ಸಾಧ್ಯತೆ. ಭತ್ತ, ಅಕ್ಕಿ ವ್ಯಾಪಾರ ಮತ್ತು ಹೋಟೆಲ್ ಉದ್ಯಮಿಗಳಿಗೆ ಅನುಕೂಲ.

ಸಿಂಹ: ಸ್ತ್ರೀಯರು ಸಂಗಾತಿಯ ಪದೋನ್ನತಿಯನ್ನು ನಿರೀಕ್ಷಿಸಬಹುದು. ಪ್ರಯಾಣ ಸಾಧ್ಯತೆಯೂ ಕಂಡುಬರುವುದು. ನೆರೆಹೊರೆಯವರೊಂದಿಗೆ ಬಾಂಧವ್ಯ ವೃದ್ಧಿ. ವೈದ್ಯಕೀಯ ಚಿಕಿತ್ಸೆಯಿಂದಾಗಿ ಗಂಡಾಂತರದಿಂದ ಪರಿಹಾರ.

ಕನ್ಯಾ: ರೈತಾಪಿ ವರ್ಗದವರಿಗೆ ಹೈನುಗಾರಿಕೆ ನಡೆಸುವವರಿಗೆ ಉತ್ತಮ ಆದಾಯ. ಆರೋಗ್ಯದಲ್ಲಿ ಸುಧಾರಣೆ. ಉದ್ಯೋಗ ವ್ಯವಹಾರಗಳು ಸರಾಗವಾಗಿ ನಡೆಯಲಿವೆ. ಶುಭ ಸಮಾಚಾರಗಳನ್ನು ಕೇಳಲಿದ್ದೀರಿ.

ತುಲಾ: ವ್ಯವಹಾರಗಳಲ್ಲಿ ಅನುಕೂಲ. ಸಂಗ್ರಹಿಸಲ್ಪಟ್ಟ ವಸ್ತುಗಳಿಂದ ಹೆಚ್ಚಿನ ಲಾಭ. ವಾಹನ ಖರೀದಿಸುವ ಸಾಧ್ಯತೆ. ಸರ್ಕಾರಿ ನೌಕರಸ್ಥರಿಗೆ ವಿಪರೀತ ಕಾರ್ಯ ಬಾಹುಳ್ಯದಿಂದಾಗಿ ಬೇಸರ.

ವೃಶ್ಚಿಕ: ಉದ್ಯೋಗಾಕಾಂಕ್ಷಿ ಸ್ತ್ರೀಯರಿಗೆ ಉದ್ಯೋಗ. ಅಧಿಕಾರಿಗಳ ಔದಾರ್ಯ ಹಾಗೂ ಸಾಮಾಜಿಕ ಗೌರವಾದರಗಳಿಗೆ ಪಾತ್ರರಾಗಲಿದ್ದೀರಿ. ವಯೋವೃದ್ಧರಿಗೆ ಉಸಿರಾಟದಲ್ಲಿ ತೊಂದರೆ.

ಧನು: ವ್ಯಾಪಾರ ಉದ್ಯಮಗಳಲ್ಲಿ ಸ್ವಲ್ಪಮಟ್ಟಿನ ಮಂದಗತಿ ಕಾಣಬಹುದು. ವಿದೇಶ ಪ್ರಯಾಣದ ಸಾಧ್ಯತೆ. ಬ್ಯಾಂಕಿಂಗ್ ಮತ್ತು ಹಣಕಾಸ ವ್ಯವಹಾರವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದು ಉತ್ತಮ. ಆರೋಗ್ಯದಲ್ಲಿ ಚೇತರಿಕೆ.

ಮಕರ: ನೂತನ ಉದ್ಯಮ ಅಥವಾ ಕೈಗಾರಿಕೆಯನ್ನು ಸ್ಥಾಪಿಸುವ ನಿಟ್ಟಿನ ಚಟುವಟಿಕೆಗಳು ಭರದಿಂದ ಸಾಗುವವು. ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರಗತಿ. ಕ್ರೀಡಾ ಪಟುಗಳಿಗೆ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವವರಿಗೆ ವಿಜಯ ಮಾಲೆ.

ಕುಂಭ: ಮನೆಯಲ್ಲಿನ ಸಮಸ್ಯೆಗಳು ಪರಿಹಾರಗೊಂಡು ನೆಮ್ಮದಿ. ಗೃಹ ನಿರ್ಮಾಣ ಅಥವಾ ನವೀಕರಣದ ಸಾಧ್ಯತೆ. ನೀರಾವರಿ ಹೊಂದಿದ ಭೂಮಿಯನ್ನು ಖರೀದಿಸುವ ಸಾಧ್ಯತೆ.

ಮೀನ: ನೌಕರಸ್ಥರಿಗೆ ಬಡ್ತಿ ದೊರಕುವ ಸಾಧ್ಯತೆ. ರಾಜಕೀಯ ವ್ಯಕ್ತಿಗಳಿಗೆ ಉನ್ನತ ಸ್ಥಾನ ಮಾನಗಳು ದೊರಕಲಿದೆ. ಸಂಪತ್ತುಗಳಿಗೆ ಕಳ್ಳಕಾಕರ ಭಯ ಎದುರಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 24-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಹೊಸ ವ್ಯವಹಾರಗಳನ್ನು ಪ್ರಾರಂಭಿಸಲಿದ್ದೀರಿ. ಅಪೇಕ್ಷಿತರಿಗೆ ಸಂತಾನ ಭಾಗ್ಯ ದೊರಕುವ ಸುಯೋಗವಿದೆ. ಉದ್ಯೋಗಸ್ಥರಿಗೆ ನೆಮ್ಮದಿ ಸಂತಸ ದೊರಕುವುದು. ಮನೆಯಲ್ಲಿ ಆರ್ಥಿಕ ಸ್ಥಿತಿ ಉತ್ತಮಗೊಂಡು ಸುಖಾನುಭವ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೋವಿಡ್-19 ಕಾರಣದಿಂದ ಉಸಿರಾಟದ ತೊಂದರೆ ಅನುಭವಿಸುತ್ತಿರುವವರು ಕರ್ಪೂರ, ಲವಂಗ, ಅಜವಾನಿ ಮತ್ತು ನೀಲಗಿರಿ ಎಣ್ಣೆಯನ್ನು ಸೇರಿಸಿ ಉಜ್ಜಿ ಒಂದು ಬಟ್ಟೆಯಲ್ಲಿ ಗಂಟು ಕಟ್ಟಬೇಕು. ಆ ಗಂಟನ್ನು ಒತ್ತಿದಾಗ ಬರುವ ಘಾಟನ್ನು ಉಸಿರಾಡಿದರೆ, ಉಸಿರಾಟದ ಸಮಸ್ಯೆ ಬಗೆಹರಿಯುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ ಎಂಬ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೇಂದ್ರ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಸಹ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಇದನ್ನು ಹಂಚಿಕೊಂಡಿದ್ದಾರೆ.

ಆದರೆ ಕೇಂದ್ರ ಆರೋಗ್ಯ ಸಚಿವಾಲಯವು ಈವರೆಗೆ ಬಿಡುಗಡೆ ಮಾಡಿರುವ ಕೋವಿಡ್-19 ಮಾರ್ಗಸೂಚಿಯಲ್ಲಿ ಈ ಚಿಕಿತ್ಸೆಯ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ. ಕೆಮ್ಮು ಮತ್ತು ಉಸಿರಾಟದ ಸಮಸ್ಯೆಯನ್ನು ಲವಂಗವು ತಕ್ಷಣದ ಮಟ್ಟಿಗೆ ಸುಧಾರಿಸುತ್ತದೆಯಾದರೂ, ಕೋವಿಡ್‌ನಿಂದ ಬಂದಿರುವ ಉಸಿರಾಟದ ಸಮಸ್ಯೆಯನ್ನು ಹೋಗಲಾಡಿಸುತ್ತದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಪದಬಂಧ 4576 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಾಟಕದ ನಿರ್ದೇಶಕ ಅಥವಾ ಮುಖ್ಯ ನಟ (4)
3.ಅದೃಷ್ಟವಿಲ್ಲದ ದುರ್ದೈವಿ (4)
4.ಪಟ್ಟಾಗಿ ಕುಳಿತು ವಾಚನ ಮಾಡು (3)
5.ಮೆಚ್ಚುಗೆಗೆ ಪಾತ್ರನಾದವನು (4)
7.ಬಟ್ಟೆಗಳನ್ನು ಶುಭ್ರಗೊಳಿಸುವವ (4)
9.ಇದು ಬೇರೆಯವರ ಹಣ (4)
11.ಇದು ಸವೆದು ಹೋದುದು (4)
12.ಅನೇಕ ಮನೆಗಳುಳ್ಳ ಆವಾರ (3)
14.ಜೈನ ತೀರ್ಥಂಕರನಿವನು (4)
15.ತಿರುಪೆ ಬೇಡುವವ ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ
1.ಒಳ್ಳೆಯ ಮಾತು (2)
2.ಪುಸ್ತಕದ ಮೇಲುಹೊದಿಕೆ (4)
3.ಆಗ ತಾನೇ ಅರಳಿರುವ ಪುಷ್ಪ (4)
6.ತೀರದ ಹತ್ತಿರದಲ್ಲಿದ್ದಾಗಿನ ಅಂಧಕಾರ (3)
8.ವಾದ್ಯವನ್ನು ನುಡಿಸುವವನು (3)
10.ಕೆನೆಕಡೆದು ಹೊಸದಾಗಿ ತೆಗೆದ ಬೆಣ್ಣೆ (4)
11.ಈಕೆ ವಿದ್ಯಾಧಿದೇವತೆ (4)
13.ಅಗ್ನಿ ಇಲ್ಲಿ ಕಾಣಿಸುತ್ತಿದೆಯಲ್ಲಾ? (2)

1			2	■	3			
	■	■		■		■	■	■
■	■	■	4			■	■	■
5	6			■	7		8	
■		■	■	■	■	■		■
9			10	■	11			
■	■	■	12			■	■	■
■	■	■		■		■	■	13
14				■	15			

4575ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜ್ಞಾತಿಕಲಹ 3.ಕುಲಾವಿ 5.ಕಲೋಪಾಸನೆ 7.ಸಾವಿರ 8.ಮತಿಭ್ರಮಣೆ 10.ಮುಷ್ಕರ 11.ವಾರಸುದಾರ 14.ಕುಲುಮೆ 15.ಅನುವಾದಕ

ಮೇಲಿಂದ ಕೆಳಕ್ಕೆ: 1.ಜ್ಞಾಪಕ 2.ಕತಪಾ 4.ವಿಧುರ 6.ಸಮ್ಮತಿ 7.ಸಾರಣೆ 8.ಮಸೂರ 9.ಮಯೂರ 10.ಮುಲುಕು 12.ಸುದಿವಾ 13.ರಸಿಕ

ಸುಡೊಕು 4962

				1	6		8	
		6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4961 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಷೇರುಪೇಟೆ ವಹಿವಾಟು 202



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,406
ಇಂದಿನ ಅಂತ್ಯ	14,341
	64
ದಿನದ ಗರಿಷ್ಠ	14,461

ವಿನಿಮಯ ದರ

$ ಡಾಲರ್	75.01
£ ಪೌಂಡ್	104.15
€ ಯೂರೊ	90.48
¥ ಯೆನ್ (100ಕ್ಕೆ)	69.46

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ಕಚ್ಚಾ)	₹1630 (1640)
ಸೋಯಾ (ಕಚ್ಚಾ)	₹1420 (1425)
ಸೂರ್ಯಕಾಂತಿ (ಕಚ್ಚಾ)	₹1730 (1730)
ಪಾಮೋಲಿನ್	₹1320 (1330)

ಕೊಬ್ಬರಿ ಧಾರಣೆ



ಬೆಂಗಳೂರು	₹15200-16000
ತುರುವೇಕೆರೆ	₹16100-16100
ತಿಪಟೂರು	₹15500-16500

ಈರುಳ್ಳಿ ಧಾರಣೆ



ದೊಡ್ಡ	₹1000-1200
ಮಧ್ಯಮ	₹800-1000
ಸಣ್ಣ	₹500-800

ಮುಂಬೈ ಧಾರಣೆ

ಶೇಂಗಾ

23-4-2021

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	1415 (1422)
ಪಾಮ್ ವಾರದ ಡೆಲಿವರಿ	1318 (1328)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

47,650 (47,550)

ಬೆಳ್ಳಿ ಕೆ.ಜಿ

69,200 (69,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕ್ರೆಡಾಯ್ ಅಧ್ಯಕ್ಷರಾಗಿ ಚೈತನ್ಯ ಕುಲಕರ್ಣಿ ಆಯ್ಕೆ



ಬೆಳಗಾವಿ: ಕ್ರೆಡಾಯ್ (ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್) ಕರ್ನಾಟಕ ಅಧ್ಯಕ್ಷರಾಗಿ ಇಲ್ಲಿನ ಚೈತನ್ಯ ಕುಲಕರ್ಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶುಕ್ರವಾರ ವರ್ಚುವಲ್ ವೇದಿಕೆಯಲ್ಲಿ ನಡೆದ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ 2021-23ನೇ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಇದೇ ಮೊದಲ ಬಾರಿಗೆ ಬೆಂಗಳೂರಿನ ಹೊರಗಿನ ಸದಸ್ಯರೊಬ್ಬರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಕಟಪೂರ್ವ ಅಧ್ಯಕ್ಷ ಆಸ್ಟಿನ್ ರೋಚ್ ಅವರು ಚೈತನ್ಯ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ವಿಜಯಪುರದ ಅನುಪಮ್ ರುನುವಾಲ್ (ಕಾರ್ಯದರ್ಶಿ), ಬೆಂಗಳೂರಿನ ಶಿವರಾಮ ಕುಮಾರ ಮಲಕಾಲ (ಖಜಾಂಚಿ), ಸಂಜೋಗ್ ರಾಠಿ ಮತ್ತು ಡಿ.ಬಿ. ಮೆಹ್ತಾ (ಉಪಾಧ್ಯಕ್ಷರು), ಕೈಸ್ ನೂರಾನಿ ಹಾಗೂ ಸಿರಾಜ್ ಅಹ್ಮದ್ (ಜಂಟಿ ಕಾರ್ಯದರ್ಶಿ), ಪ್ರದೀಪ್ ಡಿ.ರಾಯ್ಕರ್ (ಪ್ರೆಸಿಡೆಂಟ್ ಎಲೆಕ್ಟ್) ಆಗಿ ಆಯ್ಕೆಯಾದರು.

ರಾಷ್ಟ್ರೀಯ ಉಪಾಧ್ಯಕ್ಷ ಜಿ.ರಾಮ ರಡ್ಡಿ ಮುಖ್ಯಅತಿಥಿಯಾಗಿ ಪಾಲ್ಗೊಂಡಿದ್ದರು. ರಾಷ್ಟ್ರೀಯ ಕಾರ್ಯಕಾರಿ ಸದಸ್ಯ ಶಂಕರ ಶಾಸ್ತ್ರಿ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು. ರಾಷ್ಟ್ರೀಯ ಸಮಿತಿ ಸದಸ್ಯ ಬಾಲಕೃಷ್ಣ ಹೆಗಡೆ, ರಾಷ್ಟ್ರೀಯ ಮಾಜಿ ಉಪಾಧ್ಯಕ್ಷ ನಾಗರಾಜ ರೆಡ್ಡಿ, ರಾಷ್ಟ್ರೀಯ ಸಮಿತಿ ಸದಸ್ಯ ಕೆ. ಶ್ರೀರಾಮ, ಕರ್ನಾಟಕ ಶಾಖೆಯ ಮಾಜಿ ಅಧ್ಯಕ್ಷ ಜಗದೀಶ ಬಾಬು ಇದ್ದರು.

ಲಾಕ್‌ಡೌನ್‌ನಿಂದ ನಷ್ಟ, ಲಸಿಕೆಯಿಂದ ಲಾಭ

ಮುಂಬೈ (ಪಿಟಿಐ): ಕೋವಿಡ್–19 ತಡೆಯಲು ಸಂಪೂರ್ಣವಾಗಿ ಲಾಕ್‌ಡೌನ್ ಜಾರಿಗೆ ತರುವುದಕ್ಕಿಂತಲೂ ತ್ವರಿತವಾಗಿ ಲಸಿಕೆ ನೀಡುವುದು ಕಡಿಮೆ ವೆಚ್ಚದ ಕೆಲಸ ಎಂದು ಎಸ್‌ಬಿಐನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಲಸಿಕೆ ನೀಡಲು ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇಕಡ 0.1ರಷ್ಟು ಹಣ ಸಾಕಾಗುತ್ತದೆ. ಆದರೆ, ಲಾಕ್‌ಡೌನ್‌ಗಳಿಂದಾಗಿ ದೇಶವು ಜಿಡಿಪಿಯ ಶೇ 0.7ರಷ್ಟು ಮೊತ್ತವನ್ನು ಈಗಾಗಲೇ ಕಳೆದುಕೊಂಡಿದೆ ಎಂದು ಎಸ್‌ಬಿಐನ ಮುಖ್ಯ ಆರ್ಥಿಕ ಸಲಹೆಗಾರ ಸೌಮ್ಯಕಾಂತಿ ಘೋಷ್ ಅವರು ಸಿದ್ಧಪಡಿಸಿರುವ ವರದಿಯಲ್ಲಿ ಹೇಳಲಾಗಿದೆ.

ಕೋವಿಡ್–19 ತಡೆಯಲು ಬೇರೆ ಬೇರೆ ರಾಜ್ಯಗಳು ನಿರ್ಬಂಧಗಳನ್ನು ಜಾರಿಗೆ ತರುತ್ತಿರುವ ಕಾರಣ ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದ ದೇಶದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಎಸ್‌ಬಿಐ ತಗ್ಗಿಸಿದೆ. ಜಿಡಿಪಿ ಬೆಳವಣಿಗೆ ಶೇಕಡ 11ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜಿಸಿದ್ದ ಎಸ್‌ಬಿಐ, ಈಗ ಅದು ಶೇ 10.4 ಆಗಬಹುದು ಎಂದು ಹೇಳಿದೆ.



ದೇಶದ ಬಹುತೇಕ ರಾಜ್ಯಗಳಲ್ಲಿ ಈಗ ಭಾಗಶಃ ಲಾಕ್‌ಡೌನ್, ಸ್ಥಳೀಯ ಮಟ್ಟದ ಲಾಕ್‌ಡೌನ್ ಅಥವಾ ವಾರಾಂತ್ಯದ ಲಾಕ್‌ಡೌನ್ ಜಾರಿಗೆ ಬಂದಿದೆ. 'ಸೀಮಿತ ಪ್ರಮಾಣದ ಲಾಕ್‌ಡೌನ್ ಕ್ರಮಗಳಿಂದಾಗಿ ಆಗುವ ಒಟ್ಟು ನಷ್ಟ ಅಂದಾಜು ₹ 1.15 ಲಕ್ಷ ಕೋಟಿ' ಎಂದು ಘೋಷ್ ಹೇಳಿದ್ದಾರೆ. '13 ದೊಡ್ಡ ರಾಜ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ನಾವು ಅಂದಾಜು ವೆಚ್ಚವನ್ನು ಲೆಕ್ಕ ಹಾಕಿದ್ದೇವೆ. ಇಷ್ಟೂ ರಾಜ್ಯಗಳಲ್ಲಿ ಜನರಿಗೆ ಲಸಿಕೆ ನೀಡಲು ಅಗತ್ಯವಿರುವ ಮೊತ್ತವು ಈ ರಾಜ್ಯಗಳ ಒಟ್ಟು ಜಿಡಿಪಿಯ ಶೇ 0.1ರಷ್ಟು ಆಗಲಿದೆ' ಎಂದು ಘೋಷ್ ಅವರು ತಿಳಿಸಿದ್ದಾರೆ.

ಈ ರಾಜ್ಯಗಳ ಶೇ 50ರಷ್ಟು ಜನರಿಗೆ ಕೇಂದ್ರ ಸರ್ಕಾರದ ಕಡೆಯಿಂದ ಲಸಿಕೆ ನೀಡಲಾಗುತ್ತದೆ ಎಂದು ಅಂದಾಜು ಮಾಡಿ ಘೋಷ್ ಅವರು ಈ ಲೆಕ್ಕ ಹಾಕಿದ್ದಾರೆ. ಮಹಾರಾಷ್ಟ್ರದಲ್ಲಿ ಲಾಕ್‌ಡೌನ್ ಕ್ರಮಗಳು ಜಾರಿಗೆ ಬಂದ ಕಾರಣದಿಂದಾಗಿ ಏಪ್ರಿಲ್ 1ರಿಂದ 12ರ ನಡುವೆ ಅಂದಾಜು 4.32 ಲಕ್ಷ ವಲಸೆ ಕಾರ್ಮಿಕರು ತಮ್ಮ ರಾಜ್ಯಗಳಿಗೆ ಮರಳಿದ್ದಾರೆ ಎಂದು ವರದಿ ಹೇಳಿದೆ.

ಲಸಿಕೆ ನೀಡುವ ವಿಚಾರದಲ್ಲಿ ದೇಶವು ದೊಡ್ಡ ಮುನ್ನಡೆ ಸಾಧಿಸಿದ್ದರೂ, ಇಸ್ರೇಲ್, ಚಿಲಿ ಹಾಗೂ ಬ್ರಿಟನ್‌ನಂತಹ ದೇಶಗಳಿಗಿಂತ ಹಿಂದೆ ಉಳಿದಿದೆ. ಭಾರತದ ಒಟ್ಟು ಜನಸಂಖ್ಯೆಯ ಶೇ 1.2ರಷ್ಟು ಜನರಿಗೆ ಮಾತ್ರ ಇದುವರೆಗೆ ಲಸಿಕೆ ನೀಡಲಾಗಿದೆ ಎಂದು ಅವರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ರಿಲಯನ್ಸ್ ತೆಕ್ಕೆಗೆ ಸ್ಟೋಕ್ ಪಾರ್ಕ್

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯು ಬ್ರಿಟನ್ನಿನ 'ಸ್ಟೋಕ್ ಪಾರ್ಕ್'ಅನ್ನು ಒಟ್ಟು ₹ 592 ಕೋಟಿಗೆ ಖರೀದಿಸಿದೆ. ಇದು ಐಷಾರಾಮಿ ಗಾಲ್ಫ್ ರೆಸಾರ್ಟ್ ಹಾಗೂ ಕ್ಲಬ್‌ಅನ್ನು ಒಳಗೊಂಡಿದೆ.

ರಿಲಯನ್ಸ್ ಕಂಪನಿಯು ಒಬೆರಾಯ್ ಹೋಟೆಲ್‌ಗಳಲ್ಲಿ ಈಗಾಗಲೇ ಷೇರುಪಾಲು ಹೊಂದಿದೆ.

ಬ್ರಿಟನ್ನಿನ ಬಕಿಂಗ್‌ಹ್ಯಾಮ್‌ಶೈರ್‌ನಲ್ಲಿ ಹೋಟೆಲ್ ಹಾಗೂ ಗಾಲ್ಫ್ ಕೋರ್ಸ್ ಹೊಂದಿರುವ ಕಂಪನಿಯು ರಿಲಯನ್ಸ್‌ನ ಆಸ್ತಿಯಾಗಲಿದೆ. 'ಸ್ಟೋಕ್ ಪಾರ್ಕ್ ಲಿಮಿಟೆಡ್‌ನ ಅಷ್ಟೂ ಷೇರುಗಳನ್ನು ರಿಲಯನ್ಸ್‌ನ ಅಂಗಸಂಸ್ಥೆಯಾದ ರಿಲಯನ್ಸ್ ಇಂಡಸ್ಟ್ರೀಸ್ ಇನ್ವೆಸ್ಟ್‌ಮೆಂಟ್ಸ್ ಆ್ಯಂಡ್ ಹೋಲ್ಡಿಂಗ್ಸ್ ಲಿಮಿಟೆಡ್ ಖರೀದಿಸಿದೆ' ಎಂದು ರಿಲಯನ್ಸ್ ಕಂಪನಿಯು ಷೇರು ಮಾರುಕಟ್ಟೆಗೆ ಗುರುವಾರ ತಿಳಿಸಿದೆ. ಅಂಬಾನಿ ಅವರು ಬ್ರಿಟನ್ ಮೂಲದ ಖ್ಯಾತ ಕಂಪನಿಗಳನ್ನು ಖರೀದಿಸುತ್ತಿರುವುದು ಇದು ಎರಡನೆಯ ಬಾರಿ. ಈ ಹಿಂದೆ 2019ರಲ್ಲಿ ಅಂಬಾನಿ ಅವರು ಬ್ರಿಟನ್ನಿನ ಹ್ಯಾಮ್ಲೀಸ್ ಆಟಿಕೆ ಅಂಗಡಿಯನ್ನು ಖರೀದಿಸಿದ್ದರು.

ಸ್ಟೋಕ್ ಪಾರ್ಕ್‌ಗೂ ಸಿನಿಮಾ ಜಗತ್ತಿಗೂ ನಿಕಟ ನಂಟು ಇದೆ. ಜೇಮ್ಸ್ ಬಾಂಡ್ ಸರಣಿಯ 'ಗೋಲ್ಡ್‌ಫಿಂಗರ್' ಹಾಗೂ 'ಟುಮಾರೊ ನೆವರ್ ಡೈಸ್' ಸಿನಿಮಾಗಳ ಚಿತ್ರೀಕರಣ ನಡೆದಿದ್ದು ಸ್ಟೋಕ್ ಪಾರ್ಕ್‌ನಲ್ಲಿ. ಸ್ಟೋಕ್ ಪಾರ್ಕ್‌ನಲ್ಲಿ 49 ಐಷಾರಾಮಿ ಕೊಠಡಿಗಳು, 13 ಟೆನ್ನಿಸ್ ಅಂಗಣಗಳು, 14 ಎಕರೆ ಉದ್ಯಾನವನ ಕೂಡ ಇವೆ.

ಎಚ್‌ಸಿಎಲ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ನಿವ್ವಳ ಲಾಭದಲ್ಲಿ ಶೇಕಡ 6.1ರಷ್ಟು ಇಳಿಕೆ ಆಗಿದೆ. ಈ ತ್ರೈಮಾಸಿಕದಲ್ಲಿ ಕಂಪನಿಯು ₹ 2,962 ಕೋಟಿ ಲಾಭ ಗಳಿಸಿದೆ.

ಕಂಪನಿಯ ವಾರ್ಷಿಕ ವಹಿವಾಟು 10 ಬಿಲಿಯನ್ ಅಮೆರಿಕನ್ ಡಾಲರ್‌ನ (₹ 74 ಸಾವಿರ ಕೋಟಿ) ಗಡಿ ದಾಡಿದ ಕಾರಣಕ್ಕೆ, ಪ್ರತಿ ಷೇರಿಗೆ ₹ 10ರ ವಿಶೇಷ ಡಿವಿಡೆಂಡ್ ಘೋಷಿಸಲಾಗಿದೆ. ಕಂಪನಿಯು ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹ 3,154 ಕೋಟಿ ನಿವ್ವಳ ಲಾಭ ಗಳಿಸಿತ್ತು.

202 ಅಂಶ ಇಳಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಕೋವಿಡ್–19ಕ್ಕೆ ಸಂಬಂಧಿಸಿದ ಕೆಟ್ಟ ಸುದ್ದಿಗಳು ಶುಕ್ರವಾರ ಷೇರು ಮಾರುಕಟ್ಟೆ ಸಂವೇದಿ ಸೂಚ್ಯಂಕಗಳು ಕುಸಿತ ಕಾಣುವಂತೆ ಮಾಡಿದವು. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ನಕಾರಾತ್ಮಕ ವಹಿವಾಟುಗಳು ಕೂಡ ಸೂಚ್ಯಂಕಗಳು ಕುಸಿಯುವಂತೆ ಮಾಡಿದವು.

ಸೆನ್ಸೆಕ್ಸ್ 202 ಅಂಶ, ನಿಫ್ಟಿ 64 ಅಂಶ ಕುಸಿತ ಕಂಡವು. ಇದರಿಂದಾಗಿ ಈ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಒಟ್ಟು 953 ಅಂಶ, ನಿಫ್ಟಿ ಒಟ್ಟು 276 ಅಂಶ ಇಳಿಕೆ ಕಂಡಂತೆ ಆಗಿದೆ.

'ಭಾರತವು ಕೊರೊನಾ ವೈರಾಣುವಿನ ಕೇಂದ್ರಬಿಂದುವಿನಂತೆ ಆಗಿದೆ. ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ. ಇದು ಸೂಚ್ಯಂಕಗಳ ಮೇಲೆ ಪ್ರಭಾವ ಬೀರಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ರುಸ್ಮಿಕ್ ಓಜಾ ಹೇಳಿದ್ದಾರೆ.

'ಬೇರೆ ಬೇರೆ ರಾಜ್ಯಗಳಲ್ಲಿ ಜಾರಿಗೆ ಬಂದಿರುವ ಲಾಕ್‌ಡೌನ್ ಕ್ರಮಗಳು ಬೇಡಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳ ಮೇಲೆ ಪರಿಣಾಮ ಉಂಟುಮಾಡಲಿವೆ. ಹಲವು ಕೆಟ್ಟ ಸಂಗತಿಗಳು ಒಟ್ಟಾಗಿ ಎದುರಾಗಿವೆ. ಇವು ಷೇರು ಮಾರುಕಟ್ಟೆಯ ಮೇಲೆ ಪ್ರಭಾವ ಬೀರಬಲ್ಲವು' ಎಂದು ಓಜಾ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.06ರಷ್ಟು ಕಡಿಮೆ ಆಗಿ ಪ್ರತಿ ಬ್ಯಾರೆಲ್‌ಗೆ 65.36 ಅಮೆರಿಕನ್ ಡಾಲರ್‌ನಂತೆ ಮಾರಾಟವಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-41000
ಹಳತು	42500-50500

ಕಾರ್ಕಳ

ಹೊಸತು	36000-41000
ಹಳತು	46000-50500
ಚಿಪ್ಪು	26190-31210

ಕುಮಟಾ

ಕೋಕ	19299-28699
ಫ್ಯಾಕ್ಟರಿ	1279-15900
ಹಳೆಚಾಲಿ	37099-38399
ಹೊಸಚಾಲಿ	32299-36019

ಕುಂದಾಪುರ

ಹಳೆಚಾಲಿ	45000-49000
ಹೊಸಚಾಲಿ	35000-40000

ಪುತ್ತೂರು

ಕೋಕ	9500-24000
ಹೊಸತು	28500-41000

ಶಿವಮೊಗ್ಗ

ಬೆಟ್ಟೆ	41200-43470
ಗೊರಬಲು	16166-30921
ರಾಶಿ	36009-41000
ಸರಕು	47699-69009

ಯಲ್ಲಾಪುರ

ಆಪಿ	45699-45699
ಬಿಳಿಗೋಟು	25109-31599
ಚಾಲಿ	31699-36340
ಕೋಕ	18699-28299
ಕೆಂಪುಗೋಟು	26899-32919
ರಾಶಿ	39900-44384
ತಟ್ಟಿಬೆಟ್ಟೆ	33619-39315

ಸಿದ್ದಾಪುರ

ಬಿಳಿಗೋಟು	24108-30099
ಚಾಲಿ	33899-35509
ಕೋಕ	25099-29869
ಕೆಂಪುಗೋಟು	26019-28889
ರಾಶಿ	38099-41099
ತಟ್ಟಿಬೆಟ್ಟೆ	29249-39509

ರೇಷ್ಮೆಗೂಡು ಮಾರುಕಟ್ಟೆ

ರಾಮನಗರ

ಮಿಶ್ರ ತಳಿ	20-380
ದ್ವಿತಳಿ	255-430

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,150	---	---	---ಸೆಂಟ್ಸ್
ಎಸಿ	4060	---	---	
ಆರ್‌ಪಿ	5100	---	---	
ಆರ್‌ಸಿ	2,900	---	---	--- ಡಾಲರ್ಸ್

ನಾರ್ವೆಯ ಪರ್ವತಾರೋಹಿಗೆ ಕೋವಿಡ್ ದೃಢ

ಕಠ್ಮಂಡು (ಎಪಿ): ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್‌ನಲ್ಲೂ ಕೋವಿಡ್–19 ಪ್ರಕರಣವೊಂದು ಪತ್ತೆಯಾಗಿದೆ.

ಇಲ್ಲಿನ ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿದ್ದ ನಾರ್ವೆಯ ಪರ್ವತಾರೋಹಿಯೊಬ್ಬರಿಗೆ ಈಚೆಗೆ ಕೋವಿಡ್–19 ಇರುವುದು ಪರೀಕ್ಷೆಯಿಂದ ದೃಢಪಟ್ಟ ನಂತರ ಅವರನ್ನು ಹೆಲಿಕಾಪ್ಟರ್ ಮೂಲಕ ಕಠ್ಮಂಡುವಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.



ಇಂಡೋನೇಷ್ಯಾದ ಪೂರ್ವ ಜಾವಾ ಪ್ರದೇಶದಲ್ಲಿ ಜಲಾಂತರ್ಗಾಮಿಗಾಗಿ ನಡೆದ ಹುಡುಕಾಟ

ಜಲಾಂತರ್ಗಾಮಿ ನಾಪತ್ತೆ: ಆಮ್ಲಜನಕ ಮುಗಿಯುವ ಆತಂಕ

ಜಕಾರ್ತ, ಇಂಡೊನೇಷ್ಯಾ (ಎಪಿ): ಇಂಡೊನೇಷ್ಯಾದ ಬಾಲಿ ದ್ವೀಪದ ಸಮೀಪ ಬುಧವಾರ ಸಮರಾಭ್ಯಾಸದ ವೇಳೆ ನಾಪತ್ತೆಯಾಗಿರುವ ಕೆ.ಆರ್.ಐ. ನಂಗಲ್ಲಾ 402 ಜಲಾಂತರ್ಗಾಮಿಯಲ್ಲಿ ಸಂಗ್ರಹವಿರುವ ಆಮ್ಲಜನಕ ಶನಿವಾರ ಬೆಳಿಗ್ಗೆ 3 ಗಂಟೆಯ ವೇಳೆಗೆ ಕೊನೆಗೊಳ್ಳಲಿದ್ದು, 53 ಮಂದಿ ನಾವಿಕರ ಬಗ್ಗೆ ಆತಂಕ ಹೆಚ್ಚತೊಡಗಿದೆ.

'ಜಲಾಂತರ್ಗಾಮಿ ಎಲ್ಲಿದೆ ಎಂಬುದು ಇನ್ನೂ ತಿಳಿದಿಲ್ಲ. ಅದನ್ನು ಪತ್ತೆಹಚ್ಚುವ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಲಾಗುವುದು. ಆಮ್ಲಜನಕ ಖಾಲಿಯಾಗುವ ಮೊದಲಾಗಿಯೇ ಅದನ್ನು ಪತ್ತೆಹಚ್ಚಲು ಭಾರಿ ಪ್ರಯತ್ನ ನಡೆಸಲಾಗಿದೆ' ಎಂದು ಸೇನಾ ವಕ್ತಾರ ಮೇ.ಜ.ಅಚ್ಮಡ್ ರಿಯಾದ್ ತಿಳಿಸಿದರು.

24ಕ್ಕೂ ಅಧಿಕ ನೌಕಾಪಡೆ ಮತ್ತು ಇತರ ಹಡಗುಗಳು ಜಲಾಂತರ್ಗಾಮಿಗಾಗಿ ಶೋಧ ನಡೆಸುತ್ತಿವೆ. ಸೋನಾರ್ ಉಪಕರಣಗಳ ಸಹಿತ ಅತ್ಯಾಧುನಿಕ ಶೋಧ ಉಪಕರಣಗಳನ್ನು ಒಳಗೊಂಡ ಆಸ್ಟ್ರೇಲಿಯಾದ ಹಡಗೊಂದು ಸಹ ಶುಕ್ರವಾರ ಬರಲಿದ್ದು, ಶೋಧ ತೀವ್ರಗೊಳ್ಳಲಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕನ್ ಎಕ್ಸ್‌ಪ್ರೆಸ್, ಡೈನರ್ಸ್ ಕ್ಲಬ್‌ಗೆ ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ): ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕಿಂಗ್ ಕಾರ್ಪ್ ಮತ್ತು ಡೈನರ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಲಿ. ಕಂಪನಿಗಳು ಹೊಸ ಗ್ರಾಹಕರನ್ನು ತಮ್ಮತ್ತ ಸೆಳೆಯುವಂತಿಲ್ಲ ಎಂದು ಆರ್‌ಬಿಐ ತಾಕೀತು ಮಾಡಿದೆ. ಈ ಆದೇಶವು ಮೇ 1ರಿಂದ ಜಾರಿಗೆ ಬರಲಿದೆ.

ಈ ಆದೇಶದಿಂದ ಕಂಪನಿಗಳ ಹಾಲಿ ಗ್ರಾಹಕರಿಗೆ ಯಾವುದೇ ತೊಂದರೆ ಇಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. 'ಪಾವತಿ ವ್ಯವಸ್ಥೆಯ ದತ್ತಾಂಶವನ್ನು ಸಂಗ್ರಹಿಸಿ ಇಡುವುದಕ್ಕೆ ಸಂಬಂಧಿಸಿದ ನಿರ್ದೇಶನಗಳನ್ನು ಈ ಎರಡು ಕಂಪನಿಗಳು ಪಾಲಿಸಿಲ್ಲದಿರುವುದು ಕಂಡುಬಂದಿದೆ' ಎಂದು ಆರ್‌ಬಿಐ ಹೇಳಿದೆ.

ಪಾವತಿ ವ್ಯವಸ್ಥೆಗೆ ಸಂಬಂಧಿಸಿದ ದತ್ತಾಂಶವನ್ನು ಭಾರತದಲ್ಲಿ ಮಾತ್ರ ಸಂಗ್ರಹಿಸಿ ಇಡಬೇಕು. ಇದು ಆರು ತಿಂಗಳಲ್ಲಿ ಜಾರಿಗೆ ಬರಬೇಕು ಎಂದು ಆರ್‌ಬಿಐ 2018ರ ಏಪ್ರಿಲ್‌ನಲ್ಲಿ ಹೇಳಿತ್ತು.

ಕೋವಿಡ್: ಭಾರತದ ನೆರವಿಗೆ ಸಿದ್ಧ –ಚೀನಾ

ಬೀಜಿಂಗ್ (ಪಿಟಿಐ): ಕೋವಿಡ್ ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಎದುರಿಸುವ ಕುರಿತಂತೆ ತಾನು ಭಾರತದ ಜೊತೆಗೆ ಸಂಪರ್ಕದಲ್ಲಿ ಇರುವುದಾಗಿ ಚೀನಾ ಶುಕ್ರವಾರ ಹೇಳಿದೆ. ಭಾರತ ಮತ್ತು ಭಾರತೀಯರಿಗೆ ಸಮಸ್ಯೆ ಎದುರಿಸಲು ಅಗತ್ಯ ನೆರವು ಒದಗಿಸಲು ತಾನು ಸಿದ್ಧವಿರುವುದಾಗಿಯೂ ಹೇಳಿದೆ.

ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೊ ಲಿಜಿಯನ್ ಅವರು, ಭಾರತದಲ್ಲಿ ಇತ್ತೀಚೆಗೆ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆ ಆಗಿರುವುದಕ್ಕೆ ನಮಗೆ ತೀವ್ರ ಅಸಮಾಧಾನವಿದೆ ಎಂದು ಹೇಳಿದರು.

'ಭಾರತದ ಅಗತ್ಯವನ್ನು ಪರಿಗಣಿಸಿ ನಾವು ನೆರವು ನೀಡಲಿದ್ದೇವೆ. ಈಗಿನ ಸಮಸ್ಯೆಯಿಂದ ಭಾರತೀಯರು ಖಂಡಿತವಾಗಿ ಹೊರಗೆ ಬರುತ್ತಾರೆ ಎಂಬ ವಿಶ್ವಾಸ ನಮಗಿದೆ' ಎಂದು ಹೇಳಿದರು.

ಮುಚ್ಚಿರುವ ಆಮ್ಲಜನಕ ಘಟಕ ತೆರೆಯಲು ಸೂಚನೆ

ನವದೆಹಲಿ (ಪಿಟಿಐ): ಆಮ್ಲಜನಕ ಬೇಡಿಕೆಯನ್ನು ನೀಗಿಸುವ ನಿಟ್ಟಿನಲ್ಲಿ ಮುಚ್ಚಿರುವ ಘಟಕಗಳನ್ನು ಮತ್ತೆ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

ಈ ಬಗ್ಗೆ ಶುಕ್ರವಾರ ಪತ್ರ ಬರೆಯಲಾಗಿದ್ದು, ತಮ್ಮ ವ್ಯಾಪ್ತಿಯಲ್ಲಿರುವ ಆಮ್ಲಜನಕ ಉತ್ಪಾದಕರ ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚಿಸಲಾಗಿದೆ.

ಆಮ್ಲಜನಕ ಕೊಂಡೊಯ್ಯುವ ವಾಹನಗಳನ್ನು ತಡೆಯುತ್ತಿರುವ ಪ್ರಕರಣಗಳು ಅಲ್ಲಲ್ಲಿ ನಡೆಯುತ್ತಿವೆ. ಈ ರೀತಿಯಾಗದಂತೆ ರಾಜ್ಯ ಸರ್ಕಾರಗಳು ಕ್ರಮಕೈಗೊಳ್ಳಬೇಕು. ಈ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸೂಚಿಸಿದೆ.

ಆಮ್ಲಜನಕ ಉತ್ಪಾದಿಸುವ ಘಟಕಗಳು ದೇಶದ ಹಲವು ಜಿಲ್ಲೆಗಳಲ್ಲಿವೆ. ವೈದ್ಯಕೀಯ ಉದ್ದೇಶಕ್ಕೆ ಇವುಗಳನ್ನು ಬಳಸದೆ ಇರಬಹುದು. ಹೀಗಾಗಿ, ಸ್ಥಳೀಯ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಸಲು ಈ ಘಟಕಗಳನ್ನು ಬಳಸಲು ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಸೂಚಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ದೇಶದಲ್ಲಿನ ಕೋವಿಡ್–19 ಪರಿಸ್ಥಿತಿಯ ಬಗ್ಗೆ ಪರಿಶೀಲನೆ ನಡೆಸಿದರು.

ಅಮಿಕಸ್ ಕ್ಯೂರಿ: ಸಾಳ್ವೆ ನಕಾರ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಆಮ್ಲಜನಕ, ಅಗತ್ಯ ಔಷಧಗಳು ಮತ್ತು ಲಸಿಕೆ ಪೂರೈಕೆಗೆ ಸಂಬಂಧಿಸಿದ ಸ್ವಯಂ ಪ್ರೇರಿತ ಪ್ರಕರಣದಲ್ಲಿ ತಮ್ಮನ್ನು ಅಮಿಕಸ್ ಕ್ಯೂರಿಯನ್ನಾಗಿ ಮಾಡುವುದು ಬೇಡ ಎಂಬ ಹಿರಿಯ ವಕೀಲ ಹರೀಶ್ ಸಾಳ್ವೆ ಅವರ ಕೋರಿಕೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮಾನ್ಯ ಮಾಡಿದೆ.

ಆದರೆ ಗುರುವಾರ ಮಾಡಲಾದ ಈ ನೇಮಕಾತಿಗೆ ಕೆಲವು ಹಿರಿಯ ವಕೀಲರು ಆಕ್ಷೇಪ ವ್ಯಕ್ತಪಡಿಸಿದ್ದಕ್ಕೆ ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ ನೇತೃತ್ವದ ನ್ಯಾಯಪೀಠ ಬೇಸರ ವ್ಯಕ್ತಪಡಿಸಿದ್ದು, 'ಗುರುವಾರದ ತನ್ನ ಆದೇಶವನ್ನು ಸರಿಯಾಗಿ ಓದದೆಯೇ ಹಿರಿಯ ವಕೀಲರು ಹೇಳಿಕೆ ಕೊಡುತ್ತಿದ್ದಾರೆ, ದೇಶದಲ್ಲಿನ ಕೋವಿಡ್ ನಿರ್ವಹಣೆ ಕುರಿತಂತೆ ಹೈಕೋರ್ಟ್‌ಗಳು ನಡೆಸುತ್ತಿರುವ ವಿಚಾರಣೆಗಳಿಗೆ ತಾನು ತಡೆ ಒಡ್ಡಿಲ್ಲ' ಎಂದು ಸ್ಪಷ್ಟಪಡಿಸಿತು.

ಮುಖ್ಯ ನ್ಯಾಯಮೂರ್ತಿ ಬೊಬಡೆ ಅವರ ಕರ್ತವ್ಯದ ಕೊನೆಯ ದಿನದಂದೇ ಈ ಬೆಳವಣಿಗೆ ನಡೆದಿದೆ. 'ನೂತನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರನ್ನು ನನಗೆ ಶಾಲಾ, ಕಾಲೇಜು ದಿನಗಳಿಂದಲೇ ತಿಳಿದಿದ್ದು, ಇದೇ ಸಲುಗೆ, ಸ್ನೇಹ ಈ ಪ್ರಕರಣದ ವಿಚಾರಣೆಯ ವೇಳೆ ಅಡ್ಡಿಯಾಗದಿರಲಿ ಎಂಬ ಕಾರಣಕ್ಕೆ ಅಮಿಕಸ್ ಕ್ಯೂರಿ ಸ್ಥಾನದಿಂದ ಹಿಂದೆ ಸರಿಯುತ್ತಿದ್ದೇನೆ' ಎಂದು ಹರೀಶ್ ಸಾಳ್ವೆ ಹೇಳಿದ್ದರು.

ಸಾಲಿಸಿಟರ್ ಜನರಲ್ ತುಷಾರ್ ಮಹ್ತಾ ಅವರು, 'ಇಂಥ ಒತ್ತಡದ ತಂತ್ರಗಳಿಗೆ ಬಲಿಯಾಗಬೇಡಿ. ದಯವಿಟ್ಟು ಅಮಿಕಸ್‌ಕ್ಯೂರಿ ನೇಮಕಾತಿಯಿಂದ ಹಿಂದೆ ಸರಿಯಬೇಡಿ' ಎಂದು ವಕೀಲ ಹರೀಶ್ ಸಾಳ್ವೆ ಅವರಿಗೆ ಮನವಿ ಮಾಡಿದರು.

'ಸುಪ್ರೀಂ' ಮಧ್ಯಪ್ರವೇಶ ಅಗತ್ಯ ಇರಲಿಲ್ಲ'

ನವದೆಹಲಿ (ಪಿಟಿಐ): 'ದೇಶದಲ್ಲಿ ಕೋವಿಡ್–19 ಪರಿಸ್ಥಿತಿಯ ನಿರ್ವಹಣೆ ಕುರಿತು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಮಧ್ಯಪ್ರವೇಶಿಸುವ ಅಗತ್ಯ ಇರಲಿಲ್ಲ ಮತ್ತು ಇದು ಸರಿಯಾದುದಲ್ಲ ಎಂದು ಕಾಂಗ್ರೆಸ್ ಪಕ್ಷ ಪ್ರತಿಪಾದಿಸಿದೆ. 'ಇದು, ನ್ಯಾಯಾಂಗ ಅಧಿಕಾರದ ಕೇಂದ್ರೀಕರಣವಾಗಲಿದೆ' ಎಂದು ಆರೋಪಿಸಿದೆ.

ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ, 'ಹೈಕೋರ್ಟ್‌ಗಳು ಪರಿಣಾಮಕಾರಿಯಾಗಿ ನಾಗರಿಕ ಹಕ್ಕುಗಳನ್ನು ಎತ್ತಿ ಹಿಡಿಯುತ್ತಿವೆ ಮತ್ತು ಸರ್ಕಾರಗಳನ್ನು ಸರಿಯಾದ ಕ್ರಮದಲ್ಲಿ ಹೊಣೆಗಾರರನ್ನಾಗಿ ಮಾಡುತ್ತಿವೆ. ಹಂತ ಹಂತವಾಗಿ ಪ್ರಕರಣ ಕೈಗೆತ್ತಿಕೊಂಡು ನಿರ್ವಹಿಸುತ್ತಿವೆ. ಅವುಗಳು ಕೆಲಸ ಮಾಡಲು ಬಿಡಬೇಕು' ಎಂದು ಪ್ರತಿಪಾದಿಸಿದರು.



'ಸುಪ್ರೀಂ ಕೋರ್ಟ್ ಈ ವಿಷಯ ಕುರಿತಂತೆ ಏ. 22ರಂದು ಮಧ್ಯ ಪ್ರವೇಶಿಸಬೇಕಾದ ಅಗತ್ಯ ಇರಲಿಲ್ಲ. ಇದು ತಪ್ಪು, ತಪ್ಪು ಮತ್ತು ತಪ್ಪು. ಸುಪ್ರಿಂ ಕೋರ್ಟ್ ಇದು ಸ್ವಯಂಪ್ರೇರಿತವಾಗಿ ಕೈಗೊಂಡ ಕ್ರಮವಲ್ಲ. ಹೈಕೋರ್ಟ್ ಆದೇಶಗಳಿಗೆ ನೀಡಿದ ಪ್ರತಿಕ್ರಿಯೆಯಾಗಿದೆ. ಹೀಗಾಗಿ ಇದು ತಪ್ಪು' ಎಂದು ಅವರು ಹೇಳಿದರು.

ಇದು ತಪ್ಪು, ಏಕೆಂದರೆ ಹೈಕೋರ್ಟ್ ಏನು ಮಾಡಿದೆಯೋ ಅದನ್ನು ಸುಪ್ರಿಂ ಕೋರ್ಟ್ ಮಾಡಿರಲಿಲ್ಲ. ಆಮ್ಲಜನಕ ಕುರಿತಂತೆ ದೆಹಲಿ ಹೈಕೋರ್ಟ್ ರಾತ್ರಿ 9 ಗಂಟೆಗೆ ಕೈಗೊಂಡ ಕ್ರಮ ಅನೇಕ ಜನರಿಗೆ ಸಮಾಧಾನ ತಂದಿತ್ತು. ಹೈಕೋರ್ಟ್‌ಗಳು ತಮ್ಮ ಕರ್ತವ್ಯ ನಿಭಾಯಿಸದಂತೆ ಏಕೆ ತಡೆಒಡ್ಡಲಾಗುತ್ತಿದೆ? ಎಂದು ಅವರು ಪ್ರಶ್ನಿಸಿದರು.

ಕೆನಡಾ: ಭಾರತ, ಪಾಕಿಸ್ತಾನದ ವಿಮಾನಗಳಿಗೆ ನಿಷೇಧ

ಟೊರೆಂಟೊ (ಎಪಿ): ಭಾರತದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೆನಡಾ ಸರ್ಕಾರ, ಭಾರತ ಮತ್ತು ಪಾಕಿಸ್ತಾನದಿಂದ ಕೆನಾಡಕ್ಕೆ ಬರುವ ಎಲ್ಲ ವಿಮಾನಗಳನ್ನು 30 ದಿನಗಳ ಕಾಲ ನಿಷೇಧಿಸಿದೆ.

'ಗುರುವಾರ ತಡರಾತ್ರಿಯಿಂದಲೇ ಆದೇಶ ಜಾರಿಗೆ ಬರಲಿದೆ' ಎಂದು ಸಾರಿಗೆ ಸಚಿವ ಒಮರ್ ಅಲ್‌ಘಬ್ರಾ ತಿಳಿಸಿದ್ದಾರೆ.

'24 ಗಂಟೆಗಳಲ್ಲಿ ಭಾರತದಲ್ಲಿ 3.14 ಲಕ್ಷಕ್ಕೂ ಹೆಚ್ಚು ಹೊಸ ಕೋವಿಡ್–19 ಪ್ರಕರಣಗಳು ವರದಿಯಾಗಿವೆ' ಎಂಬ ವರದಿ ಬಂದ ಕೆಲವೇ ಗಂಟೆಗಳಲ್ಲಿ, ಕೆನಡಾ ಸರ್ಕಾರ ವಿಮಾನ ಸಂಚಾರದ ಮೇಲೆ ನಿರ್ಬಂಧ ವಿಧಿಸಿದೆ.

ಅಮೆರಿಕ: ಭಾರತ ಸೇರಿ ಹಲವು ದೇಶಗಳಿಗೆ ಪ್ರಯಾಣಿಸದಂತೆ ಸಲಹೆ

ವಾಷಿಂಗ್ಟನ್ (ಪಿಟಿಐ): ಕೋವಿಡ್ ಪ್ರಕರಣಗಳು ತೀವ್ರವಾಗಿ ಏರುತ್ತಿರುವ ಕಾರಣ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಮಾಲ್ಡೀವ್ಸ್‌ಗೆ ಪ್ರಯಾಣ ಬೆಳೆಸಬೇಡಿ' ಎಂದು ಅಮೆರಿಕವು ತನ್ನ ನಾಗರಿಕರಿಗೆ ಸಲಹೆ ನೀಡಿದೆ.

'ಚೀನಾ ಮತ್ತು ನೇಪಾಳಕ್ಕೂ ಪ್ರಯಾಣಿಸುವ ಬಗ್ಗೆ ಮರುಚಿಂತನೆ ಮಾಡಿ, ಶ್ರೀಲಂಕಾಕ್ಕೆ ಪ್ರಯಾಣ ಬೆಳೆಸುವಾಗ ಹೆಚ್ಚಿನ ಎಚ್ಚರಿಕೆ ವಹಿಸಿ ಮತ್ತು ಭೂತಾನ್‌ಗೆ ಪ್ರಯಾಣಿಸುವಾಗ ಸಾಮಾನ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಿ' ಎಂದು ಅಮೆರಿಕವು ಗುರುವಾರ ಬಿಡುಗಡೆ ಮಾಡಿದ ಸರಣಿ ಪ್ರಯಾಣ ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ.

ಭಾರತ, ಪಾಕಿಸ್ತಾನ, ಅಫ್ಗಾನಿಸ್ತಾನ, ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ಅನ್ನು ನಾಲ್ಕನೇ ಹಂತದ ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಈ ರಾಷ್ಟ್ರಗಳಿಗೆ ಪ್ರಯಾಣ ಬೆಳೆಸದಂತೆ ಅಮೆರಿಕವು ನಾಗರಿಕರಿಗೆ ಸೂಚಿಸಿದೆ.

'ಭಾರತದಲ್ಲಿ ಕೋವಿಡ್, ಅಪರಾಧಗಳು ಮತ್ತು ಭಯೋತ್ಪಾದನೆ ಚಟುವಟಿಕೆಗಳು ಹೆಚ್ಚುತ್ತಿವೆ. ಹಾಗಾಗಿ ಭಾರತಕ್ಕೆ ಪ್ರಯಾಣ ಬೆಳೆಸಬೇಡಿ' ಎಂದು ಅಮೆರಿಕದ ವಿದೇಶಾಂಗ ಸಚಿವಾಲಯವು ಹೇಳಿದೆ.

ಜರ್ಮನಿಯಿಂದ 23 ಘಟಕಗಳನ್ನು ತರುವ ಪ್ರಸ್ತಾವ • ಸೇನಾ ಆಸ್ಪತ್ರೆಗಳಲ್ಲಿ ನಿಯೋಜನೆ

ಸಂಚಾರಿ ಆಮ್ಲಜನಕ ಘಟಕ ಖರೀದಿಗೆ ಸಿದ್ಧತೆ



ಒಡಿಶಾದ ರೂರ್ಕೆಲಾ ಉಕ್ಕಿನ ಘಟಕದಿಂದ ಬಂದ ಆಮ್ಲಜನಕದ ಟ್ಯಾಂಕರ್‌ಗಳನ್ನು ಹೈದರಾಬಾದ್‌ನ ವಾಯುನೆಲೆಯಿಂದ ವಾಯುಪಡೆಯ ಸಿ17 ವಿಮಾನನದ ಮೂಲಕ ದೆಹಲಿಗೆ ಸಾಗಿಸಲಾಯಿತು ಪಿಟಿಐ ಚಿತ್ರ


ಪ್ರಜಾವಾಣಿ ವಾರ್ತೆ

ನವದೆಹಲಿ: ಆಸ್ಪತ್ರೆಗಳ ಆವರಣದಲ್ಲಿಯೇ ಆಮ್ಲಜನಕವನ್ನು ತಯಾರಿಸುವ 23 'ಆಮ್ಲಜನಕ ಉತ್ಪಾದನೆಯ ಸಂಚಾರಿ ಜನರೇಟರ್'ಗಳನ್ನು ಜರ್ಮನಿಯಿಂದ ಖರೀದಿಸಲಾಗಿದ್ದು, ಅವನ್ನು ವಾಯುಪಡೆಯ ವಿಮಾನಗಳ ಮೂಲಕ ತರಲಾಗುವುದು. ಇವುಗಳನ್ನು ದೇಶದ ವಿವಿಧೆಡೆ ಇರುವ ಸೇನಾ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಇಂತಹ ಪ್ರತಿಯೊಂದು ಘಟಕವು ಪ್ರತಿ ನಿಮಿಷಕ್ಕೆ 40 ಲೀಟರ್ ಆಮ್ಲಜನಕವನ್ನು ತಯಾರಿಸುತ್ತದೆ. ಒಂದು ತಾಸಿನಲ್ಲಿ 2,400 ಲೀಟರ್ ಆಮ್ಲಜನಕ ತಯಾರಿಸುವ ಸಾಮರ್ಥ್ಯ ಹೊಂದಿವೆ. ಸಂಚಾರಿ ಘಟಕಗಳಾಗಿರುವುದರಿಂದ ಅಗತ್ಯವಿದ್ದೆಡೆಗೆ ಸಾಗಿಸಬಹುದು. ಇಂತಹ ಇನ್ನಷ್ಟು ಘಟಕಗಳನ್ನು ಖರೀದಿಸಲು ಸಿದ್ಧತೆ ನಡೆದಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

23 ಘಟಕಗಳ ಖರೀದಿಗೆ ಸಂಬಂಧಿಸಿದ ದಾಖಲೆ ಪತ್ರಗಳ ಪ್ರಕ್ರಿಯೆ ನಡೆಯುತ್ತಿದೆ. ಅದು ಮುಗಿದ ಕೂಡಲೇ ಅವನ್ನು ತರಲಾಗುವುದು. ಮುಂದಿನ ಒಂದು ವಾರದ ಒಳಗೆ ಇವು ಭಾರತಕ್ಕೆ ಬರುವ ಸಾಧ್ಯತೆ ಇದೆ. ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಸೇನೆಯ ಆಸ್ಪತ್ರೆಗಳಿಗೆ ಇವುಗಳನ್ನು ನೀಡಲು ಆದ್ಯತೆ ಎಂದು ಸಚಿವಾಲಯವು ತಿಳಿಸಿದೆ.

ಆಮ್ಲಜನಕ ಕೊರತೆ ಪಡಿಪಾಟಲು



ಹರಿಯಾಣ: ಪಾಣಿಪತ್‌ನಿಂದ ಸಿರ್ಸಾಗೆ ಹೊರಟಿದ್ದ ಆಮ್ಲಜನಕದ ಟ್ಯಾಂಕರ್ ನಾಪತ್ತೆಯಾಗಿದೆ. ಈ ಬಗ್ಗೆ ದೂರು ದಾಖಲಾಗಿದ್ದು, ತನಿಖೆ ನಡೆಯುತ್ತಿದೆ

ದೆಹಲಿ: ದೆಹಲಿಯ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಿಗ್ಗೆ ಆಮ್ಲಜನಕ ಬಹುತೇಕ ಖಾಲಿಯಾಗಿತ್ತು. ಎರಡು ತಾಸಿನಲ್ಲೇ ಒಂದು ಟ್ಯಾಂಕರ್ ಆಮ್ಲಜನಕ ಪೂರೈಸಲಾಗಿತ್ತು. ನಂತರದ ಎರಡು ತಾಸಿನಲ್ಲೇ ಅದು ಖಾಲಿಯಾಗಿದೆ. ಮತ್ತೆ ಆಮ್ಲಜನಕ ಪೂರೈಸುವಂತೆ ಆಸ್ಪತ್ರೆ ಮನವಿ ಮಾಡಿದೆ. ಆಸ್ಪತ್ರೆಯಲ್ಲಿ 700 ಕೋವಿಡ್ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ

ಗುಜರಾತ್: ಗುಜರಾತ್‌ನ ರಾಜ್‌ಕೋಟ್ ಜಿಲ್ಲೆಯ ಹಲವು ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಉಂಟಾಗಿದೆ. ಆಮ್ಲಜನಕ ಖಾಲಿಯಾದರೆ, ಕೋವಿಡ್ ರೋಗಿಗಳು ಸಾವನ್ನಪ್ಪುವ ಅಪಾಯವಿದೆ ಎಂದು ಆಸ್ಪತ್ರೆಗಳು ಕಳವಳ ವ್ಯಕ್ತಪಡಿಸಿವೆ

ಒಡಿಶಾ: ಒಡಿಶಾ ಸರ್ಕಾರವು ಜಾಜ್‌ಪುರ ಮತ್ತು ಅಂಗೂಲ್‌ನಿಂದ ಆಂಧ್ರಪ್ರದೇಶದ ವಿಶಾಖಪಟ್ಟಣಕ್ಕೆ ಹಾಗೂ ಮಹಾರಾಷ್ಟ್ರದ ಪುಣೆಗೆ ಆಮ್ಲಜನಕ ಪೂರೈಸಲು ಗ್ರೀನ್ ಕಾರಿಡಾರ್ ರೂಪಿಸಿತ್ತು. ಟ್ಯಾಂಕರ್‌ಗಳನ್ನು ಬಿಗಿಭದ್ರತೆಯಲ್ಲಿ ಸಾಗಿಸಲಾಯಿತು

ಶ್ರೀ ಸಿಮೆಂಟ್ ಕಂಪನಿಯು ತನ್ನ ಪಶ್ಚಿಮ ಬಂಗಾಳ, ಕರ್ನಾಟಕ, ಬಿಹಾರ ಮತ್ತು ಒಡಿಶಾದಲ್ಲಿನ ಘಟಕಗಳಲ್ಲಿ ವೈದ್ಯಕೀಯ ಆಮ್ಲಜನಕ ತಯಾರಿಕೆಯನ್ನು ಆರಂಭಿಸಿದೆ. ಈವರೆಗೆ 12 ಸಾವಿರಕ್ಕೂ ಹೆಚ್ಚು ಸಿಲಿಂಡರ್‌ಗಳನ್ನು ಭರ್ತಿ ಮಾಡಿ ಪೂರೈಸಿದೆ

ಮಹಾರಾಷ್ಟ್ರ : ರಾಜ್ಯದ ಹಲವು ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಉಂಟಾಗಿದೆ. ಮೊದಲ ಆಮ್ಲಜನಕ ಎಕ್ಸ್‌ಪ್ರೆಸ್ ರೈಲು ಶನಿವಾರ ಮಹಾರಾಷ್ಟ್ರವನ್ನು ತಲುಪಲಿದೆ. ಪುಣೆಯ ವಿಎಸ್‌ಐ ಸಕ್ಕರೆ ಕಾರ್ಖಾನೆಯು ಆಮ್ಲಜನಕ ತಯಾರಿಸುತ್ತಿದೆ. ಅದನ್ನು ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಪೂರೈಸಲಿದೆ

ತೆಲಂಗಾಣ: ಒಡಿಶಾದಿಂದ ತೆಲಂಗಾಣದ ವಿವಿಧೆಡೆಗೆ ಆಮ್ಲಜನಕ ಟ್ಯಾಂಕರ್ ಮತ್ತು ಸಿಲಿಂಡರ್‌ಗಳನ್ನು ವಾಯುಪಡೆಯ ವಿಮಾನಗಳ ಮೂಲಕ ಸಾಗಿಸಲಾಗಿದೆ

ವಾಯುಮಾರ್ಗದಲ್ಲಿ ಖಾಲಿ ಸಿಲಿಂಡರ್ ಸಾಗಾಟ

ವಿವಿಧ ರಾಜ್ಯಗಳ ಆಸ್ಪತ್ರೆಗಳಲ್ಲಿ ಖಾಲಿಯಾದ ಆಮ್ಲಜನಕದ ಜಂಬೋ ಸಿಲಿಂಡರ್‌ಗಳನ್ನು, ಆಮ್ಲಜನಕದ ತಯಾರಿಕಾ ಘಟಕಗಳಿಗೆ ವಾಯುಪಡೆಯ ವಿಮಾನಗಳ ಮೂಲಕ ಸಾಗಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಆಸ್ಪತ್ರೆಗಳಿಂದ ಆಮ್ಲಜನಕ ಘಟಕಗಳಿಗೆ ಖಾಲಿ ಸಿಲಿಂಡರ್‌ಗಳನ್ನು ಟ್ರಕ್ ಮತ್ತು ರೈಲಿನಲ್ಲಿ ಸಾಗಿಸಲು ಹೆಚ್ಚು ಸಮಯ ಬೇಕಾಗುತ್ತದೆ. ವಿಮಾನಗಳ ಮೂಲಕ ಸಾಗಿಸಿದರೆ, ಕಡಿಮೆ ಸಮಯದಲ್ಲಿ ಘಟಕಗಳಿಗೆ ಈ ಸಿಲಿಂಡರ್‌ಗಳನ್ನು ತಲುಪಿಸಲು ಸಾಧ್ಯವಾಗುತ್ತದೆ. ಇದರಿಂದ ಸಾಕಷ್ಟು ಸಮಯ ಉಳಿತಾಯವಾಗುತ್ತದೆ. ಇದರಿಂದ ಕಡಿಮೆ ಅವಧಿಯಲ್ಲಿ ಆಮ್ಲಜನಕವನ್ನು ಪೂರೈಕೆ ಮಾಡಲೂ ಸಾಧ್ಯವಾಗುತ್ತದೆ ಎಂದು ಗೃಹ ಸಚಿವಾಲಯವು ಹೇಳಿದೆ.

ದೆಹಲಿಯಲ್ಲಿ ಒಂದೂ ಆಮ್ಲಜನಕ ತಯಾರಿಕಾ ಘಟಕವಿಲ್ಲ. ದೆಹಲಿಗೆ ಆಮ್ಲಜನಕವನ್ನು ವಿಮಾನ ಮೂಲಕ ಪೂರೈಸಿ, ಆಮ್ಲಜನಕ ಎಕ್ಸ್‌ಪ್ರೆಸ್ ಅನ್ನು ದೆಹಲಿಗೂ ನಿಯೋಜನೆ ಮಾಡಿ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ



ದೆಹಲಿ ಆಸ್ಪತ್ರೆಗಳು ಆಮ್ಲಜನಕ ಖಾಲಿಯಾಗಿದೆ ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವುದಕ್ಕೂ ಮೊದಲು, ಸಂಬಂಧಿತ ನೋಡಲ್ ಅಧಿಕಾರಿಗೆ ಮನವಿ ಸಲ್ಲಿಸಬೇಕು

ದೆಹಲಿ ಹೈಕೋರ್ಟ್

ಸಕ್ಕರೆ ಕಾರ್ಖಾನೆಗಳೂ ವೈದ್ಯಕೀಯ ಆಮ್ಲಜನಕವನ್ನು ತಯಾರಿಸಬಹುದು. ಮಹಾರಾಷ್ಟ್ರದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಆಮ್ಲಜನಕ ತಯಾರಿಸಿ, ಆಸ್ಪತ್ರೆಗಳಿಗೆ ಪೂರೈಸಬೇಕು

ಶರದ್ ಪವಾರ್, ಸಂಸದ ಮತ್ತು ವಿಎಸ್‌ಐ ಸಕ್ಕರೆ ಕಾರ್ಖಾನೆ ಅಧ್ಯಕ್ಷ

15 ಮಂದಿ ಸಾವಿಗೆ ನಿರ್ಲಕ್ಷ್ಯವೇ ಕಾರಣ: ಆರೋಪ



ಅಗ್ನಿ ದುರಂತದ ಬಳಿಕ ವಿಜಯವಲ್ಲಭ ಕೋವಿಡ್ ಆಸ್ಪತ್ರೆಯಲ್ಲಿದ್ದ ರೋಗಿಗಳನ್ನು ಆರೋಗ್ಯ ಕಾರ್ಯಕರ್ತರು ಬೇರೆಡೆಗೆ ಸ್ಥಳಾಂತರಿಸಿದರು – ಪಿಟಿಐ ಚಿತ್ರ

ವಿರಾರ್ (ಪಿಟಿಐ): 'ವಿಜಯವಲ್ಲಭ ಆಸ್ಪತ್ರೆಯಲ್ಲಿ ಸಂಭವಿಸಿದ ಅಗ್ನಿ ಅನಾಹುತ ಹಾಗೂ 15 ಮಂದಿಯ ಸಾವಿಗೆ ಸಂಪೂರ್ಣವಾಗಿ ಆಸ್ಪತ್ರೆಯ ಆಡಳಿತ ಮಂಡಳಿಯವರೇ ಹೊಣೆ' ಎಂದು ಮೃತರ ಕುಟುಂಬದವರು ಆರೋಪಿಸಿದ್ದಾರೆ.

'ಆಸ್ಪತ್ರೆಯ ಆಡಳಿತದವರ ನಿರ್ಲಕ್ಷ್ಯದಿಂದಾಗಿ ಈ ಘಟನೆ ಸಂಭವಿಸಿದೆ. ಆಸ್ಪತ್ರೆಯಲ್ಲಿ ಅಗತ್ಯ ಸುರಕ್ಷತಾ ವ್ಯವಸ್ಥೆಗಳು ಸಹ ಇರಲಿಲ್ಲ. ಐಸಿಯುನಲ್ಲಿ ಬೆಂಕಿ ಕಾಣಿಸಿಕೊಂಡಾಗ ಆಸ್ಪತ್ರೆಯ ಸಿಬ್ಬಂದಿಯೆಲ್ಲರೂ ನಿದ್ದೆಯಲ್ಲಿದ್ದರು. ಒಳಗಿದ್ದ ರೋಗಿಗಳನ್ನು ಹೊರತರಲು ಒಬ್ಬನೇ ಒಬ್ಬ ಸಿಬ್ಬಂದಿಯೂ ಇರಲಿಲ್ಲ' ಎಂದು ಮೃತ ರೋಗಿಯೊಬ್ಬರ ಸಂಬಂಧಿ ಆರೋಪಿಸಿದ್ದಾರೆ.

ತನಿಖೆಗೆ ಆದೇಶ: 'ಇದು ಅತ್ಯಂತ ನೋವಿನ ಘಟನೆ, ಈ ಬಗ್ಗೆ ವಿಸ್ತೃತ ತನಿಖೆ ನಡೆಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವ ದಿಲೀಪ್ ವಾಲ್ಸೆ ಪಾಟೀಲ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

ಮೃತರ ಕುಟುಂಬದವರಿಗೆ ತಲಾ ₹5 ಲಕ್ಷ ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹1 ಲಕ್ಷ ಪರಿಹಾರ ನೀಡುವುದಾಗಿ ಮಹಾರಾಷ್ಟ್ರ ಸರ್ಕಾರ ಘೋಷಿಸಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಸಂತ್ರಸ್ತರ ಕುಟುಂಬದವರಿಗೆ ತಲಾ ₹2 ಲಕ್ಷ ಪರಿಹಾರ ಮಂಜೂರು ಮಾಡಲಾಗಿದೆ' ಎಂದು ಪ್ರಧಾನಮಂತ್ರಿ ಕಚೇರಿಯು ಟ್ವೀಟ್ ಮೂಲಕ ತಿಳಿಸಿದೆ.

ವಿವಾದ ಸೃಷ್ಟಿಸಿದ ಸಚಿವ: ವಿರಾರ್ ಆಸ್ಪತ್ರೆಯಲ್ಲಿ ಸಂಭವಿಸಿದ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ರಾಜೇಶ್ ಟೋಪೆ ಅವರು ಬೆಳಿಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ ಆನಂತರ ಅದಕ್ಕೆ ಸ್ಪಷ್ಟನೆ ನೀಡಿದ ಘಟನೆ ನಡೆಯಿತು.

ಬೆಳಿಗ್ಗೆ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸುತ್ತ, 'ವಿರಾರ್ ಆಸ್ಪತ್ರೆಯ ಘಟನೆ ರಾಷ್ಟ್ರೀಯ ಸುದ್ದಿ ಅಲ್ಲ' ಎಂದಿದ್ದರು. ಆದರೆ, ಸ್ವಲ್ಪ ಹೊತ್ತಿನ ಬಳಿಕ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ ಅವರು, 'ಪ್ರಧಾನಿ ಜೊತೆಗೆ ಆಯೋಜಿಸಿದ್ದ ಸಭೆಯಲ್ಲಿ ರಾಷ್ಟ್ರೀಯ ಸಮಸ್ಯೆಗಳಾದ ಆಮ್ಲಜನಕ, ರೆಮ್‌ಡಿಸಿವಿರ್ ಕೊರತೆಗಳ ವಿಚಾರವಾಗಿ ಮಾತನಾಡುತ್ತೇನೆ ಎಂದು ನಾನು ಹೇಳುತ್ತಿದ್ದೆ. ಆ ಮಧ್ಯದಲ್ಲೇ 'ವಿರಾರ್ ಘಟನೆಯ ಬಗ್ಗೆಯೂ ಮಾತನಾಡುತ್ತೀರಾ' ಎಂದು ಪತ್ರಕರ್ತರೊಬ್ಬರು ಕೇಳಿದ್ದರು. ಆಗ 'ಅದು ರಾಷ್ಟ್ರೀಯ ಸುದ್ದಿಯಲ್ಲ ಎಂದಿದ್ದೆ' ಎಂದರು.

ಕೋವಿಶೀಲ್ಡ್, ಫೈಝರ್ ಬಗ್ಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅಧ್ಯಯನ

ಲಸಿಕೆ ಹಾಕಿಸಿಕೊಂಡರೆ ಸೋಂಕು ತಗಲುವ ಅಪಾಯ ಕಡಿಮೆ

ಕೋವಿಡ್ ಲಸಿಕೆ ಪಡೆದವರಿಗೆ ಕೋವಿಡ್ ಬರುವ ಸಾಧ್ಯತೆ ಕಡಿಮೆ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು ನಡೆಸಿದ ಅಧ್ಯಯನದಲ್ಲಿ ತಿಳಿದು ಬಂದಿದೆ. ಬ್ರಿಟನ್‌ನಲ್ಲಿ ಆಸ್ಟ್ರಾಜೆನಿಕಾ ಕಂಪನಿಯ ಕೋವಿಶೀಲ್ಡ್ ಮತ್ತು ಫೈಝರ್ ಕಂಪನಿಯ ಲಸಿಕೆ ಪಡೆದವರ ಮೇಲೆ ಈ ಅಧ್ಯಯನ ನಡೆಸಲಾಗಿತ್ತು ಎಂದು ಬಿಬಿಸಿ ವರದಿ ಮಾಡಿದೆ. ಇದರಲ್ಲಿ ಆಸ್ಟ್ರಾಜೆನಿಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯನ್ನು ಭಾರತದಲ್ಲೂ ಬಳಸಲಾಗುತ್ತಿದೆ. 3.7 ಲಕ್ಷ ಜನರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು

- ಎರಡೂ ಲಸಿಕೆಯ ಮೊದಲ ಡೋಸ್ ಪಡೆದವರಿಗೆ ಕೋವಿಡ್ ಸೋಂಕು ತಗಲುವ ಸಾಧ್ಯತೆ ಶೇ 65ರಷ್ಟು ಕಡಿಮೆ
- ಮೊದಲ ಡೋಸ್ ಪಡೆದವರಲ್ಲಿ, ಯುವಕರಲ್ಲಿ ಸೋಂಕು ತಗಲುವ ಸಾಧ್ಯತೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇತ್ತು. ಆದರೆ ಎರಡೂ ಡೋಸ್ ಪಡೆದ ಎಲ್ಲಾ ವಯಸ್ಸಿನವರಲ್ಲಿ ಸೋಂಕು ತಗಲುವ ಸಾಧ್ಯತೆ ಒಂದೇ ಮಟ್ಟದಲ್ಲಿ ಇತ್ತು
- 2020ರ ಡಿಸೆಂಬರ್ ಮತ್ತು 2021ರ ಏಪ್ರಿಲ್‌ನ ನಡುವೆ ಲಸಿಕೆ ಪಡೆದವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಲ್ಲಿ ರೋಗ ಲಕ್ಷಣ ಇದ್ದು ಸೋಂಕಿಗೆ ಒಳಗಾಗುವವರ ಪ್ರಮಾಣ ಶೇ 74ರಷ್ಟು ಕಡಿಮೆಯಾಗಿತ್ತು. ರೋಗ ಲಕ್ಷಣ ಇಲ್ಲದೆ ಸೋಂಕಿಗೆ ತುತ್ತಾಗುವವರ ಪ್ರಮಾಣ ಶೇ 57ರಷ್ಟು ಕಡಿಮೆಯಾಗಿತ್ತು
- ಫೈಝರ್ ಕಂಪನಿಯ ಎರಡೂ ಡೋಸ್‌ಗಳನ್ನು ಪಡೆದವರಿಗೆ ಸೋಂಕು ತಗಲುವ ಪ್ರಮಾಣದಲ್ಲಿ ಶೇ 90ರಷ್ಟು ಇಳಿಕೆಯಾಗಿತ್ತು. ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆದವರನ್ನು ಈ ಅಧ್ಯಯನಕ್ಕೆ ಒಳಪಡಿಸಿಲ್ಲ.

ಸೋಂಕು ತಗಲುವ ಸಾಧ್ಯತೆ ಇದೆ: ಲಸಿಕೆಯ ಎರಡೂ ಡೋಸ್ ಪಡೆದುಕೊಂಡರೂ ಸೋಂಕು ತಗಲುವ ಸಾಧ್ಯತೆ ಶೇ 35ರಷ್ಟು ಇದೆ. ಹೀಗಾಗಿ ಲಸಿಕೆ ಪಡೆದುಕೊಂಡವರೂ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಮತ್ತು ಆಗಾಗ ಕೈತೊಳೆಯುವುದನ್ನು ಮುಂದುವರಿಸಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

ನಟ ಅಮಿತ್ ಮಿಸ್ತ್ರಿ ನಿಧನ

ಮುಂಬೈ: ಹಿಂದಿ ಚಿತ್ರನಟ ಅಮಿತ್ ಮಿಸ್ತ್ರಿ (47) ತಮ್ಮ ನಿವಾಸದಲ್ಲಿ ಶುಕ್ರವಾರ ಬೆಳಗ್ಗೆ ಹೃದಯಾಘಾತದಿಂದ ನಿಧನ ಹೊಂದಿದರು.

ಗುಜರಾತಿ ಸಿನಿಮಾ, ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ಕಳೆದ ವರ್ಷ ಒಟಿಟಿಯಲ್ಲಿ (ಅಮೆಝಾನ್ ಪ್ರೈಮ್) ಬಿಡುಗಡೆಯಾದ 'ಬಂದಿಷ್ ಬ್ಯಾಂಡಿಟ್ಸ್' ವೆಬ್‌ಸರಣಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ಅವರು ಆ ಸರಣಿಯ ನಟನೆಯಿಂದ ಜನಪ್ರಿಯತೆ ಗಳಿಸಿದ್ದರು.

'ಕ್ಯಾ ಕೆಹೆನಾ ಹೈ', 'ಏಕ್ ಚಾಲೀಸ್ ಕಿ' 'ಲಾಸ್ಟ್ ಲೋಕಲ್', '99', 'ಶೋರ್ ಇನ್ ದ ಸಿಟಿ', 'ಎಮ್ಲಾ ಪಗ್ಲಾ ದೀವಾನ', 'ಎ ಜಂಟಲ್‌ಮನ್' ಅವರು ನಟಿಸಿದ ಹಿಂದಿ ಚಿತ್ರಗಳು. 'ತೆನಾಲಿ ರಾಮ', 'ಮ್ಯಾಡಂ ಸರ್', 'ಶ್', 'ಕೊಯಿ ಹೈ' ಅವರು ನಟಿಸಿದ ಪ್ರಮುಖ ಧಾರಾವಾಹಿಗಳು. ದ ಘಾ–420, ಸಾವಧಾನ್ ಇಂಡಿಯಾ ಅವರು ಕಾಣಿಸಿಕೊಂಡ ಪ್ರಮುಖ ಟಿವಿ ಕಾರ್ಯಕ್ರಮಗಳು.



ಅಮಿತ್ ಮಿಸ್ತ್ರಿ

ಕೋವಿಡ್: 'ವಿರಾಫಿನ್' ತುರ್ತು ಬಳಕೆಗೆ ಡಿಸಿಜಿಐ ಅನುಮತಿ

ನವದೆಹಲಿ: ಜೈಡಸ್ ಕ್ಯಾಡಿಲಾ ಕಂಪನಿಯ ವೈರಸ್ ಪ್ರತಿರೋಧಕ ಔಷಧಿ 'ವಿರಾಫಿನ್' ಅನ್ನು ಕೋವಿಡ್ ರೋಗಿಗಳ ತುರ್ತು ಬಳಕೆಗಾಗಿ ಭಾರತೀಯ ಪ್ರಧಾನ ಔಷಧ ನಿಯಂತ್ರಕ (ಡಿಸಿಜಿಐ) ಇಲಾಖೆ ಶುಕ್ರವಾರ ಅನುಮತಿ ನೀಡಿದೆ.

ಸೌಮ್ಯ ಲಕ್ಷಗಳು ಇರುವ ವಯಸ್ಕ ಕೋವಿಡ್ ರೋಗಿಗಳಿಗೆ 'ವಿರಾಫಿನ್' ಔಷಧಿಯನ್ನು ಮಿತಿಗೆ ಒಳಪಟ್ಟು ತುರ್ತು ಬಳಕೆಗೆ ನೀಡಲು ಡಿಸಿಜಿಐ ಅನುಮತಿ ನೀಡಿದೆ ಎಂದು ಜೈಡಸ್ ಕ್ಯಾಡಿಲಾ ಕಂಪನಿ ತಿಳಿಸಿದೆ.

ಸೌಮ್ಯ ಲಕ್ಷಗಳು ಇರುವ ಕೋವಿಡ್ ರೋಗಿಗಳ ಚಿಕಿತ್ಸೆಗೆ ಈ ಔಷಧಿ ಹೆಚ್ಚು ಪರಿಣಾಮಕಾರಿಯಾಗಿದೆ. ಆರಂಭದಲ್ಲೇ ಈ ಔಷಧಿ ನೀಡುವುದರಿಂದ ಕೋವಿಡ್ ರೋಗಿಗಳು ವೇಗವಾಗಿ ಚೇತರಿಸಿಕೊಳ್ಳಲು ಮತ್ತು ಹೆಚ್ಚಿನ ಅಪಾಯ ತಪ್ಪಿಸಲು ಸಹಕಾರಿಯಾಗಿದೆ ಎಂದು ಕ್ಯಾಡಿಲಾ ಕಂಪನಿ ತಿಳಿಸಿದೆ.

ವೈದ್ಯಕೀಯ ತಜ್ಞರ ಸಲಹೆಯ ಮೇಲೆ 'ವಿರಾಫಿನ್' ನೀಡಬಹುದು. ಈ ಔಷಧ ಭಾರತೀಯ ಮಾರುಕಟ್ಟೆಯಲ್ಲಿ ಲಭ್ಯವಿದೆ.

ಭಾರತದಾದ್ಯಂತ 20-25 ಕೇಂದ್ರಗಳಲ್ಲಿ 'ವಿರಾಫಿನ್' ಬಳಕೆಯ ಪ್ರಯೋಗವನ್ನು ನಡೆಸಲಾಗಿದೆ. ಇದು ಆಮ್ಲಜನಕದ ಕಡಿಮೆ ಅಗತ್ಯವನ್ನು ತೋರಿಸಿದೆ. ಹಾಗೇ ಉಸಿರಾಟದ ತೊಂದರೆ ನಿಯಂತ್ರಿಸಲು ಈ ಔಷಧಿ ಸಮರ್ಥವಾಗಿದೆ ಎಂದು ಕಂಪನಿ ಸ್ಪಷ್ಟಪಡಿಸಿದೆ.

ಗಂಗಾ ನದಿಗೆ ಪಿಕಪ್ ಜೀಪ್ ಉರುಳಿ ಒಂಬತ್ತು ಸಾವು

ಪಟ್ನಾ (ಬಿಹಾರ) (ಪಿಟಿಐ): ಇಲ್ಲಿನ ದಾನಪುರ ಪ್ರದೇಶದಲ್ಲಿ ಶುಕ್ರವಾರ ಗಂಗಾ ನದಿಯಲ್ಲಿ ದೋಣಿಗಳನ್ನು ಸೇರಿಸಿ ನಿರ್ಮಿಸಿದ ಸೇತುವೆಯ ಮೇಲಿನಿಂದ ಪಿಕ್‌ಅಪ್ ಜೀಪ್ ಉರುಳಿಬಿದ್ದು 9 ಮಂದಿ ಮೃತಪಟ್ಟಿದ್ದಾರೆ.

ವಾಹನದಲ್ಲಿ 13 ಮಂದಿ ಇದ್ದರು. ನಾಲ್ವರು ಈಜಿ ಪಾರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಚಂದ್ರಶೇಖರ್ ಸಿಂಗ್ ತಿಳಿಸಿದ್ದಾರೆ.

ದಾನಪುರದ ಚಿತ್ರಕೂಟ ನಗರದಲ್ಲಿ ನಡೆದ ಮದುವೆ ಕಾರ್ಯಕ್ರಮ ಮುಗಿಸಿಕೊಂಡು ಅಖಿಪುರಕ್ಕೆ ವಾಪಸಾಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ವಾಹನ ನದಿಗೆ ಬಿತ್ತು.

ಎನ್‌ಡಿಆರ್‌ಎಫ್ ಸಿಬ್ಬಂದಿ ಪರಿಹಾರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮೃತರ ಕುಟುಂಬಕ್ಕೆ ತಲಾ ₹4 ಲಕ್ಷ ಪರಿಹಾರ ಘೋಷಿಸಲಾಗಿದೆ.

ಆರ್ಚರಿ ವಿಶ್ವಕಪ್ ಮೊದಲ ಹಂತದ ಟೂರ್ನಿ

ಸೆಮಿಗೆ ಅತನು, ದೀಪಿಕಾ



ದೀಪಿಕಾ ಕುಮಾರಿ–ಎಎಫ್‌ಪಿ ಸಂಗ್ರಹ ಚಿತ್ರ

ಗ್ವಾಟೆಮಾಲಾ ಸಿಟಿ (ಪಿಟಿಐ): ಪ್ರತಿಕೂಲದ ಹವಾಗುಣದ ನಡುವೆಯೂ ಉತ್ತಮ ಸಾಮರ್ಥ್ಯ ತೋರಿದ ದೀಪಿಕಾ ಕುಮಾರಿ ಹಾಗೂ ಅತನು ದಾಸ್, ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಆರ್ಚರಿ ಮೊದಲ ಹಂತದ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಕಾಲಿಟ್ಟರು. ರಿಕರ್ವ್ ವಿಭಾಗದ ಪುರುಷ ಮತ್ತು ಮಹಿಳಾ ವೈಯಕ್ತಿಕ ಸ್ಪರ್ಧೆಗಳಲ್ಲಿ ಮುನ್ನಡೆದರು.

ಅತನು ಹಾಗೂ ದೀಪಿಕಾ ದಂಪತಿ, ಗುರುವಾರ ಮಿಶ್ರ ರಿಕರ್ವ್ ವಿಭಾಗದಲ್ಲಿ ಜೊತೆಯಾಗಿ ಕಂಚಿನ ಪದಕದ ಪ್ಲೇ ಆಫ್ಸ್ ತಲುಪಿದ್ದರು.

ಇಲ್ಲಿಯ ಲಾಸ್ ಅಕೋರ್ಸ್‌ನ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ತೀವ್ರವಾಗಿ ಬೀಸುತ್ತಿದ್ದ ಗಾಳಿಯು ದೀಪಿಕಾ ಅವರ ಗುರಿಯನ್ನು ತಪ್ಪಿಸಲಿಲ್ಲ. ಕ್ವಾರ್ಟರ್‌ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಜರ್ಮನಿಯ ಆರ್ಚರ್ ಮಿಚೆಲ್ಲೆ ಕ್ರಾಫನ್ ಅವರನ್ನು ಮಣಿಸಿದರು. ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನ ಅಲಂಕರಿಸಿದ್ದ ದೀಪಿಕಾ, ಈ ಪಂದ್ಯದ ಮೂರು ಸೆಟ್‌ಗಳಲ್ಲಿ ಕ್ರಮವಾಗಿ 29, 30 ಹಾಗೂ 30 ಪಾಯಿಂಟ್ಸ್ ಗಳಿಸಿದರು. ಭಾನುವಾರ ನಡೆಯುವ ನಾಲ್ಕರಘಟ್ಟದ ಹಣಾಹಣಿಯಲ್ಲಿ ಅವರಿಗೆ ಮೆಕ್ಸಿಕೊದ ಅಲೆಜಾಂಡ್ರಾ ವೆಲೆನ್ಸಿಯಾ ಸವಾಲು ಎದುರಾಗಿದೆ.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿರುವ ದೀಪಿಕಾ, ವಿಶ್ವಕಪ್‌ನ ಎರಡು ಹಂತದ ಟೂರ್ನಿಗಳಲ್ಲಿ ವಿಜಯಿಯಾಗಿದ್ದಾರೆ. 2012ರಲ್ಲಿ ಟರ್ಕಿಯ ಅಂತಲ್ಯಾದಲ್ಲಿ ಹಾಗೂ 2018ರಲ್ಲಿ ಅಮೆರಿಕದ ಸಾಲ್ಟ್‌ಲೇಕ್ ಸಿಟಿಯಲ್ಲಿ ನಡೆದ ಟೂರ್ನಿಗಳಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು.

ಕ್ವಾರ್ಟರ್‌ಫೈನಲ್ ಪಂದ್ಯಕ್ಕೂ ಮೊದಲು ದೀಪಿಕಾ, ಅಮೆರಿಕದ ಕೆಸ್ಸಿ ಲಾರ್ಡ್ ಎದುರು ಹಾಗೂ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ, ಮೆಕ್ಸಿಕೊದ ಐಡಾ ರೋಮನ್ ವಿರುದ್ಧ ಗೆಲುವು ಸಾಧಿಸಿದ್ದರು.

ಎಂಟರಘಟ್ಟದ ಸೆಣಸಾಟದಲ್ಲಿ ಅತನು, ಕೆನಡಾದ ಎರಿಕ್ ಪೀಟರ್ಸ್ ಅವರನ್ನು ಹಿಂದಿಕ್ಕಿದರು. ವಿಶ್ವಕಪ್‌ನಲ್ಲಿ ಮೊದಲ ಬಾರಿ 'ಪೋಡಿಯಂ ಫಿನಿಶ್' ಮಾಡುವ ಅವಕಾಶ ಅತನು ಅವರಿಗೆ ಒದಗಿಬಂದಿದೆ. 2016ರಲ್ಲಿ ಅಂತಲ್ಯಾದಲ್ಲಿ ಅವರು ನಾಲ್ಕನೇ ಸ್ಥಾನ ಗಳಿಸಿದ್ದರು.

ಮಿಶ್ರ ವಿಭಾಗದಲ್ಲಿ ಎರಡನೇ ಶ್ರೇಯಾಂಕ ಪಡೆದಿರುವ ಅತನು–ದೀಪಿಕಾ ಜೋಡಿ ಸ್ಪೇನ್ ಸ್ಪರ್ಧಿಗಳನ್ನು ಮಣಿಸಿ ಸೆಮಿಫೈನಲ್ ತಲುಪಿದ್ದರು. ಆದರೆ ಸೆಮಿಯಲ್ಲಿ ಮೆಕ್ಸಿಕೊದ ಎದುರಾಳಿಗಳ ವಿರುದ್ಧ ಸೋಲು ಅನುಭವಿಸಿದರು. ಭಾನುವಾರ ನಡೆಯುವ ಕಂಚಿನ ಪದಕ ಸುತ್ತಿನಲ್ಲಿ ಅವರಿಗೆ ಅಮೆರಿಕದ ಬ್ರಾಡಿ ಎಲಿಸನ್–ಕೇಸಿ ಕೌಫೋಲ್ಡ್ ಸವಾಲು ಎದುರಾಗಿದೆ.

ಮಹಿಳೆಯರ ವೈಯಕ್ತಿಕ ವಿಭಾಗದ ರಿಕರ್ವ್ ಕ್ವಾರ್ಟರ್‌ಫೈನಲ್‌ನಲ್ಲಿ ಅಂಕಿತಾ ಭಕತ್ ಅವರು ಅಲೆಜಾಂಡ್ರಾ ವೆಲೆನ್ಸಿಯಾ ಎದುರು ಸೋತರು.

ಶತಕದಂಚಿನಲ್ಲಿದ್ದ ಪಡಿಕ್ಕಲ್‌ಗೆ ವಿರಾಟ್ ಕಿವಿಮಾತು!



ವಿರಾಟ್ ಕೊಹ್ಲಿ

ಮುಂಬೈ: 'ಈಗಲ್ಲದಿದ್ದರೆ ಇನ್ನೊಂದು ಪಂದ್ಯದಲ್ಲಿ ಶತಕ ಗಳಿಸಲು ಅವಕಾಶ ಸಿಗುತ್ತದೆ. ಆದಷ್ಟು ಬೇಗ ಪಂದ್ಯ ಮುಗಿಸಿಬಿಡು ಎಂದು ದೇವದತ್ತ ಪಡಿಕ್ಕಲ್ ನನಗೆ ಹೇಳಿದ್ದರು. ಆದರೆ, ಅವಕಾಶ ಇದೆ. ಶತಕ ಪೂರೈಸು, ಗೆಲುವನ್ನೂ ಸಾಧಿಸೋಣವೆಂದು ಸಲಹೆ ನೀಡಿದ್ದೆ. ಅದ್ಭುತವಾಗಿ ಆಡಿದರು ದೇವದತ್ತ' ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಗುರುವಾರದ ಪಂದ್ಯದಲ್ಲಿ ದೇವದತ್ತ ಮತ್ತು ವಿರಾಟ್ ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ 181 ರನ್ ಗಳಿಸಿದ್ದರು. ತಂಡವು 10 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು. ತಾವಿಬ್ಬರೂ ಬ್ಯಾಟಿಂಗ್ ಮಾಡುವಾಗ ನಡೆಸಿದ ಪರಸ್ಪರ ಸಂಭಾಷಣೆಯ ಕುರಿತು ಅಧಿಕೃತ ಪ್ರಸಾರಕ ವಾಹಿನಿಯ ಸಂದರ್ಶನದಲ್ಲಿ ವಿರಾಟ್ ಬಹಿರಂಗಪಡಿಸಿದ್ದಾರೆ. 'ಶತಕದ ಬಗ್ಗೆ ನಾವು ಮಾತನಾಡಿದ್ದೇವೆ. ಆದರೆ ಅವರು ಪಂದ್ಯವನ್ನು ಬೇಗನೇ ಮುಗಿಸಲು ತಿಳಿಸಿದರು. ಇನ್ನೂ ಅನೇಕ ಶತಕಗಳು ದಾಖಲಾಗಲಿವೆ ಎಂದವರು ಹೇಳಿದರು. ಈ ಸಂದರ್ಭದಲ್ಲಿ ಮೊದಲು ಈ ಶತಕವನ್ನು ಗಳಿಸು, ಬಳಿಕ ಈ ಮಾತನ್ನು ಆಡುವಂತೆ ಪಡಿಕ್ಕಲ್‌ಗೆ ತಿಳಿಸಿದ್ದೆ' ಎಂದು ವಿರಾಟ್ ವಿವರಿಸಿದ್ದಾರೆ.

'ಭಾರತ ಕ್ರಿಕೆಟ್‌ನಲ್ಲಿ ಭವಿಷ್ಯ ಭರವಸೆಯ ಆಟಗಾರ ಪಡಿಕ್ಕಲ್. ಅವರು ಹೋದ ವರ್ಷದ ಟೂರ್ನಿಯಲ್ಲಿಯೂ ಅಮೋಘವಾಗಿ ಬ್ಯಾಟಿಂಗ್ ಮಾಡಿದ್ದರು. ಇನ್ನು ಮುಂದೆಯೂ ಇಂತಹ ಇನ್ನಷ್ಟು ಉತ್ತಮ ಇನಿಂಗ್ಸ್‌ಗಳ ಕಾಣಿಕೆ ನೀಡುವ ಸಾಮರ್ಥ್ಯ ಹೊಂದಿದ್ದಾರೆ' ಎಂದು ವಿರಾಟ್ ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಬೆಂಗಳೂರಿನ ಪಡಿಕ್ಕಲ್, 'ಶತಕ ಗಳಿಸುವುದಕ್ಕಿಂತಲೂ ತಂಡವನ್ನು ಬೇಗನೆ ಗೆಲುವಿನ ದಡ ಸೇರಿಸುವುದು ಮುಖ್ಯ. ನಮ್ಮಿಬ್ಬರ ಸಂಭಾಷಣೆಯಲ್ಲಿ ಅದನ್ನು ಸ್ಪಷ್ಟವಾಗಿ ಕೊಹ್ಲಿಗೆ ಹೇಳಿದ್ದೆ. ಆದರೆ, ಅವರ ಪ್ರೋತ್ಸಾಹದಿಂದ ಎರಡೂ ಸಾಧ್ಯವಾಯಿತು' 'ಟೂರ್ನಿಗಿಂತ ಮುನ್ನ ನಾನು ಕೊರೊನಾ ಸೋಂಕಿಗೊಳಗಾಗಿದ್ದಾಗ ಇಲ್ಲಿಗೆ ಬಂದು ಆಟವಾಡುವ ಬಗ್ಗೆ ಯೋಚಿಸುತ್ತಿದ್ದೆ. ಮೊದಲ ಪಂದ್ಯಕ್ಕೆ ಅಲಭ್ಯರಾದಾಗ ತುಂಬಾ ಬೇಸರವಾಗಿತ್ತು. ಈಗ ತಂಡದ ಗೆಲುವಿಗಾಗಿ ಕೊಡುಗೆ ನೀಡಿರುವುದು ಸಂತಸ ನೀಡಿದೆ. ತೃಪ್ತಿದಾಯಕ ಇನಿಂಗ್ಸ್ ಇದು' ಎಂದಿದ್ದಾರೆ.

ದೇವದತ್ತ ಕರ್ನಾಟಕದ ಹುಡುಗ: ತರೂರ್‌ಗೆ ದೊಡ್ಡಗಣೇಶ್ ತಿರುಗೇಟು

ಬೆಂಗಳೂರು: ಕರ್ನಾಟಕದ ಯುವಕ್ರಿಕೆಟಿಗ ದೇವದತ್ತ ಪಡಿಕ್ಕಲ್ ಅವರ ಕುರಿತು ಕೇರಳದ ಕಾಂಗ್ರೆಸ್ ಮುಖಂಡ ಶಶಿ ತರೂರ್ ನೀಡಿರುವ ಹೇಳಿಕೆಗೆ ರಾಜ್ಯದ ಹಿರಿಯ ಕ್ರಿಕೆಟಿಗ ದೊಡ್ಡಗಣೇಶ್ ತಿರುಗೇಟು ನೀಡಿದ್ದಾರೆ.

'ಈ ವರ್ಷದ ಐಪಿಎಲ್‌ನಲ್ಲಿ ಎರಡೂ ಶತಕಗಳನ್ನು ಮಲಯಾಳಿಗಳು ಗಳಿಸಿರುವುದು ಎಷ್ಟೊಂದು ಸೋಜಿಗ. ಇಷ್ಟು ಕಾಲ ಕೇರಳವನ್ನು ಕ್ರಿಕೆಟ್‌ನ ಹಿನ್ನೀರು ಎಂದು ಪರಿಗಣಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ 100ರ ಗಡಿ ದಾಟಿದ ಇಬ್ಬರು ಬ್ಯಾಟ್ಸ್‌ಮನ್‌ಗಳು ಮಲಯಾಳಿಗಳು. ಸಂಜು ಸ್ಯಾಮ್ಸನ್ ಜೊತೆ ಸೇರಿದ ದೇವದತ್ತ ಪಡಿಕ್ಕಲ್ ಅವರಿಗೆ ಅಭಿನಂದನೆಗಳು' ಎಂದು ಶಶಿ ತರೂರ್ ಟ್ವೀಟ್ ಮಾಡಿದ್ದರು. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡುವ ದೇವದತ್ತ ಗುರುವಾರದ ಪಂದ್ಯದಲ್ಲಿ ಶತಕ ಬಾರಿಸಿದ್ದರು.

ತರೂರ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ದೊಡ್ಡ ಗಣೇಶ್, '2016ರಲ್ಲಿ ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ್ದ ಕರುಣ್ ನಾಯರ್ ಅವರನ್ನು ಕೆಲವರು ತಮ್ಮವರೆಂದು ವಾದಿಸಿದ್ದರು. ಆದರೆ, ಭಾರತ ತಂಡದಲ್ಲಿ ಅವರು ಸ್ಥಾನ ಕಳೆದುಕೊಂಡಾಗ ಸುಮ್ಮನಿದ್ದರು. ಈಗ ದೇವದತ್ತ ಹೆಸರಲ್ಲೂ ಅದೇ ನಡೆಯುತ್ತಿದೆ. ಅವರು ಕೇರಳ ಮೂಲದವರು ಎಂಬುದನ್ನು ಒಪ್ಪುತ್ತೇನೆ. ಆದರೆ ಕ್ರಿಕೆಟಿಗರಾಗಿ ಕರುಣ್ ಹಾಗೂ ದೇವದತ್ತ ಅವರನ್ನು ಬೆಳೆಸಿದ್ದರಲ್ಲಿ ಕೇರಳದ ಪಾತ್ರವೇನೂ ಇಲ್ಲ. ಅವರು ಕರ್ನಾಟಕದ ಹುಡುಗರು' ಎಂದಿದ್ದಾರೆ.

ಟಿ20 ಸರಣಿ: ಎರಡನೇ ಪಂದ್ಯದಲ್ಲಿ ಜಿಂಬಾಬ್ವೆಗೆ ಮಣಿದ ಪಾಕಿಸ್ತಾನ



ಲೂಕ್ ಜೊಂಗ್ವೆ ಅವರು ವಿಕೆಟ್ ಗಳಿಸಿ ಸಂಭ್ರಮಿಸಿದ ಪರಿ –ಎಎಫ್‌ಪಿ ಚಿತ್ರ

ಹರಾರೆ, ಜಿಂಬಾಬ್ವೆ (ಎಎಫ್‌ಪಿ): ಲೂಕ್ ಜೊಂಗ್ವೆ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಜಿಂಬಾಬ್ವೆ ತಂಡ ಪಾಕಿಸ್ತಾನ ಎದುರಿನ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಜಯ ಗಳಿಸಿತು.

ಮೊದಲ ಪಂದ್ಯದಲ್ಲಿ ಸೋತಿದ್ದ ಜಿಂಬಾಬ್ವೆ ಶುಕ್ರವಾರ ನಡೆದ ಹಣಾಹಣಿಯಲ್ಲಿ 19 ರನ್‌ಗಳಿಂದ ಪ್ರವಾಸಿ ತಂಡವನ್ನು ಮಣಿಸಿ ಮೂರು ಪಂದ್ಯಗಳ ಸರಣಿಯಲ್ಲಿ ಸಮಬಲ ಸಾಧಿಸಿತು.

ಟಾಸ್ ಗೆದ್ದ ಪಾಕಿಸ್ತಾನ ಬೌಲಿಂಗ್ ಆರಿಸಿಕೊಂಡಿತು. ಆತಿಥೇಯರು ಒಂಬತ್ತು ವಿಕೆಟ್ ಕಳೆದುಕೊಂಡು 118 ರನ್ ಗಳಿಸಿದರು. 34 ರನ್ ಕಲೆ ಹಾಕಿದ ತಿನಾಶೆ ಕಮುನುಕನ್ವೆ ಏಕಾಂಗಿ ಹೋರಾಟ ನಡೆಸಿದರು.

ಸಾಧಾರಣ ಮೊತ್ತದ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ ಆರಂಭಿಕ ಬ್ಯಾಟ್ಸ್‌ಮನ್ ಮೊಹಮ್ಮದ್ ರಿಜ್ವಾನ್ ಅವರನ್ನು ಬೇಗನೇ ಕಳೆದುಕೊಂಡಿತು. ಬಾಬರ್ ಆಜಂ ಏಕಾಂಗಿಯಾಗಿ ತಂಡದ ಇನಿಂಗ್ಸ್ ಮುನ್ನಡೆಸಲು ಪ್ರಯತ್ನಿಸಿದರು. ಆದರೆ 19.5 ಓವರ್‌ಗಳಲ್ಲಿ 99 ರನ್‌ಗಳಿಗೆ ತಂಡ ಆಲೌಟಾಗಿ ಸೋಲೊಪ್ಪಿಕೊಂಡಿತು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನ 11 ರನ್‌ಗಳಿಂದ ಜಯ ಗಳಿಸಿತ್ತು. ಕೊನೆಯ ಪಂದ್ಯ ಭಾನುವಾರ ನಡೆಯಲಿದ್ದು ಸತತ ಎರಡು ಟಿ20 ಸರಣಿ ಗೆಲುವಿನ ಗುರಿಯೊಂದಿಗೆ ಪಾಕಿಸ್ತಾನ ಕಣಕ್ಕೆ ಇಳಿಯಲಿದೆ. ದಕ್ಷಿಣ ಆಫ್ರಿಕಾದಲ್ಲಿ ಸರಣಿ ಗೆದ್ದು ತಂಡ ಇಲ್ಲಿಗೆ ಬಂದಿತ್ತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 9ಕ್ಕೆ 118 (ತಿನಾಶೆ ಕಮುನುಕನ್ವೆ 34, ಮರುಮಾನಿ 13, ಮಧೆವೆರೆ 16, ಚಕಾಬ್ವ 18, ಮುಸಕಂಡ 13; ಮೊಹಮ್ಮದ್ ಹಸ್ನಾನಿ 19ಕ್ಕೆ2, ಫಹೀಂ ಅಶ್ರಫ್ 10ಕ್ಕೆ1, ಅರ್ಷದ್ ಇಕ್ಬಾಲ್ 16ಕ್ಕೆ1, ಹ್ಯಾರಿಸ್ ರವೂಫ್ 10ಕ್ಕೆ1, ಉಸ್ಮಾನ್ ಖಾದಿರ್ 28ಕ್ಕೆ1, ಡ್ಯಾನಿಶ್ ಅಜೀಜ್ 29ಕ್ಕೆ2); ಪಾಕಿಸ್ತಾನ: 19.5 ಓವರ್‌ಗಳಲ್ಲಿ 99 (ಮೊಹಮ್ಮದ್ ರಿಜ್ವಾನ್ 13, ಬಾಬರ್ ಆಜಂ 41, ಡ್ಯಾನಿಶ್ ಅಜೀಜ್ 22; ಮುಜರಬಾನಿ 24ಕ್ಕೆ1, ಗರಾವ 10ಕ್ಕೆ1, ಲೂಕ್ ಜೊಂಗ್ವೆ 18ಕ್ಕೆ4, ಬರ್ಲ್ 21ಕ್ಕೆ2). ಫಲಿತಾಂಶ: ಜಿಂಬಾಬ್ವೆಗೆ 19 ರನ್‌ಗಳ ಜಯ; ಮೂರು ಪಂದ್ಯಗಳ ಸರಣಿ 1–1ರಲ್ಲಿ ಸಮ.

ಬಾಕ್ಸಿಂಗ್: ಚಿನ್ನ ಗೆದ್ದ ಸಚಿನ್

ನವದೆಹಲಿ (ಪಿಟಿಐ): ದಿಟ್ಟ ಸಾಮರ್ಥ್ಯ ತೋರಿದ ಸಚಿನ್, ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ಗೆದ್ದುಕೊಟ್ಟರು. ಇದರೊಂದಿಗೆ, ಪೋಲೆಂಡ್‌ನ ಕಿಯೆಲ್ಸೆಯಲ್ಲಿ ನಡೆದ ಟೂರ್ನಿಯಲ್ಲಿ ದೇಶದ ಬಾಕ್ಸರ್‌ಗಳು ಜಯಿಸಿದ ಚಿನ್ನದ ಪದಕಗಳ ಸಂಖ್ಯೆ ಎಂಟಕ್ಕೇರಿತು. 56 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಸಚಿನ್, ಫೈನಲ್ ಬೌಟ್‌ನಲ್ಲಿ 4–1ರಿಂದ ಕಜಕಸ್ತಾನದ ಯೆರ್ಬೋಲತ್ ಸಬಿರ್ ಸವಾಲು ಮೀರಿದರು.

ಬಿಎಫ್‌ಸಿಯ ಎಎಫ್‌ಸಿ ಕಪ್ ಪಂದ್ಯ ಸದ್ಯಕ್ಕಿಲ್ಲ

ನವದೆಹಲಿ: ಎಎಫ್‌ಸಿ ಕಪ್ ಪ್ಲೇ ಆಫ್ ಹಂತದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಮುಂದಿನ ವಾರ ಆಡಬೇಕಾಗಿದ್ದ ಪಂದ್ಯವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಎದುರಾಳಿ ತಂಡ ಯಾವುದೆಂದು ನಿರ್ಧಾರ ವಾಗದ ಕಾರಣ ಪಂದ್ಯಕ್ಕೆ ವಿಘ್ನ ಒದಗಿದೆ. ವೇಳಾಪಟ್ಟಿಯಂತೆ ಏಪ್ರಿಲ್ 28ರಂದು ಪಂದ್ಯ ನಡೆಯಬೇಕಿತ್ತು.

ಮಾಲ್ಡೀವ್ಸ್ ಈಗಲ್ಸ್ ಮತ್ತು ಬಾಂಗ್ಲಾದೇಶ ಪ್ರೀಮಿಯರ್ ಲೀಗ್‌ನಲ್ಲಿ ಆರು ಬಾರಿ ಚಾಂಪಿಯನ್ ಆಗಿರುವ ಅಬಹಾನಿ ನಡುವಿನ ಪಂದ್ಯದಲ್ಲಿ ಗೆಲ್ಲುವ ತಂಡವನ್ನು ಬಿಎಫ್‌ಸಿ ಎದುರಿಸಬೇಕಾಗಿದೆ. ಅಬಹಾನಿ ಮತ್ತು ಈಗಲ್ಸ್ ನಡುವಿನ ಪಂದ್ಯ ಢಾಕಾದ ಬಂಗಬಂಧು ಕ್ರೀಡಾಂಗಣದಲ್ಲಿ ಇದೇ 14ರಂದು ನಡೆಯಬೇಕಾಗಿತ್ತು. ಆದರೆ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ಪಂದ್ಯವನ್ನು 21ಕ್ಕೆ ಕಠ್ಮಂಡುವಿನಲ್ಲಿ ನಡೆಸಲು ನಿರ್ಧರಿಸಲಾಯಿತು. ಪ್ರಯಾಣ ನಿರ್ಬಂಧಗಳಿರುವುದರಿಂದ ಅದು ಕೂಡ ನಡೆಯಲಿಲ್ಲ.

ನಡಾಲ್‌ಗೆ ಮಣಿದ ನಿಶಿಕೋರಿ

ಬಾರ್ಸಿಲೋನಾ (ಎಪಿ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ರಫೆಲ್ ನಡಾಲ್ ಅವರು ಕೀ ನಿಶಿಕೋರಿ ಅವರನ್ನು ಮಣಿಸಿ ಬಾರ್ಸಿಲೋನಾ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಇಲ್ಲಿ 11ನೇ ಬಾರಿ ಪ್ರಶಸ್ತಿ ಜಯಿಸಿರುವ ಸ್ಪೇನ್‌ನ ನಡಾಲ್, 6-0, 2-6, 6-2ರಿಂದ ಜಪಾನ್ ಆಟಗಾರರನ್ನು ಸೋಲಿಸಿದರು.

ಮೊದಲ ಸೆಟ್‌ಅನ್ನು ಸುಲಭವಾಗಿ ಗೆದ್ದ ನಡಾಲ್ ಅವರಿಗೆ ತಿರುಗೇಟು ನೀಡಿದ ನಿಶಿಕೋರಿ, ಎರಡನೇ ಸೆಟ್‌ನಲ್ಲಿ ಪಾರಮ್ಯ ಮೆರೆದರು. ನಿರ್ಣಾಯಕ ಸೆಟ್‌ನಲ್ಲಿ ಸ್ಪೇನ್ ಆಟಗಾರ ಎರಡು ಬಾರಿ ನಿಶಿಕೋರಿಯ ಸರ್ವ್ ಮುರಿದರು. ಸೆಟ್‌ನೊಂದಿಗೆ ಪಂದ್ಯವನ್ನೂ ಗೆದ್ದು ಬೀಗಿದರು.



ರಫೆಲ್ ನಡಾಲ್ ಅವರ ಆಟದ ವೈಖರಿ–ಎಎಫ್‌ಪಿ ಚಿತ್ರ

ಎಂಟರಘಟ್ಟದಲ್ಲಿ ನಡಾಲ್ ಅವರಿಗೆ ಬ್ರಿಟನ್‌ನ ಕ್ಯಾಮರಾನ್ ನೊರಿ ಸವಾಲು ಎದುರಾಗಿದೆ.



ರೋಹಿತ್ ಶರ್ಮಾ ಅರ್ಧಶತಕ ವ್ಯರ್ಥ; ಮುಂಬೈ ಇಂಡಿಯನ್ಸ್‌ಗೆ ಮತ್ತೊಂದು ಸೋಲು

ಜಯದ ಹಾದಿಗೆ ಮರಳಿದ ಪಂಜಾಬ್



ಕ್ರಿಸ್ ಗೇಲ್ ಮತ್ತು ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಐಪಿಎಲ್‌ನಲ್ಲಿ ಶುಕ್ರವಾರ ಜಯದ ಹಾದಿಗೆ ಮರಳಿತು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ 9 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಮುಂಬೈ ತಂಡವನ್ನು ಮಣಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಪಂಜಾಬ್ ತಂಡದ ಶಿಸ್ತಿನ ದಾಳಿಯ ಮುಂದೆ ಮುಂಬೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 131 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಅದಕ್ಕುತ್ತರವಾಗಿ ಕೆ.ಎಲ್. ರಾಹುಲ್ (ಔಟಾಗದೆ 60) ಮತ್ತು ಕ್ರಿಸ್ ಗೇಲ್ (ಔಟಾಗದೆ 43) ಅವರ ಬ್ಯಾಟಿಂಗ್‌ನಿಂದಾಗಿ ಕಿಂಗ್ಸ್ 17.4 ಓವರ್‌ಗಳಲ್ಲಿ 1 ವಿಕೆಟ್‌ಗೆ 132 ರನ್ ಗಳಿಸಿ ಜಯಿಸಿತು. ರಾಹುಲ್ ಮತ್ತು ಮಯಂಕ್ ಮೊದಲ ವಿಕೆಟ್ ಜೊತೆಯಾಟದಲ್ಲಿ 53 ರನ್‌ಗಳನ್ನು ಪೇರಿಸಿದ್ದರಿಂದ ಜಯದ ಹಾದಿ ಸುಗಮವಾಯಿತು.

ರವಿ ಸ್ಪಿನ್ ಮೋಡಿ: ಸತತ ಮೂರು ಸೋಲುಗಳಿಂದ ಕಂಗೆಟ್ಟಿದ್ದ ಪಂಜಾಬ್ ತಂಡದ ಗೆಲುವಿನಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ (21ಕ್ಕೆ2) ಪ್ರಮುಖ ಪಾತ್ರ ವಹಿಸಿದರು.

ಅವರು ಮುಂಬೈಗೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಕ್ವಿಂಟನ್ ಡಿಕಾಕ್ ಮತ್ತು ಇಶಾನ್ ಕಿಶನ್ ಬೇಗನೆ ಔಟಾದರು. 26 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟಕ್ಕೆ ಸಿಲುಕಿತು. ಆದರೆ ಆರಂಭಿಕ ಬ್ಯಾಟ್ಸ್‌ಮನ್ ಮತ್ತು ನಾಯಕ ರೋಹಿತ್ ಶರ್ಮಾ (63; 52 ಎಸೆತ, 5 ಬೌಂಡರಿ, 2 ಸಿಕ್ಸರ್) ಜೊತೆಗೂಡಿದ ಸೂರ್ಯಕುಮಾರ್ ಯಾದವ್ (33; 27 ಎ, 3 ಬೌಂ, 1 ಸಿ) ಅಮೋಘ ಬ್ಯಾಟಿಂಗ್ ಮಾಡಿ ಇನಿಂಗ್ಸ್‌ಗೆ ಬಲ ತುಂಬಿದರು. ಮೂರನೇ ವಿಕೆಟ್‌ಗೆ 79 ರನ್ ಸೇರಿಸಿದ ಇವರಿಬ್ಬರು ಮೊತ್ತವನ್ನು ನೂರರ ಗಡಿ ದಾಟಿಸಿದರು. ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದ ಸೂರ್ಯಕುಮಾರ್ ವಿಕೆಟ್ ಕಬಳಿಸಿದ ರವಿ ಬಿಷ್ಣೋಯಿ ಸಂಭ್ರಮಿಸಿದರು.

ಸ್ವಲ್ಪ ಹೊತ್ತಿನಲ್ಲಿ ರೋಹಿತ್ ಶರ್ಮಾ ಕೂಡ ವಿಕೆಟ್ ಕಳೆದುಕೊಂಡರು. ನಂತರ ಕೀರನ್ ಪೊಲಾರ್ಡ್ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದರು. ಆದರೆ 12 ಎಸೆತಗಳಲ್ಲಿ 16 ರನ್ ಗಳಿಸಲಷ್ಟೇ ಅವರಿಗೆ ಸಾಧ್ಯವಾಯಿತು. ವೆಸ್ಟ್ ಇಂಡೀಸ್‌ನ ಈ ದೈತ್ಯ ಬ್ಯಾಟ್ಸ್‌ಮನ್ ಬ್ಯಾಟ್‌ನಿಂದ ಒಂದು ಸಿಕ್ಸರ್ ಮಾತ್ರ ಸಿಡಿಯಿತು.

ಪಂಜಾಬ್ ತಂಡದ ಅನುಭವಿ ಬೌಲರ್ ಮೊಹಮ್ಮದ್ ಶಮಿ ಕೂಡ ಎರಡು ವಿಕೆಟ್ ಗಳಿಸಿದರು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 6ಕ್ಕೆ 131 (20 ಓವರ್‌ಗಳಲ್ಲಿ)
ಡಿಕಾಕ್ ಸಿ ಹೆನ್ರಿಕ್ಸ್ ಬಿ ಹೂಡಾ 03 (5ಎ)
ರೋಹಿತ್ ಸಿ ಅಲೆನ್ ಬಿ ಶಮಿ 63 (52ಎ, 4X5, 6X2)
ಕಿಶನ್ ಸಿ ರಾಹುಲ್ ಬಿ ಬಿಷ್ಣೋಯಿ 06 (17ಎ)
ಸೂರ್ಯಕುಮಾರ್ ಸಿ ಗೇಲ್ ಬಿ ಬಿಷ್ಣೋಯಿ 33 (27ಎ, 4X3, 6X1)
ಪೊಲಾರ್ಡ್ ಔಟಾಗದೆ 16 (12 ಎ, 6x1)
ಹಾರ್ದಿಕ್ ಸಿ ಹೂಡ ಬಿ ಅರ್ಷದೀಪ್ 1 (4 ಎ)
ಕೃಣಾಲ್ ಸಿ ಪೂರನ್ ಬಿ ಶಮಿ 3 (3 ಎ)
ಜಯಂತ್ ಯಾದವ್ ಔಟಾಗದೆ 0 (0 ಎ)
ಇತರೆ (ಬೈ 4, ವೈಡ್ 2) 6
ವಿಕೆಟ್ ಪತನ: 1-7 (ಕ್ವಿಂಟನ್ ಡಿಕಾಕ್, 16.1), 2-26 (ಇಶಾನ್ ಕಿಶನ್, 6.6), 3-105 (ಸೂರ್ಯಕುಮಾರ್ ಯಾದವ್, 16.1), 4-112 (ರೋಹಿತ್ ಶರ್ಮಾ, 17.3), 5-122 (ಹಾರ್ದಿಕ್ ಪಾಂಡ್ಯ, 18.4), 6-130 (ಕೃಣಾಲ್ ಪಾಂಡ್ಯ, 19.5)
ಬೌಲಿಂಗ್: ಮೊಯಿಸೆಸ್ ಹೆನ್ರಿಕ್ಸ್ 3-0-12-0, ದೀಪಕ್ ಹೂಡಾ 3-0-15-1, ಮೊಹಮ್ಮದ್ ಶಮಿ 4-0-21-2, ರವಿ ಬಿಷ್ಣೋಯಿ 4-0-21-2, ಫ್ಯಾಬಿಯನ್ ಅಲೆನ್ 3-0-30-0, ಅರ್ಷದೀಪ್ ಸಿಂಗ್ 3-0-28-1

ಪಂಜಾಬ್ ಕಿಂಗ್ಸ್ 1ಕ್ಕೆ 132 (17.4 ಓವರ್‌ಗಳಲ್ಲಿ)
ರಾಹುಲ್ ಔಟಾಗದೆ 60, (52 ಎ, 4X3,6X3)
ಮಯಂಕ್ ಸಿ ಸೂರ್ಯಕುಮಾರ್ ಬಿ ಚಾಹರ್ 25-(20 ಎ, 4X4, 6X1)
ಕ್ರಿಸ್ ಗೇಲ್ ಔಟಾಗದೆ 43-(35 ಎ, 4X5, 6X2)
ಇತರೆ (ನೋಬಾಲ್ 1, ವೈಡ್ 3) 4
ವಿಕೆಟ್ ಪತನ: 1-53 (ಮಯಂಕ್ ಅಗರವಾಲ್, 7.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 2.4-0-30-0, ಕೃಣಾಲ್ ಪಾಂಡ್ಯ 3-0-31-0, ಜಸ್‌ಪ್ರೀತ್ ಬೂಮ್ರಾ 3-0-21-0, ರಾಹುಲ್ ಚಾಹರ್ 4-0-19-1, ಜಯಂತ್ ಯಾದವ್ 4-0-20-0, ಕೀರನ್ ಪೊಲಾರ್ಡ್ 1-0-11-0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 9 ವಿಕೆಟ್‌ಗಳ ಗೆಲುವು

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಕೋವಿಡ್: ಅಕ್ಷರ್ ಗುಣಮುಖ



ಅಕ್ಷರ್ ಪಟೇಲ್

ಮುಂಬೈ (ಪಿಟಿಐ): ಕೊರೊನಾ ಸೋಂಕು ಪೀಡಿತರಾಗಿದ್ದ ಆಲ್‌ರೌಂಡರ್ ಅಕ್ಷರ್ ಪಟೇಲ್ ಗುಣಮುಖರಾಗಿದ್ದು, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೇರಿದ್ದಾರೆ. 20 ದಿನಗಳ ಕ್ವಾರಂಟೈನ್ ಬಳಿಕ ಬಳಿಕ ಸಹ ಆಟಗಾರರನ್ನು ಸೇರಿಕೊಳ್ಳುತ್ತಿರುವ ಬದುಕಿನ 'ಅತಿ ಸಂತಸದ ಕ್ಷಣ' ಎಂದಿದ್ದಾರೆ.

27 ವರ್ಷದ ಅಕ್ಷರ್ ಪಟೇಲ್ ಮಾರ್ಚ್ 28ರಂದು ನೆಗೆಟಿವ್ ವರದಿಯೊಂದಿಗೆ ಮುಂಬೈ ತಲುಪಿದ್ದರು. ಬಳಿಕ ನಡೆಸಿದ್ದ ಪರೀಕ್ಷೆಯಲ್ಲಿ ಕೋವಿಡ್ ಸೋಂಕು ದೃಢಪಟ್ಟಿತ್ತು. ಸೌಮ್ಯ ಲಕ್ಷಣಗಳನ್ನು ಹೊಂದಿದ್ದ ಅಕ್ಷರ್ ಪಟೇಲ್ ಅವರಿಗೆ ಬಿಸಿಸಿಐ ವೈದ್ಯಕೀಯ ನೆರವು ಒದಗಿಸಿತ್ತು. ಈಗ ಕೋವಿಡ್‌ನಿಂದ ಸಂಪೂರ್ಣವಾಗಿ ಗುಣಮುಖರಾಗಿ ತಂಡವನ್ನು ಸೇರಿದ್ದಾರೆ.

ಎಡಗೈ ಆಫ್ ಸ್ಪಿನ್ ಬೌಲಿಂಗ್ ಹಾಗೂ ಕೆಳ ಕ್ರಮಾಂಕದಲ್ಲಿ ಉಪಯುಕ್ತ ಬ್ಯಾಟಿಂಗ್ ಮಾಡುವ ಸಾಮರ್ಥ್ಯವನ್ನು ಅಕ್ಷರ್ ಹೊಂದಿದ್ದಾರೆ.

ಐಪಿಎಲ್‌ನಿಂದ ನಟರಾಜನ್ ಹೊರಕ್ಕೆ

ಚೆನ್ನೈ (ಪಿಟಿಐ): ಭಾರತ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡದ ವೇಗದ ಬೌಲರ್ ತಂಗರಸು ನಟರಾಜನ್ ಅವರು ಮೊಣಕಾಲಿನ ಗಾಯದಿಂದಾಗಿ ಐಪಿಎಲ್ ಟೂರ್ನಿಯ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದು, ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

ಈ ಋತುವಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಇದುವರೆಗೆ ನಾಲ್ಕು ಪಂದ್ಯಗಳನ್ನಾಡಿದ್ದು, ಈ ಪೈಕಿ ಎರಡರಲ್ಲಿ ಮಾತ್ರ ನಟರಾಜನ್ ಕಣಕ್ಕಿಳಿದಿದ್ದರು.

'ಐಪಿಎಲ್ ಟೂರ್ನಿಯಲ್ಲಿ ಆಡಲು ಸಾಧ್ಯವಾಗದೇ ಇರುವುದಕ್ಕೆ ಖೇದವಿದೆ. ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದೆ. ದುರದೃಷ್ಟವಶಾತ್ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದ್ದು, ಈ ಋತುವಿನ ಟೂರ್ನಿಯಲ್ಲಿ ಆಡುತ್ತಿಲ್ಲ' ಎಂದು ಎಂದು ನಟರಾಜನ್ ಹೇಳಿರುವ ವಿಡಿಯೊವನ್ನು ಸನ್‌ರೈಸರ್ಸ್ ಹೈದರಾಬಾದ್ ತಂಡವು ಟ್ವಿಟರ್‌ನಲ್ಲಿ ಹಂಚಿಕೊಂಡಿದೆ.

ಭಾರತ ಮತ್ತು ಆಸ್ಟ್ರೇಲಿಯಾ ವಿರುದ್ಧ ನಡೆದ ಸರಣಿಯ ಸಂದರ್ಭ ಅವರ ಮೊಣಕಾಲಿಗೆ ಗಾಯವಾಗಿತ್ತು.

'ನಟರಾಜನ್ ಸಂಪೂರ್ಣ ಗುಣಮುಖರಾಗಿಲ್ಲ. ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ) ಪುನಶ್ಚೇತನ ಶಿಬಿರಕ್ಕೆ ಹಾಜರಾಗಿದ್ದರು. ಅಲ್ಲಿ ಅವರನ್ನು 'ಫಿಟ್' ಎಂದು ಘೋಷಿಸಲಾಗಿತ್ತು. ಬಳಿಕ ಇಂಗ್ಲೆಂಡ್ ವಿರುದ್ಧದ ಟಿ20 ಮತ್ತು ಒಂದು ಏಕದಿನ ಪಂದ್ಯದಲ್ಲಿ ಆಡಿಸಲಾಗಿತ್ತು. ಆದರೆ ಅವರು ಶೇ 100ರಷ್ಟು 'ಫಿಟ್' ಆಗಿರಲಿಲ್ಲ ಎಂಬುದು ಗೊತ್ತಾಗಿದೆ. ಇನ್ನು ಅವರು ದೀರ್ಘ ಅವಧಿಗೆ ಅಲಭ್ಯರಾಗಬಹುದು' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮೂಲಗಳು ಹೇಳಿವೆ.

ಸಂಜು-ಮಾರ್ಗನ್‌ಗೆ ಜಯದ ತವಕ



ಆ್ಯಂಡ್ರೆ ರಸೆಲ್

ಮುಂಬೈ (ಪಿಟಿಐ): ಸತತ ಸೋಲುಗಳಿಂದ ಕಂಗೆಟ್ಟಿರುವ ರಾಜಸ್ಥಾನ ರಾಯಲ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಶನಿವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಉಭಯ ತಂಡಗಳೂ ತಲಾ ನಾಲ್ಕು ಪಂದ್ಯಗಳನ್ನು ಆಡಿವೆ. ಅದರಲ್ಲಿ ತಲಾ ಮೂರರಲ್ಲಿ ಸೋತು, ಒಂದರಲ್ಲಿ ಗೆದ್ದಿವೆ. ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡವು ಗುರುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರು ಸೋಲಿನ ಆಘಾತ ಅನುಭವಿಸಿತ್ತು. ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ಅವರ ಅಬ್ಬರದ ಜೊತೆಯಾಟವನ್ನು ಮುರಿಯವಲ್ಲಿ ರಾಜಸ್ಥಾನದ ಬೌಲರ್‌ಗಳು ಸಂಪೂರ್ಣ ವೈಫಲ್ಯ ಅನುಭವಿಸಿದ್ದರು. ಬೆಂಗಳೂರು 10 ವಿಕೆಟ್‌ಗಳಿಂದ ಜಯಶಾಲಿಯಾಗಿತ್ತು. 20 ವರ್ಷದ ದೇವದತ್ತ ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದ್ದರು.

ಅದರಿಂದಾಗಿ ತಂಡದ ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳೊಂದಿಗೆ ತಂಡವು ಕಣಕ್ಕಿಳಿಯುವ ಸಾಧ್ಯತೆ ಇದೆ. ಬ್ಯಾಟಿಂಗ್‌ನಲ್ಲಿಯೂ ಕೆಲವು ಸುಧಾರಣೆಗಳನ್ನು ಮಾಡಿಕೊಳ್ಳುವತ್ತಲೂ ತಂಡದ ವ್ಯವಸ್ಥಾಪಕರು ಚಿತ್ತ ನೆಟ್ಟಿದ್ದಾರೆ. ಏಕೆಂದರೆ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ವೈಫಲ್ಯ ಅನುಭವಿಸಿದ್ದಾರೆ. ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಮಧ್ಯಮ ಕ್ರಮಾಂಕದ ಶಿವಂ ದುಬೆ, ರಿಯಾನ್ ಪರಾಗ್ ಮತ್ತು ರಾಹುಲ್ ತೆವಾಟಿಯಾ ಅವರ ದಿಟ್ಟ ಬ್ಯಾಟಿಂಗ್‌ನಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತ್ತು. ಈ ಟೂರ್ನಿಯಲ್ಲಿ ಒಂದು ಶತಕ ದಾಖಲಿಸಿರುವ ಸಂಜು ಸ್ಯಾಮ್ಸನ್, ಆರಂಭಿಕ ಜೋಸ್ ಬಟ್ಲರ್, ಡೇವಿಡ್ ಮಿಲ್ಲರ್,ಮನನ್ ವೊಹ್ರಾ ಅವರ ವೈಫಲ್ಯವು ತಂಡವನ್ನು ಕಾಡುತ್ತಿದೆ.

ಕೋಲ್ಕತ್ತ ತಂಡದ ಪರಿಸ್ಥಿತಿಯೂ ಹೆಚ್ಚುಕಮ್ಮಿ ಇದೇ ರೀತಿಯದ್ದು. ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ದಿನೇಶ್ ಕಾರ್ತಿಕ್, ಪ್ಯಾಟ್ ಕಮಿನ್ಸ್ ಮತ್ತು ಆ್ಯಂಡ್ರೆ ರಸೆಲ್ ಅವರು ಅಮೋಘವಾಗಿ ಬ್ಯಾಟಿಂಗ್ ಮಾಡಿದ್ದರು. ಆದರೆ, ಅಗ್ರ ನಾಲ್ವರು ಬ್ಯಾಟ್ಸ್‌ಮನ್‌ಗಳು ನಿರಾಸೆ ಮೂಡಿಸಿದ್ದರು. ಬೌಲಿಂಗ್‌ನಲ್ಲಿ ಕಮಿನ್ಸ್ ದುಬಾರಿಯಾಗಿದ್ದರು. ಆದರೆ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರಿಂದ ಅವರು ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಅಬ್ಬರದ ಆಟಗಾರ ರಸೆಲ್ ಲಯಕ್ಕೆ ಮರಳಿರುವುದು ತಂಡದಲ್ಲಿ ಉತ್ಸಾಹ ಮೂಡಿಸಿದೆ. ಆದರೆ, ನಾಯಕ ಮಾರ್ಗನ್, ನಿತೀಶ್ ರಾಣಾ ಮತ್ತು ರಾಹುಲ್ ತ್ರಿಪಾಠಿ ಅವರು ಲಯಕ್ಕೆ ಮರಳಿದರೆ, ಬ್ಯಾಟಿಂಗ್ ವಿಭಾಗ ಸದೃಢವಾಗಬಹುದು. ಪ್ರಸಿದ್ಧಕೃಷ್ಣ, ಸ್ಪಿನ್ನರ್ ವರುಣ್ ಚಕ್ರವರ್ತಿ, ಕಮಲೇಶ್ ನಾಗರಕೋಟಿ ಮತ್ತು ಸುನಿಲ್ ನಾರಾಯಣ್ ಅವರು ಜೊತೆಯಾಟಗಳಿಗೆ ತಡೆಯೊಡ್ಡುವಲ್ಲಿ ಸಫಲರಾದರೆ ತಂಡವು ಗೆಲುವಿನ ಹಾದಿಗೆ ಮರಳುವ ಸಾಧ್ಯತೆ ಹೆಚ್ಚು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

'ಐಪಿಎಲ್‌ಗೆ ಜೋಫ್ರಾ ಇಲ್ಲ'

ಲಂಡನ್ (ಪಿಟಿಐ): ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ವೇಗದ ಬೌಲರ್ ಜೋಫ್ರಾ ಆರ್ಚರ್ ಆಡುವುದಿಲ್ಲ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಶುಕ್ರವಾರ ಪ್ರಕಟಿಸಿದೆ. ಇದು ಜೋಫ್ರಾ ಅವರು ಪ್ರತಿನಿಧಿಸುವ ಫ್ರಾಂಚೈಸ್ ರಾಜಸ್ಥಾನ ರಾಯಲ್ಸ್ ತಂಡದ ಕಳವಳ ಹೆಚ್ಚಿಸಿದೆ.

ಬಲಗೈಗೆ ಗಾಯವಾಗಿದ್ದ ಹಿನ್ನೆಲೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ 26 ವರ್ಷದ ಆರ್ಚರ್, ಈ ವಾರ ಬೌಲಿಂಗ್ ಅಭ್ಯಾಸಕ್ಕೆ ಮರಳಿದ್ದಾರೆ. ಇಸಿಬಿ ವೈದ್ಯಕೀಯ ತಂಡಗಳು ಅವರ ಪುನಶ್ಚೇತನದ ಮೇಲೆ ನಿಗಾ ವಹಿಸುವುದನ್ನು ಮುಂದುವರಿಸಿವೆ.

'ಆರ್ಚರ್ ಅವರು ಮುಂದಿನ ವಾರದಿಂದ ಸಂಪೂರ್ಣ ತರಬೇತಿಗೆ ಮರಳಲಿದ್ದಾರೆ. ಬೌಲಿಂಗ್ ಅಭ್ಯಾಸದಲ್ಲಿ ಅವರಿಗೆ ನೋವು ಕಾಣಿಸದಿದ್ದಲ್ಲಿ, ಮುಂದಿನ 15 ದಿನಗಳಲ್ಲಿ ಅವರು ಕ್ರಿಕೆಟ್‌ಗೆ ಮರಳುವ ನಿರೀಕ್ಷೆಯಿದೆ. ಅವರು ಯಾವ ಪಂದ್ಯಗಳಲ್ಲಿ ಆಡಲಿದ್ದಾರೆ ಎಂಬುದನ್ನು ನಾವು ಖಚಿತಪಡಿಸಲಿದ್ದೇವೆ' ಎಂದು ಇಸಿಬಿ ಹೇಳಿದೆ.

ಆರ್ಚರ್ ಅವರು ಫಿಶ್ ಟ್ಯಾಂಕ್ ಸ್ವಚ್ಛಗೊಳಿಸುವಾಗ ಗಾಯಗೊಂಡಿದ್ದು, ಬಲಗೈ ಸ್ನಾಯುವಿಗೆ ಚುಚ್ಚಿಕೊಂಡಿದ್ದ ಗಾಜಿನ ತುಂಡನ್ನು ಹೊರತೆಗೆಯಲು ಮಾರ್ಚ್ 29ರಂದು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	231
ಕೆ.ಎಲ್.ರಾಹುಲ್	ಪಂಜಾಬ್	221
ರೋಹಿತ್ ಶರ್ಮಾ	ಮುಂಬೈ	201

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಬೆಂಗಳೂರು	12
ರಾಹುಲ್ ಚಾಹರ್	ಮುಂಬೈ	9
ದೀಪಕ್ ಚಾಹರ್	ಚೆನ್ನೈ	8

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಬೆಂಗಳೂರು	4	4	-	-	-	8
ಚೆನ್ನೈ	4	3	1	-	-	6
ಡೆಲ್ಲಿ	4	3	1	-	-	6
ಮುಂಬೈ	5	2	3	-	-	4
ಪಂಜಾಬ್	5	2	3	-	-	4
ಹೈದರಾಬಾದ್	4	1	3	-	-	2
ಕೋಲ್ಕತ್ತ	4	1	3	-	-	2
ರಾಜಸ್ಥಾನ	4	1	3	-	-	2

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket